ಜನಮನದ ದನಿ


# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ




ಅಹಮ್ಮದಬಾದ್ ನಲ್ಲಿ ಇಂದು ಭಾರತ-ದಕ್ಷಿಣ ಆಫ್ರಿಕಾ ನಡುವಣ ಅಂತಿಮ ಟಿ-20 ಪಂದ್ಯ...


19 ಡಿಸೆಂಬರ್ 2025 ಶುಕ್ರವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 277 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ಶೀಘ್ರದಲ್ಲೇ ಪೃಥ್ವಿ ಅಂಬಾರ್ ನಟನೆಯ ಚೌಕಿದಾರ್ ತೆರೆಗೆ » 2





ಕಾಡಾನೆ-ಮಾನವ ಸಂಘರ್ಷ ಸಮಸ್ಯೆಗೆ ಶಾಶ್ವತ ಪರಿಹಾರ » 3





ನಿವೃತ್ತಿ ಹಂತದ ನ್ಯಾಯಾಧೀಶರಿಂದ ಆದೇಶ ತರವಲ್ಲ » 4


# ದ್ವೇಷ ಭಾಷಣ ವಿಧೇಯಕ ಅಂಗೀಕಾರ

## ಪ್ರತಿಪಕ್ಷಗಳ ವಿರೋಧದ ನಡುವೆಯೇ ಮಂಡನೆ ।ಮಸೂದೆ ಪ್ರತಿ ಹರಿದು ಆರ್.ಅಶೋಕ್ ಆಕ್ರೋಶ

• ಪ್ರಜೋದಯ ವರದಿ

**ಬೆಳಗಾವಿ:** ವಿರೋಧ ಪಕ್ಷ ಬಿಜೆಪಿ ಸದಸ್ಯರ ತೀವ್ರ ವಿರೋಧ, ಗದ್ದಲ, ಕೋಲಾಹಲದ ನಡುವೆಯೇ ತರಾತುರಿಯಲ್ಲಿ ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿಬಂಧಕ) ಮಸೂದೆ-2025 ಗೆ ವಿಧಾನಸಭೆ ಗುರುವಾರ ಅಂಗೀಕಾರ ನೀಡಿತು.

ಮಸೂದೆ ಮಂಡಿಸಿದ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಮಾತನಾಡಿ, ಇತ್ತೀಚೆಗೆ ಬಹಳಷ್ಟು ಜನರು ಸಮಾಜಕ್ಕೆ ನೋವಾಗುವ ರೀತಿಯಲ್ಲಿ ಮಾತುಗಳನ್ನು ಆಡುತ್ತಿದ್ದಾರೆ. ಇದರ ಪರಿಣಾಮ ಸಮಾಜದಲ್ಲಿ ಕೊಲೆಗಳು, ಹೊಡೆದಾಟಗಳು ನಡೆದಿವೆ. ಸಾಮಾಜಿಕ, ರಾಜಕೀಯ ಸಭೆಗಳಲ್ಲಿ ಆಡುವ ದ್ವೇಷದ ಮಾತುಗಳು ಮತ್ತೊಂದು ಸಮುದಾಯದ ಮೇಲೆ ಪರಿಣಾಮ ಬೀರುತ್ತಿದೆ. ದ್ವೇಷ ಭಾಷಣದಲ್ಲಿ ಮತ್ತೊಂದು ಸಮುದಾಯದ ಬಗ್ಗೆ ಕೆಟ್ಟ ಮಾತುಗಳನ್ನು ಆಡಲಾಗಿದೆ. ಸಮಾಜದ ಸಾಮರಸ್ಯ ಹದಗೆಡಿಸುವುದು ಮತ್ತು ದ್ವೇಷ ಹರಡುವಿಕೆಗೆ ಕಡಿವಾಣ ಹಾಕಲು ಮತ್ತು ಅಂತಹ ಅಪರಾಧಗಳನ್ನು ಎಸಗುವ ವ್ಯಕ್ತಿಗಳು, ಸಂಘಟನೆಯವರನ್ನು ಶಿಕ್ಷೆಗೆ ಗುರಿಪಡಿಸುವ ಉದ್ದೇಶದಿಂದ ಈ ಮಸೂದೆಯನ್ನು ರೂಪಿಸಲಾಗಿದೆ ಎಂದರು.

ಈಗಾಗಲೇ ಮುದ್ರಿತವಾಗಿರುವ ಪುಸ್ತಕ, ಗ್ರಂಥದಲ್ಲಿ ದ್ವೇಷದ ಮಾತುಗಳು ಇವೆ ಎಂದಾದರೆ ಏನು ಕ್ರಮ ಎಂದು ಸುನೀಲ್ ಕುಮಾರ್ ಪ್ರಶ್ನಿಸಿದರು. ಸ್ಪಷ್ಟನೆ ಕೊಟ್ಟ ಪರಮೇಶ್ವರ್, ಹಳೆ ಪುಸ್ತಕದಲ್ಲಿ ಇಂತಹ ಅಂಶಗಳು ಈ


» ನಾಲ್ಕನೇ ಪುಟದಲ್ಲಿ




### ವಿಧೇಯಕದಲ್ಲಿ ಶಿಕ್ಷೆಯ ಪ್ರಮಾಣ

ಮೊದಲ ಬಾರಿಗೆ ದ್ವೇಷ ಭಾಷಣ, ಅಪರಾಧಗಳಿಗೆ ಕನಿಷ್ಠ 1 ವರ್ಷ, ಗರಿಷ್ಠ 7 ವರ್ಷದವರೆಗೆ ಜೈಲು, 50 ಸಾವಿರ ರೂ. ದಂಡ. ಅಪ ರಾಧ ಪುನರಾವರ್ತನೆಯಾದರೆ ಕನಿಷ್ಠ 2 ವರ್ಷದಿಂದ ಗರಿಷ್ಠ 7 ವರ್ಷದವರೆಗೆ ಜೈಲು ಶಿಕ್ಷೆ, 1 ಲಕ್ಷ ರೂ. ದಂಡ. ದ್ವೇಷ ಭಾಷಣ ಮಾಡಿದರೆ ಅದು ಜಾಮೀನು ರಹಿತ ಪ್ರಕರಣವಾಗಲಿದೆ.

### ಸಾಮಾಜಿಕ ಬಹಿಷ್ಕಾರಕ್ಕೆ ಕಠಿಣ ದಂಡ-ಜೈಲು ಶಿಕ್ಷೆ



ಯಾವುದೇ ವ್ಯಕ್ತಿ, ಕುಟುಂಬದ ಸದಸ್ಯರನ್ನು ಸಾಮಾಜಿಕವಾಗಿ ಬಹಿಷ್ಕರಿಸಿದರೆ 1 ಲಕ್ಷ ರೂ.ವರೆಗೆ ದಂಡ, ಮೂರು ವರ್ಷದವರೆಗೆ ಜೈಲು ಶಿಕ್ಷೆ ಅಥವಾ ಎರಡನ್ನೂ ವಿಧಿಸಲು ಹಾಗು ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಳ್ಳಲು ಅವಕಾಶವಿರುವ ಮಸೂದೆಗೆ ವಿಧಾನಸಭೆ ಗುರುವಾರ ಪಕ್ಷಾತೀತವಾಗಿ ಅನುಮೋದನೆ ನೀಡಿತು. ಕರ್ನಾಟಕ ಸಾಮಾಜಿಕ ಬಹಿಷ್ಕಾರ (ಪ್ರತಿಬಂಧ, ನಿಷೇಧ ಮತ್ತು ಪರಿಹಾರ) ಮಸೂದೆಯನ್ನು ಮಂಡಿಸಿ ಮಾತನಾಡಿದ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು, ಸ್ವಾತಂತ್ರ್ಯ ಬಂದು 75 ವರ್ಷವಾದರೂ ಸಾಮಾಜಿಕವಾಗಿ ಬಹಿಷ್ಕಾರ ಹಾಕುವುದು ನಡೆದಿದೆ. ಇದು ಮಾನವ ಹಕ್ಕುಗಳ, ನಾಗರಿಕ ಹಕ್ಕುಗಳು ಉಲ್ಲಂಘನೆ. ಇದನ್ನು ನಿಷೇಧಿಸುವ ಐತಿಹಾಸಿಕ ಮಸೂದೆಯನ್ನು ರೂಪಿಸಲಾಗಿದೆ ಎಂದರು. ವಿರೋಧ ಪಕ್ಷ ನಾಯಕ ಆರ್.ಅಶೋಕ್ ಮಾತನಾಡಿ, 21ನೇ ಶತಮಾನದಲ್ಲಿ ನಾವೆಲ್ಲರೂ ಒಂದೇ ಎಂದು ಭಾಷಣ ಮಾಡಿದರೂ ನಿರ್ಬಂಧ, ತಾರತಮ್ಯ ಮುಂದುವರಿಸಿದೆ. ಹೋಟೆಲ್, ಕ್ಷೌರ ಸೇರಿ ಇತರೆ ಸೇವೆಗೆ ನಿರ್ಬಂಧಿಸುವುದು, ಬಹಿಷ್ಕಾರ ಹಾಕುವುದು ಅಕ್ಷಮ್ಯ. ಮುಂದೆ ಕಾಯ್ದೆ ಜಾರಿಯಾದಾಗ ಹಳ್ಳಿಗಳಲ್ಲಿ ದೊಡ್ಡ ಫಲಕಗಳನ್ನು ಅಳವಡಿಸಿ ನಿಷೇಧ, ದಂಡ, ಶಿಕ್ಷೆ ಬಗ್ಗೆ ಅರಿವು ಮೂಡಿಸಬೇಕೆಂದು ಸಲಹೆ ನೀಡಿದರು.

## 6297 ಕೋ.ರೂ. ಪೂರಕ ಅಂದಾಜು ಪಟ್ಟಿಗೆ ಅನುಮೋದನೆ

• ಪ್ರಜೋದಯ ವರದಿ

**ಬೆಳಗಾವಿ:** ಈ ಸಾಲಿನ ಮಾರ್ಚ್ ಅಂತ್ಯದವರೆಗಿನ ಎರಡನೇ ಕಂತಿನ ಬೇಡಿಕೆಗಳ ಮೇಲಿನ 6279.80 ಕೋ.ರೂ. ಪೂರಕ ಅಂದಾಜು ಪಟ್ಟಿಗೆ ವಿಧಾನಸಭೆ ಅನುಮೋದನೆ ನೀಡಿದೆ.

ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಗುರುವಾರ ಪೂರಕ ಅಂದಾಜು ಪಟ್ಟಿ ಮಂಡಿಸಿದರು. ಈ ವರ್ಷದ ಮುಂಗಾರು ಹಂಗಾಮಿನಲ್ಲಿ ಮಳೆ ಮತ್ತು ಪ್ರವಾಹದಿಂದಾಗಿ ಉಂಟಾದ ರೈತರ ಬೆಳೆ ಹಾನಿಗೆ ಪರಿಹಾರ ಒದಗಿಸಲು ಕೇಂದ್ರ ಮತ್ತು ರಾಜ್ಯ ವಿಪತ್ತು ಪರಿಹಾರ ನಿಧಿ ಮಾರ್ಗ ಸೂಚಿಗಿಂತಲೂ ಹೆಚ್ಚುವರಿಯಾಗಿ ಪ್ರತಿ ಹೆಕ್ಟೇರ್‌ಗೆ 8,500 ರೂ. ಪರಿಹಾರ ನೀಡಿದ್ದೇವೆ. ಈ ಹೆಚ್ಚುವರಿ ವೆಚ್ಚ ಭರಿಸಲು 1,015 ಕೋ.ರೂ. ಪೂರಕ ಅಂದಾಜಿನಲ್ಲಿ ಅವಕಾಶ ಮಾಡಿಕೊಡಲಾಗಿದೆ ಎಂದು ವಿವರಿಸಿದರು.

ಮಲೆನಾಡು ಮತ್ತು ಕರಾವಳಿ ಭಾಗದಲ್ಲಿ ಇತ್ತೀಚೆಗೆ ಗುಡ್ಡ ಮತ್ತು ಮಣ್ಣು ಕುಸಿತ ಆಗುತ್ತಿದೆ. ಅದನ್ನು ತಡೆಗಟ್ಟಲು ರಾಜ್ಯ ವಿಪತ್ತು ಉಪಶಮನ ನಿಧಿಗಾಗಿ 372 ಕೋ. ರೂ. ಒದಗಿಸಲಾಗುತ್ತಿದೆ. ಕಬ್ಬು ಬೆಳೆಗಾರರ ಹಿತ ಕಾಯಲು ರಾಜ್ಯ ಸರ್ಕಾರ ಹೆಚ್ಚುವರಿಯಾಗಿ ಪ್ರತಿ ಟನ್‌ಗೆ 50 ರೂ. ನೀಡುತ್ತಿದ್ದು, ಅದಕ್ಕಾಗಿ 300 ಕೋ. ರೂ. ಒದಗಿಸಲಾಗಿದೆ ಎಂದರು.

## ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಕಲೆಕ್ಷನ್ ಕಿಂಗ್: ಡಿ.ಕೆ.ಶಿವಕುಮಾರ್

• ಪ್ರಜೋದಯ ವರದಿ



**ಬೆಳಗಾವಿ:** ಕಾಂಗ್ರೆಸ್ ಹೈ ಕಮಾಂಡ್‌ಗಾಗಿ ರಾಜ್ಯ ಸರ್ಕಾರದ ಖಜಾನೆ ಖಾಲಿ ಮಾಡಿದ್ದಾರೆಂಬ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತಿಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿದ ಅವರು, ವಿಜಯೇಂದ್ರ ಒಬ್ಬ ಕಲೆಕ್ಷನ್ ಕಿಂಗ್, ಸದನದ ಅನುಭವವೂ ಇಲ್ಲ, ಜೀವನಾನುಭವವೂ ಇಲ್ಲ. ಮೊದಲು ಸರಿಯಾಗಿ ಸದನಕ್ಕೆ ಬಂದು ಪ್ರಶ್ನೆ ಮಾಡಲಿ. ತಪ್ಪಿಸಿಕೊಂಡು ಎಲ್ಲೆಲ್ಲೋ ಓಡಿ ಹೋಗುವುದಲ್ಲ. ಯಾವ ಖಜಾನೆ ಖಾಲಿ ಆಗಿದೆ, ಯಾವುದು ತುಂಬಿದೆ ಎಂದು ಉತ್ತರ ಕೊಡುತ್ತೇವೆಂದರು.

ಅವರಪ್ಪನ ಹೆಸರು ಕೆಡಿಸಿದ್ದು ವಿಜಯೇಂದ್ರ. ಅವರ ಟ್ರಾನ್ಸ್‌ಫರ್ ಕಲೆಕ್ಷನ್ ಎಷ್ಟು ಎಂದು ಬಿಚ್ಚಿಡಬೇಕಾ ಎಂದು ಪ್ರಶ್ನಿಸಿದರು. ವಿಧಾನಸಭೆ ಅಧಿ ವೇಶನದಲ್ಲಿ ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಸರಿಯಾಗಿ ಚರ್ಚಿಸಿಲ್ಲವೆಂಬ ವಿರೋಧ ಪಕ್ಷಗಳ ಆರೋಪ ಸರಿಯಲ್ಲ. ಮಹಾದಾಯಿ, ಮತ್ತಿತರ ನೀರಾವರಿ ಯೋಜನೆಗಳ ಕುರಿತು ನಾನು ಉತ್ತರಿಸಿದ್ದೇನೆ. ಅವರ ಪ್ರಶ್ನೆಗಳೂ ಏನೇ ಇದ್ದರೂ ಕೇಳಲಿ. ಮುಖ್ಯಮಂತ್ರಿ, ಕಂದಾಯ ಸಚಿವರು ಉತ್ತರ ನೀಡುತ್ತಾರೆಂದು ಪ್ರತಿಕ್ರಿಯಿಸಿದರು.

ಈ ಭಾಗದ ಕಬ್ಬು ಬೆಳೆಗಾರರಿಗೆ ನಮ್ಮ ಸರ್ಕಾರ ಈಗಾಗಲೇ ಸ್ಪಂದಿಸಿದೆ. ಹೆಚ್ಚುವರಿ ದರದಿಂದ ಸರ್ಕಾರಕ್ಕೂ, ಕಾರ್ಖಾನೆಗಳಿಗೂ ಹೊರೆಯಾಗಲಿದೆ. ಇದನ್ನು ರೈತರು ಅರ್ಥ ಮಾಡಿಕೊಳ್ಳಬೇಕು. ಮೆಕ್ಕೆಜೋಳ ಬೆಳೆದವರ ಸಮಸ್ಯೆಗೂ ಸ್ಪಂದಿಸಿದ್ದೇವೆ. ನಾವು ರೈತರ ಪರವಾಗಿಯೇ ಇದ್ದೇವೆಂದೂ ಹೇಳಿದರು.

## ಜಿಲ್ಲೆಯಲ್ಲಿ ಹದಗೆಟ್ಟ ಕಾನೂನು ವ್ಯವಸ್ಥೆ: ಕಲಾಪದಲ್ಲಿ ಪ್ರಸ್ತಾಪ

• ಪ್ರಜೋದಯ ವರದಿ

- ದಿನೇ ದಿನೇ ಹೆಚ್ಚುತ್ತಿವೆ ಕೊಲೆ, ಕಳ್ಳತನ, ಗಾಂಜಾ ಪ್ರಕರಣ
- ಕಠಿಣ ಕ್ರಮ ಕೈಗೊಳ್ಳುವಲ್ಲಿ ಪೊಲೀಸ್ ಇಲಾಖೆ ವಿಫಲ





**ಹಾಸನದಲ್ಲಿ ಕೊಲೆ, ಕಳ್ಳತನ ಪ್ರಕರಣ ನಡೆಯುತ್ತಿರುವುದು ಆತಂಕ ಸೃಷ್ಟಿಸಿದೆ. ಕಾನೂನು ಸುವ್ಯವಸ್ಥೆಯನ್ನು ಸರಿದಾರಿಗೆ ತರಬೇಕಾದ ಜವಾಬ್ದಾರಿ ಸರ್ಕಾರದ ಮೇಲಿದೆ. ದೇವಾಲಯಗಳಲ್ಲಿ ಕಳ್ಳತನ ಪ್ರಕರಣ ತಡೆಯಲು ಕಠಿಣ ಕ್ರಮ ತೆಗೆದುಕೊಳ್ಳಬೇಕು.**

**-ಸಿಮೆಂಟ್ ಮಂಜು, ಶಾಸಕ**



**ಹಾಸನ:** ಜಿಲ್ಲೆಯಲ್ಲಿ ಕಾನೂನು ವ್ಯವಸ್ಥೆ ಹದಗೆಟ್ಟು ದಿನೇದಿನೇ ಕೊಲೆ, ಕಳ್ಳತನ, ಗಾಂಜಾ ಪ್ರಕರಣಗಳು ಹೆಚ್ಚುತ್ತಿರುವ ಬಗ್ಗೆ ವಿಧಾನಸಭೆ ಚಳಿಗಾಲದ ಅಧಿವೇಶನದಲ್ಲೂ ಪ್ರಸ್ತಾಪಗೊಂಡು, ಸರ್ಕಾರ ಕಠಿಣ ಕ್ರಮಕ್ಕೆ ಸೂಚಿಸಬೇಕೆಂದು ಒತ್ತಾಯಿಸಲಾಗಿದೆ.

ಜಿಲ್ಲೆಯಲ್ಲಿ ರೌಡಿಶೀಟರ್‌ಗಳ ನಡುವೆ ಗಲಾಟೆ, ಕೊಲೆ, ಕೊಲೆಯತ್ನ, ಪುಡಿ ರೌಡಿಗಳ ನಡುವೆ ಗಲಾಟೆ, ವಿದ್ಯಾರ್ಥಿ ಗುಂಪುಗಳ ನಡುವೆ ಮಾರಾಮಾರಿ, ಮನೆ, ದೇವಸ್ಥಾನಗಳಲ್ಲಿ ಹಣ, ಚಿನ್ನಾಭರಣ ಕಳವು, ಕಾಫಿ ಫಸಲು ಕಳ್ಳತನ ಪ್ರಕರಣಗಳು ನಿರಂತರವಾಗಿ ನಡೆಯುತ್ತಿದ್ದರೂ ಪೊಲೀಸ್ ಇಲಾಖೆ ಕಠಿಣ ಕ್ರಮ ಕೈಗೊಳ್ಳಲು ವಿಫಲವಾಗಿರುವುದರಿಂದ ಅಪರಾಧ ಕೃತ್ಯಗಳು ಹೆಚ್ಚುತ್ತಲೇ ಇವೆ.

### ಸ್ಥಳೀಯರಲ್ಲಿ ಆತಂಕ

2025ನೇ ಸಾಲಿನ 11 ತಿಂಗಳ ಅವಧಿಯಲ್ಲಿ 34ಕ್ಕೂ ಹೆಚ್ಚು ಕೊಲೆಗಳು ಜಿಲ್ಲೆಯಲ್ಲಿ ನಡೆದಿವೆ. ಗಾಂಜಾ ಮಾರಾಟ, ನೂರಾರು ಕಳ್ಳತನ ಪ್ರಕರಣ, ಗಲಾಟೆಗಳು ಹಾಗು ಕಳೆದ ಒಂದು ತಿಂಗಳಲ್ಲಿ 10 ಕಾಫಿ ಕಳವು ಪ್ರಕರಣ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿವೆ. ಹಾಸನ ನಗರ ಪ್ರದೇಶದಲ್ಲೇ ಹೆಚ್ಚು ಅಪರಾಧ ಕೃತ್ಯಗಳು ನಡೆಯುತ್ತಿರುವುದು ಸ್ಥಳೀಯರಲ್ಲಿ ಆತಂಕ ಹುಟ್ಟಿಸಿದೆ. ವಾರದ ಹಿಂದೆಯಷ್ಟೇ ಯುವಕರ ಗುಂಪೊಂದು ಕುಡಿದ ಮತ್ತಿನಲ್ಲಿ ಸ್ನೇಹಿತನನ್ನು ಬರ್ಬರವಾಗಿ ಹತ್ಯೆ ಮಾಡಿ, ಸೆಲ್ಫಿ ವಿಡಿಯೋ ಮಾಡಿದ್ದ ಪ್ರಕರಣ ಮಾಸುವ ಮುನ್ನವೇ, ಗುರುವಾರ ರಾತ್ರಿ ರೌಡಿಶೀಟರ್ ಜೆಸಿಬಿ ಮಂಜನ ಮೇಲೆ 20ಕ್ಕೂ ಹೆಚ್ಚು ಜನರ ಗುಂಪು ಮಾರಾಕಾಸ್ತ್ರಗಳಿಂದ ದಾಳಿ ನಡೆಸಿ, ಕೊಲೆಗೆ ಯತ್ನಿಸಿದೆ. ಇದೇ ರೀತಿ ಹಾಸನ ನಗರದಲ್ಲಿ ಅಪರಾಧ ಕೃತ್ಯಗಳು ಹೆಚ್ಚುತ್ತಿದ್ದು, ಕಾನೂನು ವ್ಯವಸ್ಥೆ ಹದಗೆಟ್ಟಿದೆ ಎಂದು ಸಾರ್ವಜನಿಕರು ಪೊಲೀಸ್ ಇಲಾಖೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ಯವೈಖರಿ ವಿರುದ್ಧ ಅಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

### ಕಠಿಣ ಕ್ರಮಕ್ಕೆ ಅಧಿವೇಶನದಲ್ಲಿ ಒತ್ತಾಯ

ಸಕಲೇಶಪುರ ಕ್ಷೇತ್ರದ ಶಾಸಕ ಸಿಮೆಂಟ್ ಮಂಜು ಅವರು ಜಿಲ್ಲೆಯಲ್ಲಿ ನಡೆಯುತ್ತಿರುವ ಕೊಲೆ, ಕಳ್ಳತನ, ಅಕ್ರಮ ಚಟುವಟಿಕೆಗಳ ಬಗ್ಗೆ ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಪ್ರಸ್ತಾಪ ಮಾಡಿ, ಜಿಲ್ಲಾ ಪೊಲೀಸ್ ಇಲಾಖೆ ಕಠಿಣ ಕ್ರಮ ಕೈಗೊಳ್ಳಲು ಸರ್ಕಾರ ಸೂಚಿಸಬೇಕೆಂದು ಒತ್ತಾಯಿಸಿದ್ದಾರೆ.

ಹಾಸನ ಬಿಟ್ಟಗೌಡಹಳ್ಳಿ ವೃತ್ತದಲ್ಲಿ ಹಾಡಹಗಲೇ ಯುವಕನನ್ನು ಹತ್ಯೆ ಮಾಡಿ, ದುಷ್ಕೃತ್ಯವನ್ನು ಸೆಲ್ಫಿ ವಿಡಿಯೋ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡಲಾಗಿದೆ. ತಂದೆ-ತಾಯಿಯನ್ನು ನೋಡಿಕೊಳ್ಳಬೇಕಾದ 20-22ನೇ ವಯಸ್ಸಿನ ಯುವಕರು ನಗರ ಪ್ರದೇಶದಲ್ಲಿ ಕೊಲೆಯಾಗುತ್ತಿರುವುದು ಆತಂಕ ಸೃಷ್ಟಿಸಿದೆ. ಹೀಗಾಗಿ ಕಾನೂನು ಸುವ್ಯವಸ್ಥೆಯನ್ನು ಸರಿದಾರಿಗೆ ತರಬೇಕಾದ ಜವಾಬ್ದಾರಿ ಸರ್ಕಾರದ ಮೇಲಿದೆ. ದೇವಾಲಯದಲ್ಲಿ ಕಳ್ಳತನ ಪ್ರಕರಣ ಹೆಚ್ಚುತ್ತಿವೆ. ದೇವರ ಮೂರ್ತಿ, ಹುಂಡಿಯಲ್ಲಿದ್ದ ಹಣ ಕಳ್ಳತನ ನಡೆಯುತ್ತಿದೆ. ಈ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಜಿಲ್ಲೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಗಾಂಜಾ ಮಾರಾಟ ಮತ್ತು ಸೇವನೆ ಪ್ರಕರಣಗಳು ಹೆಚ್ಚುತ್ತಿವೆ. ಕಳೆದ 11 ತಿಂಗಳ ಅವಧಿಯಲ್ಲಿ ಒಟ್ಟು 135 ಕೆ.ಜಿ. ಗಾಂಜಾ ಸೊಪ್ಪನ್ನು ವಶಪಡಿಸಿಕೊಳ್ಳಲಾಗಿದೆ. ಈ ಹಿಂದೆ ಗಾಂಜಾ ಸೇವನೆ ಮಾಡಿದ ಯುವಕರ ಗುಂಪು ಬುದ್ಧಿಮಾಂದ್ಯ ಯುವತಿ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿ, ಕೃತ್ಯವನ್ನು ವಿಡಿಯೋ ಚಿತ್ರೀಕರಣ ಮಾಡಿಕೊಂಡಿದ್ದ ಹೀನ ಕೃತ್ಯ ಬೆಳಕಿಗೆ ಬಂದಿತ್ತು. ಇದಾದ ಬಳಿಕ ಹಾಸನ, ಹೊಳೆನರಸೀಪುರ, ಬೇಲೂರು, ಸಕಲೇಶಪುರ ತಾಲ್ಲೂಕು ಭಾಗದಲ್ಲಿ ಅಪಾರ ಪ್ರಮಾಣದಲ್ಲಿ ಗಾಂಜಾ ವಶಪಡಿಸಿಕೊಂಡು, ಹಲವರನ್ನು ಬಂಧಿಸಲಾಗಿತ್ತು. ಆದರೂ ಗಾಂಜಾ ಸೇವನೆ ಮತ್ತು ಮಾರಾಟ ನಿಯಂತ್ರಣಕ್ಕೆ ತರಲು ಸಾಧ್ಯವಾಗಿಲ್ಲ.

# ಪಾಲಿಕೆ ಬಜೆಟ್ ಸಭೆಯಲ್ಲಿ ಸಮಸ್ಯೆಗಳ ಸುರಿಮಳೆ

## ಮನವಿಗೆ ಸ್ಪಂದಿಸದ ಅಧಿಕಾರಿಗಳ ವಿರುದ್ಧ ಆಕ್ರೋಶ । ರಸ್ತೆ, ಪಾರ್ಕಿಂಗ್, ಫ್ಲೈಓವರ್, ಮೂಲಸೌಕರ್ಯಕ್ಕೆ ಬೇಡಿಕೆ

• ಪ್ರಜೋದಯ ವರದಿ





**ಹಾಸನ:** ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿದ ನಂತರ ನಡೆದ ಮೊದಲ ಬಜೆಟ್ ತಯಾರಿ ಪೂರ್ವ ಸಭೆಯಲ್ಲಿ ಸಾರ್ವಜನಿಕರಿಂದ ಸಮಸ್ಯೆಗಳ ಸುರಿಮಳೆ, ವಾಗ್ವಾದ, ಗದ್ದಲವೇ ಜೋರಾಗಿತ್ತು.

ಪಾಲಿಕೆಯ ಕುವೆಂಪು ಸಭಾಂಗಣದಲ್ಲಿ ಗುರುವಾರ ನಡೆದ 2026-27ನೇ ಸಾಲಿನ ಪಾಲಿಕೆ ಆಯವ್ಯಯ ತಯಾರಿ ಕುರಿತ ಮೊದಲ ಹಂತದ ಸಾರ್ವಜನಿಕ ಸಮಾಲೋಚನಾ ಸಭೆಯಲ್ಲಿ ನೂರಾರು ಸಾರ್ವಜನಿಕರು ಭಾಗವಹಿಸಿ ತಮ್ಮ ಸಮಸ್ಯೆಗಳನ್ನು ಅಧಿಕಾರಿಗಳ ಮುಂದೆ ಮಂಡಿಸಿದರು. ಸಭೆಯಲ್ಲಿ ಭಾಗವಹಿಸಿದ್ದ ಬಹುತೇಕರು ತಮ್ಮ ವಾರ್ಡ್‌ಗಳ ಮೂಲಭೂತ ಸಮಸ್ಯೆಗಳನ್ನು ಆದ್ಯತೆಯಾಗಿ ಪ್ರಸ್ತಾಪಿಸಿದರು. ಹತ್ತಾರು ಸಮಸ್ಯೆಗಳ ಬಗ್ಗೆ ವ್ಯಾಪಕ ಚರ್ಚೆ ನಡೆಯಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಮಹಾನಗರ ಪಾಲಿಕೆ ಆಡಳಿತಾಧಿಕಾರಿ ನಿತೀಶ್‌ಪಟೇಲ್, ಆಯುಕ್ತ ಕೃಷ್ಣಮೂರ್ತಿ ಮೊದಲಾದವರು ಮನವಿ ಆಲಿಸಿ, ಸಾಧ್ಯವಾದಷ್ಟು ಶೀಘ್ರ ಪರಿಶೀಲನೆ ಮಾಡಿ, ಪರಿಹಾರಕ್ಕೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ನಗರದ ಅನೇಕ ವೃತ್ತಗಳಲ್ಲಿ ರಸ್ತೆ ದಾಟುವುದು ಅತಿ ಕಷ್ಟಕರವಾಗಿದೆ. ಪಾದಚಾರಿಗಳ ಸುರಕ್ಷತೆಗೆ ಫ್ಲೈಓವರ್‌ಗಳ ಅಗತ್ಯವಿದೆ. ಅಂಬೇಡ್ಕರ್ ವೃತ್ತಗಳಲ್ಲಿ ಪ್ರತಿಮೆ ಸ್ಥಾಪನೆ, ಪರಿಶಿಷ್ಟ ಜಾತಿ-ಪಂಗಡದವರಿಗೆ ಟೈಲರಿಂಗ್ ಮಿಷನ್‌ಗಳ ವಿತರಣೆ ಮಾಡಬೇಕೆಂದು ಸ್ಥಳೀಯರು ಒತ್ತಾಯಿಸಿದರು.

ಪಾದಚಾರಿ ಮಾರ್ಗಗಳಲ್ಲಿ ಯುಜಿಡಿ ಸರಿಯಾಗಿ ಮುಚ್ಚಿಲ್ಲ, ಮೂಲಭೂತ ಸಮಸ್ಯೆಗಳು ಹಲವು ವರ್ಷಗಳಿಂದ ಬಗೆಹರಿಯದೇ ಉಳಿದಿವೆ. ಇಂತಹ ಸ್ಥಿತಿಯಲ್ಲಿ ನಾಗರಿಕರು ತೆರಿಗೆ ಮತ್ತು ಸುಂಕಗಳನ್ನು ಏಕೆ ಪಾವತಿಸಬೇಕೆಂದು ಪ್ರಶ್ನಿಸಿದರು.

### ಪರ-ವಿರೋಧ ಹೇಳಿಕೆಗೆ ಆಕ್ಷೇಪ

ಸಭೆಯಲ್ಲಿ ಕೆಲವು ವಿಚಾರಗಳಲ್ಲಿ ಅಧಿಕಾರಿಗಳ ಪರ-ವಿರೋಧ ಹೇಳಿಕೆ ಹೆಚ್ಚಾಗಿ ಪರಿಸ್ಥಿತಿ ಬಿಗುವು ಪಡೆಯಿತು. ಪೊಲೀಸರು ಮಧ್ಯ ಪ್ರವೇಶಿಸಿ ಶಾಂತಿ ಕಾಪಾಡಿದರು. ಕೆರೆ ಸ್ವಚ್ಛಗೊಳಿಸಲು ಜಿಲ್ಲಾಧಿಕಾರಿ, ತಹಸೀಲ್ದಾರ್ ಮತ್ತು ಆಯುಕ್ತರಿಗೆ ಮನವಿ ಸಲ್ಲಿಸಿದ್ದರೂ ಸ್ಪಂದನೆ ಸಿಕ್ಕಿಲ್ಲವೆಂದು ದೂರಿದರು. ಅಧಿಕಾರಿಗಳನ್ನು ಗುರಿಯಾಗಿಸಿ ಮಾತನಾಡಬಾರದೆಂದು ಕೆಲವರು ಆಕ್ಷೇಪ ವ್ಯಕ್ತಪಡಿಸಿದಾಗ ಸಭೆಯಲ್ಲಿ ಗೊಂದಲ ಉಂಟಾಯಿತು.

ಬಿ.ಕಾಟೀಹಳ್ಳಿಯ ಮುಖ್ಯ ರಸ್ತೆಯಲ್ಲಿ ಪೈಪ್ ಒಡೆದು ನೀರು ವ್ಯರ್ಥವಾಗುತ್ತಿದೆ, ಬಸ್ ತಂಗುದಾಣ ದ್ವಿಚಕ್ರ ವಾಹನ ಪಾರ್ಕಿಂಗ್ ಸ್ಥಳವಾಗಿದ್ದು, ಪ್ರಯಾಣಿಕರಿಗೆ ತೊಂದರೆಯಾಗಿದೆ. ಮನವಿ ಸಲ್ಲಿಸಿದರೂ ಯಾರೂ ಸ್ಪಂದಿಸಿಲ್ಲವೆಂದು ಸ್ಥಳೀಯರು ದೂರಿದರು.

ನಗರದ ವಿವಿಧ ಭಾಗಗಳಲ್ಲಿ ಅಂಗಡಿ ಮಾಲೀಕರು ಪಾದಚಾರಿ ಮಾರ್ಗಗಳನ್ನು ಆಕ್ರಮಿಸಿಕೊಂಡಿದ್ದು, ಸಾರ್ವಜನಿಕರು ಓಡಾಡದಂತಾಗಿದೆ. ಒತ್ತುವರಿ ತೆರವುಗೊಳಿಸಿ ಪಾದಚಾರಿಗಳಿಗೆ ಅನುಕೂಲ ಕಲ್ಪಿಸಬೇಕೆಂಬ ಮನವಿ ಕೇಳಿ ಬಂತು. ಎಎಪಿ ಮುಖಂಡ ಅಗಿಲೆ ಯೋಗೀಶ್ ಅವರು ಮಾತನಾಡಿ, ಮಹಾನಗರ ಪಾಲಿಕೆಯ ಕೆಲವು ಅಧಿಕಾರಿಗಳು, ಕೆಲಸದ ಒತ್ತಡದಿಂದ ಕೆಳ ಹಂತದ ಅಧಿಕಾರಿಗಳು ಹಾಗು ಸಾರ್ವಜನಿಕರೊಂದಿಗೆ


» ನಾಲ್ಕನೇ ಪುಟದಲ್ಲಿ


## ರಾಜ್ಯದಲ್ಲಿ 7,76,206 ಶಂಕಾಸ್ಪದ ಪಡಿತರ ಕಾರ್ಡ್

• ಪ್ರಜೋದಯ ವರದಿ

**ಹಾಸನ:** ಕೇಂದ್ರ ಸರ್ಕಾರವು ರಾಜ್ಯಾದ್ಯಂತ 7,76,206 ಪಡಿತರ ಕಾರ್ಡ್‌ಗಳನ್ನು ಶಂಕಾಸ್ಪದ ಪಡಿತರ ಫಲಾನುಭವಿಗಳ ಪಟ್ಟಿಗೆ ಸೇರಿಸಿದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಹೆಚ್.ಮುನಿಯಪ್ಪ ಹೇಳಿದ್ದಾರೆ.

ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಶಾಸಕ ಸಿ.ಎನ್.ಬಾಲಕೃಷ್ಣ ಅವರು ಕೇಳಿದ ಶ್ರವಣಬೆಳ ಗೊಳ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಬಿಪಿಎಲ್ ಪಡಿತರ ಚೀಟಿಗಳು ಎಪಿಎಲ್ ಪಡಿತರ ಚೀಟಿಗಳಾಗಿ ಪರಿವರ್ತನೆಯಾಗಿವೆ ಎಂಬ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದರು.

ಶ್ರವಣಬೆಳಗೊಳ ಕ್ಷೇತ್ರ ವ್ಯಾಪ್ತಿಯಲ್ಲಿ 930 ಬಿಪಿಎಲ್ ಚೀಟಿಗ ಳನ್ನು ಎಪಿಎಲ್‌ಗೆ ಪರಿವರ್ತಿಸಲಾಗಿದೆ. ಈ ರೀತಿ ತಾತ್ಕಾ ಲಿಕವಾಗಿ ಪರಿವರ್ತನೆಯಾದ ಚೀಟಿದಾರರು ಪುನ: ಬಿಪಿಎಲ್‌ಗೆ ವರ್ಗಾ ವಣೆಯಾಗಬೇಕೆಂದರೆ ಸೂಕ್ತ ದಾಖಲೆಗಳೊಂದಿಗೆ 45 ದಿನಗಳ ಒಳಗೆ ತಹಶೀಲ್ದಾರ್‌ಗೆ ಮನವಿ ಸಲ್ಲಿಸಬೇಕು. ಅರ್ಜಿ ದಾರರು ಅರ್ಹರಾಗಿ ದ್ದರೆ ಅಧಿಕಾರಿಗಳು ಅದನ್ನು ಬದಲಿಸುತ್ತಾರೆಂದು ಸಚಿವರು ಹೇಳಿದರು.

# ರೌಡಿಶೀಟರ್ ಜೆಸಿಬಿ ಮಂಜು ಹತ್ಯೆಗೆ ಯತ್ನ

## ಜಲ್ಲಿ, ಇಟ್ಟಿಗೆ ನೀಡಿದ್ದ ಹಣದ ವಿಚಾರಕ್ಕೆ ಗಲಾಟೆ : ಮಾರಕಾಸ್ತ್ರಗಳಿಂದ ಹಲ್ಲೆ

• ಪ್ರಜೋದಯ ವರದಿ



**ಹಾಸನ:** ರೌಡಿಶೀಟರ್ ಜೆಸಿಬಿ ಮಂಜು ಅಲಿಯಾಸ್ ಮಂಜುನಾಥನ ಮೇಲೆ ಗ್ಯಾಂಗ್ ಮಾರಕಾಸ್ತ್ರಗಳಿಂದ ದಾಳಿ ನಡೆಸಿ ಕೊಲೆಗೆ ಯತ್ನಿಸಿರುವ ಘಟನೆ ಗುರುವಾರ ರಾತ್ರಿ ನಗರದ ರಿಂಗ್ ರಸ್ತೆಯಲ್ಲಿ ನಡೆಸಿದೆ.

ಯೋಗಿಹಳ್ಳಿಯ ರಾಜಿ ಅಲಿಯಾಸ್ ರಾಜೇಶ, ಆತನ ತಮ್ಮ ಅಶೋಕ, ಬಂಡಿಹಳ್ಳಿಯ ರೂಪೇಶ ಹಲ್ಲೆ ನಡೆಸಿದ ಆರೋಪಿಗಳು. ಜೆಸಿಬಿ ಮಂಜು ಮನೆಯಲ್ಲಿದ್ದಾಗ ಸ್ನೇಹಿತ ಯೋಗಿಹಳ್ಳಿಯ ರಾಜೇಶ ಕರೆ ಮಾಡಿ, ನಿನ್ನ ಹತ್ತಿರ ಮಾತನಾಡಬೇಕು, ರಿಂಗ್ ರಸ್ತೆಯಲ್ಲಿರುವ ವೈನ್ಸ್‌ವೊಂದರ ಬಳಿ ಬರುವಂತೆ ಕರೆದಿದ್ದಾನೆ. ಅಲ್ಲಿಗೆ ಮಂಜು ಬಂದ ನಂತರ ರಾಜೇಶ, ಅಶೋಕ, ರೂಪೇಶನ ನಡುವೆ ಹಣಕಾಸಿನ ವಿಚಾರಕ್ಕೆ ಜಗಳ ತೆಗೆದು ಕೊಲೆಗೆ ಯತ್ನಿಸಿದ್ದಾರೆ.

ಜಲ್ಲಿ ಮತ್ತು ಇಟ್ಟಿಗೆ ನೀಡಿದ್ದ ಹಣದ ವಿಚಾರಕ್ಕೆ ಸಂಬಂಧಿಸಿದಂತೆ ರಾಜೇಶ ಮತ್ತು ನಿಡೂಡಿ ರವಿಯ ಮಧ್ಯೆ ವರ್ಷದ ಹಿಂದೆ ಗಲಾಟೆಯಾಗಿತ್ತು. ಈ ವಿಚಾರ ಜೆಸಿಬಿ ಮಂಜುನ ಸಮ್ಮುಖದಲ್ಲಿ ರಾಜಿ, ಪಂಚಾಯಿತಿ ಮಾಡಿ ರವಿಗೆ ಹಣ ಕೊಡುವಂತೆ ತೀರ್ಮಾನ ಮಾಡಲಾಗಿತ್ತು. ಈವರೆಗೂ ರಾಜೇಶ್ ಹಣ ಕೊಟ್ಟಿರಲಿಲ್ಲ. ರವಿಗೆ ಹಣ ಕೊಡುವಂತೆ ರಾಜೇಶನಿಗೆ ಹೆದರಿಸಲಾಗಿತ್ತು. ಇದೇ ವಿಚಾರವಾಗಿ ದ್ವೇಷ ಇಟ್ಟುಕೊಂಡು ರಾಜೇಶ್, ಜೆಸಿಬಿ ಮಂಜುನನ್ನು ಬುಧವಾರ ರಾತ್ರಿ ಕರೆಸಿಕೊಂಡು, ರವಿಗೆ ಹಣ ಕೊಡು ಎಂದು ಹೇಳಲು ನೀನು ಯಾರೆಂದು ಹಲ್ಲೆಗೆ ಮುಂದಾಗಿದ್ದಾರೆ. ಈ ವೇಳೆ ತಪ್ಪಿಸಿಕೊಂಡು ಓಡಲು ಯತ್ನಿಸಿದಾಗ, ಭರ್ಜಿಯಿಂದ ಕುತ್ತಿಗೆ ಹತ್ತಿರ ಗದ್ದಕ್ಕೆ ಚುಚ್ಚಿ ಹತ್ಯೆಗೆ ಯತ್ನಿಸಿ, ಮಾರಾಣಾಂತಿಕ ಹಲ್ಲೆ ನಡೆಸಿದ್ದಾರೆ. ಸ್ವಲ್ಪದರಲ್ಲೇ ಪ್ರಾಣಾಪಾಯದಿಂದ ಪಾರಾದ ಜೆಸಿಬಿ ಮಂಜು ನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾನೆ. ಈ ಸಂಬಂಧ ನಗರದ ಬಡಾವಣೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ನಾಳೆ ಕಾಫಿ ಸಂಶೋಧನಾ ಸಂಸ್ಥೆ ಶತಮಾನೋತ್ಸವ

• ಪ್ರಜೋದಯ ವರದಿ



**ಹಾಸನ :** ಕೇಂದ್ರೀಯ ಕಾಫಿ ಸಂಶೋಧನಾ ಸಂಸ್ಥೆಯ 100ನೇ ವರ್ಷದ ಶತಮಾನೋತ್ಸವ ಹಿನ್ನಲೆಯಲ್ಲಿ ಡಿ.20 ರಿಂದ 3 ದಿನಗಳ ಕಾಲ ವಿವಿಧ ಕಾರ್ಯಕ್ರಮ ಹಮ್ಮಿ ಕೊಳ್ಳಲಾಗಿದೆ ಎಂದು ಸದಸ್ಯ ಎನ್.ಬಿ.ಉದಯಕುಮಾರ್ ಅವರು ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1925ರಲ್ಲಿ ಚಿಕ್ಕಮಗಳೂರು ಜಿಲ್ಲೆ ಬಾಳೆಹೊನ್ನೂರಿನಲ್ಲಿ ಸ್ಥಾಪನೆಯಾದ ಈ ಸಂಸ್ಥೆ ಕಾಫಿ ಬೆಳೆಯಲ್ಲಿ ಪ್ರಗತಿ ಕಾಣಲು ಸಾಕಷ್ಟು ಕೊಡುಗೆ ನೀಡಿದೆ. ಇದೀಗ ಶತಮಾನೋತ್ಸವ ಸಂಭ್ರಮದಲ್ಲಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಡಿ.20ರಂದು ಬೆಳಿಗ್ಗೆ 10 ಗಂಟೆಗೆ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಸಮಾರಂಭ ಉದ್ಘಾಟಿಸಲಿದ್ದಾರೆ. ಸಚಿವರಾದ ಕೆ.ಜೆ.ಜಾರ್ಜ್, ಎಸ್.ಎಸ್.ಮಲ್ಲಿಕಾರ್ಜುನ ಸೇರಿ ಚಿಕ್ಕಮಗಳೂರು, ಹಾಸನ, ಮಡಿಕೇರಿ ಹಾಗು ಮೈಸೂರು ಜಿಲ್ಲೆಯ ಶಾಸಕರು, ಸಂಸದರು ಸೇರಿ ಎಲ್ಲಾ ಜನಪ್ರತಿನಿಧಿಗಳು ಭಾಗಿಯಾಗಲಿದ್ದಾರೆ. ಉದ್ಘಾಟನೆ ನಂತರ ವಸ್ತು ಪ್ರದರ್ಶನ ಇರಲಿದೆ. ಬಳಿಕ ವೈಜ್ಞಾನಿಕ ಪ್ರಗತಿ ಮತ್ತು ಕಾಫಿ ಉತ್ಪಾದನೆಯಲ್ಲಿ ರೈತರ ಪಾತ್ರ, ಸುಸ್ಥಿರ ಕಾಫಿ ಉತ್ಪಾದನಾ ತಂತ್ರಜ್ಞಾನಗಳು ಉದಯೋನ್ಮುಖ ಪ್ರವೃತ್ತಿಗಳು, ಬದಲಾಗುತ್ತಿರುವ ಹವಾಮಾನ ಪರಿಸ್ಥಿತಿಯಲ್ಲಿ

ಮಣ್ಣಿನ ಆರೋಗ್ಯ-ಸೂಕ್ಷ್ಮಜೀವಿ ಪರಿಹಾರಗಳು ಮತ್ತು ಸುಧಾರಿತ ಕೀಟ ನಿರ್ವಹಣಾ ವ್ಯವಸ್ಥೆ, ಕಾಫಿಯಲ್ಲಿ ಹವಾಮಾನ ಬದಲಾವಣೆಯ ಪರಿಣಾಮಗಳು ಸಮರ್ಥವಾಗಿ ಎದುರಿಸುವುದು, ಮಾನವ- ಪ್ರಾಣಿ ಸಂಘರ್ಷ ಹೀಗೆ ಸಭಾಂಗಣ ಮತ್ತು ಮುಖ್ಯ ವೇದಿಕೆಯಲ್ಲಿ ಕಾಫಿ ಉತ್ಪಾದನೆ-ಉದ್ಯಮಕ್ಕೆ ಎದುರಾಗಿರುವ ಸಮಸ್ಯೆ, ಪರಿಹಾರ, ಉದ್ಯಮ ಅಭಿವೃದ್ಧಿಪಡಿಸುವ ಬಗ್ಗೆ ಒಟ್ಟು 10 ಗೋಷ್ಠಿಗಳನ್ನು ಆಯೋಜನೆ ಮಾಡಲಾಗಿದೆ. ತಜ್ಞರು ವಿಷಯ ಮಂಡನೆ ಮಾಡಲಿದ್ದಾರೆಂದು ತಿಳಿಸಿದರು.

ಡಿ.22 ರಂದು ಸಮಾರೋಪ ಸಮಾರಂಭ ನಡೆಯಲಿದ್ದು, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಭಾಗವಹಿಸುವರು. ಸಮಾರಂಭದಲ್ಲಿ ಹೊಸ ತಳಿ, ಹೊಸ ತಂತ್ರಜ್ಞಾನ ಬಿಡುಗಡೆ ಮಾಡುವುದರ ಜೊತೆಗೆ ಕಾಫಿ ಸಂಶೋಧನೆ-ಉತ್ಪಾದನೆಗೆ ಹಲವು ರೀತಿಯಲ್ಲಿ ನೆರವಾಗುತ್ತಿರುವ ವಿಜ್ಞಾನಿಗಳಿಗೆ ಕೃತಜ್ಞತೆ ಸಲ್ಲಿಸಲಾಗುವುದು. ಎಲ್ಲರಿಗೂ ನೋಂದಣಿ ಉಚಿತ ಇರಲಿದೆ ಎಂದು ಹೇಳಿದರು.

## ಮಾ.18 ರಿಂದ ಪರೀಕ್ಷೆ ಆರಂಭ । ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ದತ್ತು ಪಡೆದ ಶಿಕ್ಷಕರು

# ಉತ್ತಮ ಫಲಿತಾಂಶಕ್ಕಾಗಿ 4 ಪ್ರಾಯೋಗಿಕ ಪರೀಕ್ಷೆ

• ಪ್ರಜೋದಯ ವರದಿ



**ಹಾಸನ:** ಈ ಬಾರಿಯ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಬರಬೇಕೆಂಬ ನಿಟ್ಟಿನಲ್ಲಿ ಅವಿರತ ಶ್ರಮ ವಹಿಸುತ್ತಿರುವ ಸಾರ್ವಜನಿಕ ಶಿಕ್ಷಣ ಇಲಾಖೆ ಇದೇ ಮೊದಲ ಬಾರಿಗೆ 4 ಪ್ರಾಯೋಗಿಕ ಪರೀಕ್ಷೆ ನಡೆಸಲು ಸಿದ್ಧತೆ ನಡೆಸಿದೆ.

ಶಿಕ್ಷಣ ಇಲಾಖೆಯೇ ನಡೆಸುವ 3 ಪೂರ್ವ ಸಿದ್ಧತಾ ಪರೀಕ್ಷೆಗಳ ಹೊರತಾಗಿ ಹೆಚ್ಚುವರಿಯಾಗಿ 4 ಪರೀಕ್ಷೆಗಳನ್ನು ನಡೆಸುವ ಮೂಲಕ ಮಕ್ಕಳಲ್ಲಿ ಪರೀಕ್ಷಾ ಭಯ ಹೋಗಲಾಡಿಸಲು ಕ್ರಮ ಕೈಗೊಳ್ಳಲಾಗಿದೆ. ಈ ನಿಟ್ಟಿನಲ್ಲಿ ಎಲ್ಲಾ ಶಿಕ್ಷಕರು, ಇಲಾಖೆ ಅಧಿಕಾರಿಗಳು ಮುತುವರ್ಜಿಯಿಂದ ಕೆಲಸ ಮಾಡುತ್ತಿದ್ದಾರೆ. ಡಿಸೆಂಬರ್ ಅಂತ್ಯಕ್ಕೆ ಪಠ್ಯ ಬೋಧನೆ ಮುಗಿಯಲಿದ್ದು, ಮುಂದಿನ ಮೂರು ತಿಂಗಳು ಎಸ್‌ಎಸ್‌ಎಲ್‌ಸಿ ಮಕ್ಕಳನ್ನು ಸಂಪೂರ್ಣ ಪರೀಕ್ಷೆಯಲ್ಲಿ ಮಗ್ನರಾಗಿರುವಂತೆ ನೋಡಿಕೊಳ್ಳಲಾಗುತ್ತಿದೆ.

### ಈ ಬಾರಿ 19,800 ವಿದ್ಯಾರ್ಥಿಗಳು

ಜಿಲ್ಲೆಯಲ್ಲಿ 240 ಸರ್ಕಾರಿ, 39 ಮೊರಾರ್ಜಿ ದೇಸಾಯಿ ವಸತಿ ಶಾಲೆ, ಅನುದಾನಿತ 118 ಹಾಗು 142 ಖಾಸಗಿ ಸೇರಿ 539 ಪ್ರೌಢ ಶಾಲೆಗಳಿದ್ದು, ಒಟ್ಟು 19,800 ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲು ಸಜ್ಜಾಗಿದ್ದಾರೆ. ಮಾ.18 ರಿಂದ ರಾಜ್ಯಾದ್ಯಂತ ಪರೀಕ್ಷೆಗಳು ಪ್ರಾರಂಭವಾಗಲಿವೆ. ಈಗಾಗಲೇ ಎಫ್-1, ಎಫ್-2, ಎಫ್-3 ಪರೀಕ್ಷೆ ಮುಗಿದಿದ್ದು, ಜನವರಿಯಲ್ಲಿ ಎಫ್-4 ಪರೀಕ್ಷೆ ನಡೆಯಲಿದೆ. ಈ ಪರೀಕ್ಷೆಗಳಲ್ಲಿ ವಿಷಯವಾರು ಕಡಿಮೆ ಅಂಕ ಗಳಿಸುವ ವಿದ್ಯಾರ್ಥಿಗಳನ್ನು ಕೇಂದ್ರೀಕರಿಸಿ ತರಬೇತಿ ನೀಡಲು ನಿರ್ಧರಿಸಲಾಗಿದೆ.

ಕಳೆದ ವರ್ಷ ರಾಜ್ಯಕ್ಕೆ 3ನೇ ಸ್ಥಾನ ಪಡೆದಿದ್ದ ಹಾಸನ ಈ ಬಾರಿ ನಂಬರ್ 1ರಲ್ಲಿರಬೇಕೆನ್ನುವುದು ಇಲಾಖೆ ಅಧಿಕಾರಿಗಳ ಗುರಿಯಾಗಿದೆ. ಶೂನ್ಯ ಫಲಿತಾಂಶ ಸಾಧಿಸುವ ಶಾಲೆಗಳ ಸಂಖ್ಯೆಯಲ್ಲಿ ಜಿಲ್ಲೆಯಲ್ಲಿ ಇಲ್ಲದಿರುವುದರಿಂದ ಈ ಬಾರಿಯೂ ಒಂದು ಮಗು ಕೂಡ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಬಾರದು. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳನ್ನು ತಯಾರು ಮಾಡಬೇಕೆಂದು ಶಾಲಾ ಶಿಕ್ಷಕರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ ಅವರು ಈಗಾಗಲೇ ಎರಡು ಮಹತ್ವದ ಸಭೆ ನಡೆಸಿದ್ದಾರೆ. ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರ ನೇತೃತ್ವದಲ್ಲಿ ಮುಖ್ಯ ಶಿಕ್ಷಕರು ಹಾಗು ಸಹ ಶಿಕ್ಷರ ಸಭೆಗಳು ಸರಣಿಯೋಪಾದಿಯಲ್ಲಿ ನಡೆದಿವೆ. ನ.4 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಸಹ ಅಧಿಕಾರಿಗಳ ಸಭೆ ನಡೆಸಿ ಸಲಹೆ ಸೂಚನೆ ನೀಡಿದ್ದಾರೆ. ಮುಖ್ಯ ಶಿಕ್ಷಕರ ನೇತೃತ್ವದಲ್ಲಿ ಪೋಷಕರ ಸಭೆಯನ್ನು ಎಲ್ಲಾ ಶಾಲೆಗಳಲ್ಲಿ ಮಾಡಲಾಗಿದೆ.ಮಾದರಿ ಪ್ರಶ್ನೆ ಪತ್ರಿಕೆ, ಕ್ವಷನ್ ಬ್ಯಾಂಕ್, ಪೂರ್ವ ಸಿದ್ಧತಾ ಪರೀಕ್ಷೆ, ಸುಲಭವಾಗಿ ಅಂಕ ಗಳಿಸುವ ವಿಧಾನ, ಪರೀಕ್ಷಾ ಸಮಯದಲ್ಲಿ ಮಕ್ಕಳು ಪಾಲಿಸಬೇಕಾದ ನಿಯಮಗಳ ಕುರಿತು ಶಿಕ್ಷಕರು ಹೇಳಿಕೊಟ್ಟಿದ್ದಾರೆ.

**ಮಾ.18 ರಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಆರಂಭವಾಗಲಿದ್ದು, ಎಲ್ಲಾ ಸಿದ್ಧತೆ ಕೈಗೊಳ್ಳಲಾಗಿದೆ. ಶಿಕ್ಷಣ ಇಲಾಖೆ ಈ ಬಾರಿ ಮೂರು ಪೂರ್ವ ಸಿದ್ಧತಾ ಪರೀಕ್ಷೆ ನಡೆಸಲು ಸೂಚಿಸಿದೆ. ಹೆಚ್ಚುವರಿಯಾಗಿ ನಾಲ್ಕು ಪರೀಕ್ಷೆಗಳನ್ನು ನಡೆಸುತ್ತೇವೆ. ಫಲಿತಾಂಶ ಸುಧಾರಣೆಗೆ ಎಲ್ಲಾ ಕ್ರಮ ಕೈಗೊಳ್ಳಲಾಗಿದೆ.**

**-ಬಲರಾಮ್, ಡಿಡಿಪಿಐ**



### ಮಕ್ಕಳಿಗೆ ಪತ್ರ ಬರೆದ ಶಿಕ್ಷಣಾಧಿಕಾರಿಗಳು

ಎಸ್‌ಎಸ್‌ಎಲ್‌ಸಿ ಪರೀಕ್ಷೆ ಜೀವನದ ಮಹತ್ತರ ಘಟ್ಟವಾಗಿದ್ದು, ವಿದ್ಯಾರ್ಥಿಗಳು ಆಸಕ್ತಿಯಿಂದ ವ್ಯಾಸಂಗ ಮಾಡಿ ಉತ್ತಮ ಅಂಕ ಗಳಿಸುವ ಮೂಲಕ ಹೆತ್ತವರು, ಕಲಿತ ಶಾಲೆಗೆ ಕೀರ್ತಿ ತರಬೇಕೆಂದು ಕ್ಷೇತ್ರ ಶಿಕ್ಷಣಾಧಿಕಾರಿಗಳು ಮಕ್ಕಳಿಗೆ ವೈಯಕ್ತಿಕ ಪತ್ರ ಬರೆದಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿ ಮಕ್ಕಳ ವ್ಯಾಸಂಗದ ಕುರಿತು ಅಷ್ಟೇನೂ ಗಂಭೀರವಾಗಿ ಪರಿಗಣಿಸದೆ ವಿದ್ಯಾರ್ಥಿಗಳನ್ನು ಮನೆಗೆಲಸಕ್ಕೆ ಬಳಸುವುದು, ನಾಳೆ ಓದಿದರಾಯಿತು ಎಂಬ ಅಸಡ್ಡೆಯಿಂದ ಮೊಬೈಲ್, ಟಿವಿ ವೀಕ್ಷಣೆ, ಆಟೋಟಗಳಲ್ಲಿ ಭಾಗವಹಿಸುವುದು ಸೇರಿ ಇತರ ಚಟುವಟಿಕೆಗಳಲ್ಲಿ ತೊಡಗುವ ಸಾಧ್ಯತೆಗಳು ಹೆಚ್ಚಿರುತ್ತವೆ. ಪೋಷಕರು ಆಸ್ಪದ ನೀಡದೆ ಮುಂದಿನ ಮೂರು ತಿಂಗಳು ಮಕ್ಕಳನ್ನು ವ್ಯಾಸಂಗದಲ್ಲಿ ತೊಡಗುವಂತೆ ನೋಡಿಕೊಳ್ಳಬೇಕೆಂದು ಪತ್ರದಲ್ಲಿ ತಿಳಿಸಿದ್ದಾರೆ.

ಜೊತೆಗೆ ಮುಖ್ಯ ಶಿಕ್ಷಕರು,ಅಧಿಕಾರಿಗಳು ವಿದ್ಯಾರ್ಥಿಗಳ ಮನೆಗೆ ದಿಢೀರ್ ಭೇಟಿ ನೀಡಿ ಕಲಿಕಾ ಪ್ರಗತಿ ಪರಿಶೀಲಿಸುತ್ತಿದ್ದಾರೆ. ತರಗತಿ ಮುಗಿದ ಬಳಿಕ ಪರಿಹಾರ ಬೋಧನೆ, ಗುಂಪು ಚರ್ಚೆ, ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಶಿಕ್ಷಕರೇ ದತ್ತು ಪಡೆಯುವುದು ಹೀಗೆ ನಾನಾ ಚಟುವಟಿಕೆಗಳ ಮೂಲಕ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಗಳಿಸಲು ಶಕ್ತಿಮೀರಿ ಶ್ರಮಿಸಲಾಗುತ್ತಿದೆ.

## ಸೇವಾ ನ್ಯೂನ್ಯತೆ: ಮ್ಯಾಕ್ಸ್ ಲೈಫ್ ಇನ್ಸೂರೆನ್ಸ್ ಕಂಪನಿಗೆ ದಂಡ

• ಪ್ರಜೋದಯ ವರದಿ

**ಹಾಸನ:** ವಿಮಾ ಪಾಲಿಸಿದಾರರಿಗೆ ತಪ್ಪಾದ ಬಾಂಡ್ ನೀಡಿದ ಪ್ರಕರಣಕ್ಕೆ ಸಂಬಂಧಿಸಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಮ್ಯಾಕ್ಸ್ ಲೈಫ್ ಇನ್ಸೂರೆನ್ಸ್ ಕಂಪನಿಗೆ 15 ಸಾವಿರ ರೂ. ದಂಡ ವಿಧಿಸಿ ಆದೇಶಿಸಿದೆ.

ನಗರದ ಹೆಚ್.ಪಿ.ಕಿರಣ್ ಎಂಬುವವರಿಗೆ ಮುಂದಿನ 45 ದಿನಗಳ ಒಳಗೆ ದಂಡದ ಮೊತ್ತ ಪಾವತಿಸುವಂತೆ ಆಯೋಗದ ಅಧ್ಯಕ್ಷ ಸಿ.ಎಂ.ಚಂಚಲ ಅವರು ಸೂಚಿಸಿದ್ದಾರೆ. ಕಿರಣ್ ಅವರು ಮ್ಯಾಕ್ಸ್ ಲೈಫ್ ಇನ್ಸ್ಯೂರೆನ್ಸ್ ಕಂಪನಿಗೆ 46,046 ರೂ. ಪಾವತಿಸಿ ವಿಮೆ ಪಡೆದಿದ್ದರು. ತಂದೆ-ತಾಯಿ ಹೆಸರು ದೃಢೀಕರಣಕ್ಕೆ ಆಧಾರ್‌ನ ಜೆರಾಕ್ಸ್ ಪ್ರತಿ ನೀಡಿದ್ದರು. ಕಂಪನಿಯ ಏಜೆಂಟ್ ಆಧಾರ್ ಕಾರ್ಡ್ ಪರಿಶೀಲಿಸದೆ ತಪ್ಪು ಹೆಸರು, ಇ-ಮೇಲ್ ವಿಳಾಸ ನಮೂದಿಸಿದ್ದರು. ಬಾಂಡ್ ಕೈ ಸೇರಿದ ಬಳಿಕ ಲೋಪಗಳನ್ನು ಕಂಡ ಕಿರಣ್ ಅವರು ಏಜೆಂಟರನ್ನು ಪ್ರಶ್ನಿಸಿದರೂ ಸಕಾರಾತ್ಮಕ ಪ್ರತಿಕ್ರಿಯೆ ಬಂದಿರಲಿಲ್ಲ.

ಆದ್ದರಿಂದ ಅವರು ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಗೆ ದೂರು ಸಲ್ಲಿಸಿದ್ದರು. 2024ರ ನ. 22


» ನಾಲ್ಕನೇ ಪುಟದಲ್ಲಿ


# ಶೀಘ್ರದಲ್ಲೇ ಪೃಥ್ವಿ ಅಂಬಾರ್ ನಟನೆಯ ಚೌಕಿದಾರ್ ತೆರೆಗೆ

ರಥಾವರ ಸಿನಿಮಾ ನಿರ್ದೇಶಿಸಿದ್ದ ಚಂದ್ರಶೇಖರ್ ಬಂಡಿಯಪ್ಪ ಆ್ಯಕ್ಷನ್ ಕಟ್ ಹೇಳಿರುವ, ಪೃಥ್ವಿ ಅಂಬಾರ್ ಮುಖ್ಯಭೂಮಿಕೆಯಲ್ಲಿ ನಟಿಸಿರುವ ಚೌಕಿದಾರ್ ಚಿತ್ರ ಬಿಡುಗಡೆಗೆ ಸಜ್ಜಾಗಿದ್ದು, ಸಿನಿಮಾದ ಮೂರನೇ ಹಾಡು ಇತ್ತೀಚೆಗೆ ಬಿಡುಗಡೆಯಾಗಿದೆ.

ಅಪ್ಪ ಮಗನ ಬಾಂಧವ್ಯದ ಕುರಿತ ಈ ಸಿನಿಮಾದಲ್ಲಿ ಸಾಯಿಕುಮಾರ್ ಹಾಗೂ ಪೃಥ್ವಿ ಅಂಬಾರ್ ತಂದೆಮಗನಾಗಿ ಜೊತೆಯಾಗಿದ್ದಾರೆ. ಪೃಥ್ವಿ ಅಂಬಾರ್ ಹಾಗೂ ಧನ್ಯಾ ರಾಮ್‌ಕುಮಾರ್ ಜೋಡಿಯಾಗಿ ನಟಿಸಿರುವ ಈ ಸಿನಿಮಾ ಫ್ಯಾಮಿಲಿ ಡ್ರಾಮಾ ಜಾನರ್‌ನಲ್ಲಿದೆ. ಇಷ್ಟ ಆದೆ ನೀನು.. ಎಂಬ ಹಾಡಿಗೆ ಪ್ರಮೋದ್ ಮರವಂತೆ ಸಾಹಿತ್ಯವಿದ್ದು, ಸಚಿನ್ ಬಸ್ರೂರ್ ಸಂಗೀತ ನೀಡಿದ್ದಾರೆ. ಹಾಡಿಗೆ ಪೃಥ್ವಿ ಭಟ್ ದನಿಯಾಗಿದ್ದಾರೆ. ಶ್ವೇತಾ, ಸುಧಾರಾಣಿ, ಧರ್ಮ, ಬಿಗ್‌ಬಾಸ್ ಖ್ಯಾತಿಯ ಗಿಲ್ಲಿ ನಟ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ. ವಿ.ಎಸ್.ಎಂಟರ್‌ಟೇನ್ಮೆಂಟ್ ಬ್ಯಾನರ್‌ನಡಿ ಕಲ್ಲಹಳ್ಳಿ ಚಂದ್ರಶೇಖರ್ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಬಿಡುಗಡೆಗೆ ಸಜ್ಜಾಗಿರುವ ಈ ಸಿನಿಮಾದ ಬಿಡುಗಡೆ ದಿನಾಂಕವನ್ನು ಖ್ಯಾತ ತಾರೆಯೊಬ್ಬರು ಶೀಘ್ರದಲ್ಲೇ ಘೋಷಣೆ ಮಾಡಲಿದ್ದಾರೆ ಎಂದು ಚಿತ್ರತಂಡ ತಿಳಿಸಿದೆ.



## 19-12-2025 ದಿನ ಭವಿಷ್ಯ



**ಮೇಷ:** ನಿಮ್ಮಲ್ಲಿ ಇಂದು ಚುರುಕುತನವನ್ನು ನೋಡಬಹುದು. ನಿಮ್ಮ ಆರೋಗ್ಯವು ಇಂದು ನಿಮ್ಮನ್ನು ಸಂಪೂರ್ಣವಾಗಿ ಬೆಂಬಲಿಸುತ್ತದೆ. ನಿಮ್ಮ ಹಣವನ್ನು ಉಳಿಸಲು ನೀವು ಇಂದು ನಿಮ್ಮ ಮನೆಯ ಜನರೊಂದಿಗೆ ಮಾತನಾಡಬೇಕು. ಅವರ ಸಲಹೆ ನಿಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಸಹಾಯಕವಾಗುತ್ತದೆ. ಇಂದು ಕೆಲಸದಲ್ಲಿ ಎಲ್ಲರೂ ನಿಮಗೆ ಪ್ರೀತಿ ಮತ್ತು ಬೆಂಬಲ ನೀಡುತ್ತಾರೆ.

**ವೃಷಭ:** ಅನಂತ ಜೀವನದ ಉತ್ಕೃಷ್ಟ ವೈಭವವನ್ನು ಆನಂದಿಸಲು ನಿಮ್ಮ ಜೀವನವನ್ನು ಹೆಚ್ಚು ಭವ್ಯಗೊಳಿಸಿ. ಚಿಂತೆಯ ಅನುಪಸ್ಥಿತಿ ಈ ದಿಕ್ಕಿನಲ್ಲಿ ಮೊದಲ ಹೆಜ್ಜೆ. ಹೊಸ ಆರ್ಥಿಕ ಒಪ್ಪಂದ ಕುದುರಿಸಲಾಗುತ್ತದೆ ಮತ್ತು ಹೊಸ ಹಣ ಬರುತ್ತದೆ. ಗೃಹಪ್ರವೇಶಕ್ಕೆ ಮಂಗಳಕರ ದಿನ. ಕೆಲಸದ ನಿಧಾನಗತಿ ಸ್ವಲ್ಪ ಒತ್ತಡ ತೆರೆದಿಡುತ್ತದೆ.

**ಮಿಥುನ:** ಕೆಲಸದಲ್ಲಿ ಹಿರಿಯರಿಂದ ಒತ್ತಡ ಮತ್ತು ಮನೆಯಲ್ಲಿ ಅಪಶ್ರುತಿ ನಿಮ್ಮ ಏಕಾಗ್ರತೆಗೆ ತೊಂದರೆ ತರಬಹುದು. ಹೊಸ ಆರ್ಥಿಕ ಒಪ್ಪಂದ ಕುದುರಿಸಲಾಗುತ್ತದೆ ಮತ್ತು ಹೊಸ ಹಣ ಬರುತ್ತದೆ. ಮನೆಯ ವಿಷಯಗಳು ಮತ್ತು ಬಾಕಿಯಿರುವ ಗೃಹಕೃತ್ಯಗಳನ್ನು ಪೂರೈಸಲು ಒಂದು ಅನುಕೂಲಕರ ದಿನ. ನಿಮ್ಮ ಪ್ರೇಮ ಪ್ರಕರಣದ ಬಗ್ಗೆ ಜೋರಾಗಿ ಹೇಳಿಕೊಳ್ಳಬೇಡಿ.

**ಕರ್ಕಾಟಕ:** ನಿಮ್ಮ ವೈಯಕ್ತಿಕ ಸಮಸ್ಯೆಗಳು ಮಾನಸಿಕ ಸಂತೋಷವನ್ನು ಹಾಳು ಮಾಡಬಹುದು. ಆದರೆ ಒತ್ತಡವನ್ನು ನಿಭಾಯಿಸಲು ಆಸಕ್ತಿದಾಯಕವಾದದ್ದನ್ನೇನಾದರೂ ಓದುವ ಮೂಲಕ ಸ್ವಲ್ಪ ಮಾನಸಿಕ ವ್ಯಾಯಾಮ ಮಾಡಿಕೊಳ್ಳಿ. ಮಕ್ಕಳು ಮತ್ತು ಕುಟುಂಬ ಇಂದು ನಿಮ್ಮ ಕೇಂದ್ರಬಿಂದುವಾಗಿರುತ್ತದೆ. ಪ್ರೇಮಪ್ರಯಾಣ ಮಧುರವಾಗಿದ್ದರೂ ಅಲ್ಪಾವಧಿಯದ್ದಾಗಿರುತ್ತದೆ.

**ಸಿಂಹ:** ನಿಮ್ಮ ಶಕ್ತಿಯ ಮಟ್ಟ ಹೆಚ್ಚಿರುತ್ತದೆ. ನೀವು ವಿವಾಹಿತರಾಗಿದ್ದರೆ ನಿಮ್ಮ ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸಿ ಏಕೆಂದರೆ ನೀವು ಅದನ್ನು ಮಾಡದಿದ್ದರೆ ಅವರ ಆರೋಗ್ಯವು ಹದಗೆಡಬಹುದು ಮತ್ತು ಅವರ ಆರೋಗ್ಯದ ಮೇಲೆ ಬಹಳಷ್ಟು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ದಿನದ ಉತ್ತರಾರ್ಧದಲ್ಲಿ ನೀವು ವಿಶ್ರಾಂತಿ ತೆಗೆದುಕೊಳ್ಳಬಯಸುತ್ತೀರಿ.

**ಕನ್ಯಾ:** ನಿಮ್ಮ ಪ್ರಚಂಡ ಪ್ರಯತ್ನ ಹಾಗೂ ಕುಟುಂಬದ ಸದಸ್ಯರ ಸಕಾಲಿಕ ಬೆಂಬಲ ಬಯಸಿದ ಫಲಿತಾಂಶಗಳು ತರುತ್ತದೆ. ಆದರೆ ಪ್ರಸ್ತುತ ಚೇತನವನ್ನು ಕಾಯ್ದುಕೊಳ್ಳಲು ಶ್ರಮಿಸುತ್ತಿರಿ. ನೀವು ಉಳಿಸಿರುವ ಹಣ ಇಂದು ನಿಮ್ಮ ಕೆಲಸಕ್ಕೆ ಬರಬಹುದು. ಇದರೊಂದಿಗೆ ಇದರ ಹೋಗುವ ದುಃಖವು ನಿಮಗೆ ಆಗುತ್ತದೆ. ಸ್ನೇಹಿತರೊಂದಿಗಿನ ಸಂಜೆ ಸಂತೋಷಕರವಾಗಿರುತ್ತದೆ.

**ತುಲಾ:** ಸಂಗಾತಿಯೊಡನೆ ಚಲನಚಿತ್ರ - ರಂಗಭೂಮಿ ಅಥವಾ ಊಟ ನಿಮ್ಮನ್ನು ಒಂದು ಶಾಂತ ಮತ್ತು ಅದ್ಭುತವಾದ ಮನಸ್ಥಿತಿಯಲ್ಲಿರುತ್ತದೆ ನಿಮ್ಮ ತಂದೆಯ ಯಾವುದೇ ಸಲಹೆ ಇಂದು ಕೆಲಸದ ಸ್ಥಳದಲ್ಲಿ ಇಂದು ನಿಮಗೆ ಹಣದ ಪ್ರಯೋಜನವನ್ನು ನೀಡುತ್ತದೆ.

**ವೃಶ್ಚಿಕ:** ನಿಮ್ಮ ಭರವಸೆ ಒಂದು ಸಮೃದ್ಧ, ಸೂಕ್ಷ್ಮ ಪರಿಮಳಯುಕ್ತ ಮತ್ತು ಬೆರಗುಗೊಳಿಸುವ ಹೂವಿನ ಹಾಗೆ ಅರಳುತ್ತದೆ. ನಿಮ್ಮ ಖರ್ಚುಗಳನ್ನು ನಿಯಂತ್ರಿಸಲು ಮತ್ತು ಕೇವಲ ಅಗತ್ಯವಾದ ವಸ್ತುಗಳ ಮಾತ್ರ ಇಂದು ಖರೀದಿಸಲು ಪ್ರಯತ್ನಿಸಿ. ನಿಮ್ಮ ಮಗುವಿನಂಥ ಮತ್ತು ಮುಗ್ಧ ವರ್ತನೆ ಕುಟುಂಬದ ಸಮಸ್ಯೆಯನ್ನು ಪರಿಹರಿಸುವಲ್ಲಿ ಒಂದು ಪ್ರಮುಖ ಪಾತ್ರ ವಹಿಸುತ್ತದೆ.

**ಧನು:** ನಿಮ್ಮ ಹೆಚ್ಚು ಆತ್ಮವಿಶ್ವಾಸವನ್ನು ಇಂದು ಚೆನ್ನಾಗಿ ಬಳಸಿಕೊಳ್ಳಲು ಪ್ರಯತ್ನಿಸಿ. ಒತ್ತಡದ ದಿನದ ಹೊರತಾಗಿಯೂ ನೀವು ನಿಮ್ಮ ಚೈತನ್ಯವನ್ನು ಮರಳಿ ಪಡೆಯಲು ಸಾಧ್ಯವಾಗುತ್ತದೆ. ನೀವು ವಿಧ್ಯಾರ್ಥಿಯಾಗಿದ್ದರೆ ಮತ್ತು ವಿದೇಶಕ್ಕೆ ಹೋಗಿ ಅಧ್ಯಯನ ಮಾಡಲು ಬಯಸುತ್ತಿದ್ದರೆ ಆರ್ಥಿಕ ಬಿಕ್ಕಟ್ಟು ಇಂದು ನಿಮ್ಮ ಹಣೆಯ ಮೇಲೆ ಸುಕ್ಕು ತರಬಹುದು.

**ಮಕರ:** ಇಂದು ನೀವು ಪ್ರಮುಖ ನಿರ್ಧಾರ ಕೈಗೊಳ್ಳಬೇಕು ಇದು ನಿಮ್ಮನ್ನು ಒತ್ತಡ ಹಾಗೂ ಉದ್ವೇಗಕ್ಕೆ ಒಳಪಡಿಸುತ್ತದೆ. ಕೆಲವರಿಗೆ ಪ್ರಯಾಣದ ಗಡಿಬಿಡಿ ಮತ್ತು ಒತ್ತಡದಿಂದ ಕೂಡಿರುತ್ತವೆ - ಆದರೆ ಆರ್ಥಿಕವಾಗಿ ಲಾಭದಾಯಕವಾಗಿರುತ್ತವೆ. ಪತ್ನಿಯ ವ್ಯವಹಾರಗಳಲ್ಲಿ ನಿಮ್ಮ ಹಸ್ತಕ್ಷೇಪ ಅವಳಿಗೆ ಕಿರಿಕಿರಿ ಮಾಡಬಹುದು. ಕೋಪ ಭುಗಿಲೇಳುವುದನ್ನು ತಪ್ಪಿಸಲು ಅವಳ ಅನುಮತಿ ತೆಗೆದುಕೊಳ್ಳಿ.

**ಕುಂಭ:** ಅನಂತ ಚೈತನ್ಯ ಮತ್ತು ಉತ್ಸಾಹ ನಿಮ್ಮನ್ನು ಆವರಿಸುತ್ತದೆ ಮತ್ತು ನೀವು ಯಾವುದೇ ಅವಕಾಶವನ್ನು ನಿಮ್ಮ ಅನುಕೂಲಕ್ಕೆ ಬಳಸಿಕೊಳ್ಳುತ್ತೀರಿ. ಆರ್ಥಿಕ ಜೀವನದ ಸ್ಥಿತಿ ಇಂದು ಉತ್ತಮವಾಗಿದೆ ಎಂದು ಹೇಳಲಾಗುವುದಿಲ್ಲ, ಇಂದು ನಿಮ್ಮನ್ನು ಉಳಿಸಲು ನಿಮಗೆ ಕಷ್ಟವಾಗಬಹುದು. ನಿಮ್ಮ ಪಾಲುದಾರರು ನೀವು ಅವರ ಅಭಿಪ್ರಾಯಗಳನ್ನು ನಿರ್ಲಕ್ಷಿಸಿದರೆ ಅವರ ತಾಳ್ಮೆ ಕಳೆದುಕೊಳ್ಳುತ್ತಾರೆ.

**ಮೀನ:** ನಿಮ್ಮ ಹಠಮಾರಿ ಧೋರಣೆ ಕೇವಲ ಸಮಯ ವ್ಯರ್ಥವಾದದ್ದರಿಂದ ಅದನ್ನು ನಿಮ್ಮ ಸಂತೋಷದ ಜೀವನದ ಸಲುವಾಗಿ ತೊರೆದುಬಿಡಿ. ಹೂಡಿಕೆ ಶಿಫಾರಸು ಮಾಡಲಾಗಿದ್ದರೂ ಸರಿಯಾದ ಸಲಹೆ ಪಡೆಯಬೇಕು. ನಿಮ್ಮ ವೈಯಕ್ತಿಕ ರಂಗದಲ್ಲಿ ಮುಖ್ಯ ಬೆಳವಣಿಗೆಯಾಗುತ್ತಿದ್ದು ಇದು ನೀವು ಮತ್ತು ನಿಮ್ಮ ಇಡೀ ಕುಟುಂಬಕ್ಕೆ ಸಂತೋಷ ತರುತ್ತದೆ.

# 2025ರಲ್ಲಿ ಕನ್ನಡ ಚಿತ್ರರಂಗಕ್ಕೆ ಬಾಕ್ಸ್ ಆಫೀಸ್ ಪವರ್

## ದಾಖಲೆ ಬರೆದ ಟಾಪ್ 6 ಸಿನಿಮಾಗಳು ಇವೇನೆ?

ಕನ್ನಡ ಚಿತ್ರರಂಗದ ಪಾಲಿಗೆ 2025 ನಿಜಕ್ಕೂ ಐತಿಹಾಸಿಕ ವರ್ಷ. ಈ ವರ್ಷ ಹಲವಾರು ಕನ್ನಡ ಸಿನಿಮಾಗಳು ವಿಶ್ವದಾದ್ಯಂತ ಬಾಕ್ಸ್ ಆಫೀಸ್‌ನಲ್ಲಿ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿವೆ. ಈ ಸಿನಿಮಾಗಳು ಕೇವಲ ಗಳಿಕೆಯಲ್ಲಿ ಮಾತ್ರವಲ್ಲದೆ, ಕಥೆ ಹೇಳುವ ಗುಣಮಟ್ಟ ಮತ್ತು ತಾಂತ್ರಿಕ ಮೌಲ್ಯದಲ್ಲೂ ಹೊಸ ಎತ್ತರಕ್ಕೆ ಏರಿವೆ. ನಮ್ಮ ನೆಲದ ಕಥೆಗಳು ಅದ್ಭುತ ಮೇಕಿಂಗ್ ಮತ್ತು ಗುಣಮಟ್ಟದ ನಿರ್ದೇಶನ ಜಾಗತಿಕ ಪ್ರೇಕ್ಷಕರನ್ನು ಸೆಳೆಯುವಲ್ಲಿ ಯಶಸ್ವಿಯಾಗಿವೆ. ಕನ್ನಡ ಚಿತ್ರರಂಗ ಈಗ ಪ್ರಾದೇಶಿಕ ಗಡಿಗಳನ್ನು ಮೀರಿ ವಿಶ್ವ ಮಟ್ಟದಲ್ಲಿ ಗುರುತಿಸಿಕೊಂಡಿದೆ.

2025ರಲ್ಲಿ ಬಿಡುಗಡೆಯಾದ ಸಿನಿಮಾಗಳು ಕೋಟ್ಯಂತರ ರೂಪಾಯಿಗಳನ್ನು ಗಳಿಸಿವೆ. ಇದು ಕನ್ನಡ ಸಿನಿಮಾಗಳ ಮಾರುಕಟ್ಟೆ ಎಷ್ಟು ವಿಸ್ತಾರವಾಗಿದೆ ಎಂಬುದನ್ನು ತೋರಿಸುತ್ತದೆ. ಪ್ರೇಕ್ಷಕರು ಉತ್ತಮ ಕಂಟೆಂಟ್‌ಗೆ ಸದಾ ಬೆಂಬಲ ನೀಡುತ್ತಾರೆ ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ಈ ವರ್ಷ ಬಿಡುಗಡೆಯಾದ ಚಿತ್ರಗಳು ಪ್ರೇಕ್ಷಕರ ಮೆಚ್ಚುಗೆಯ ಜೊತೆಗೆ ಬಾಕ್ಸ್ ಆಫೀಸ್‌ನಲ್ಲಿಯೂ ದೊಡ್ಡ ಮಟ್ಟದ ಯಶಸ್ಸು ಕಂಡಿವೆ. ಇಡೀ ಕನ್ನಡ ಚಿತ್ರರಂಗಕ್ಕೆ ಈ ಗಳಿಕೆ ದೊಡ್ಡ ಮಟ್ಟದ ಹುರುಪನ್ನು ನೀಡಿದೆ.

ಈ ವರ್ಷ ಅತಿ ಹೆಚ್ಚು ಗಳಿಕೆ ಮಾಡಿದ ಟಾಪ್ 6 ಕನ್ನಡ ಸಿನಿಮಾಗಳ ವಿವರ ಇಲ್ಲಿದೆ. ಈ ಸಿನಿಮಾಗಳು ಗಳಿಕೆಯ ಮೂಲಕವೇ ತಮ್ಮ ಶಕ್ತಿಯನ್ನು ಮತ್ತು ಪ್ರೇಕ್ಷಕರ ಒಲವನ್ನು ಸಾಬೀತುಪಡಿಸಿವೆ.

**ಟಾಪ್ 1: ಕಾಂತಾರ ಚಾಪ್ಟರ್ 1:** ಶಿವನ ಆರಾಧನೆಯ ಕಥಾಹಂದರ ಹೊಂದಿದ್ದ ಕಾಂತಾರ ಚಾಪ್ಟರ್ 1 ಸಿನಿಮಾವು 2025ರ ಕನ್ನಡ ಚಿತ್ರರಂಗದ ಪಾಲಿಗೆ ಬಾಕ್ಸ್ ಆಫೀಸ್‌ನಲ್ಲಿ ಹೊಸ ದಾಖಲೆ ಬರೆದಿದೆ. ರಿಷಬ್ ಶೆಟ್ಟಿ ಈ ಮ್ಯಾಜಿಕಲ್ ಸಿನಿಮಾ ವಿಶ್ವದಾದ್ಯಂತ ಬರೋಬ್ಬರಿ 845 ಕೋಟಿ ರೂಪಾಯಿ ಗಳಿಸಿದೆ. ಈ ಗಳಿಕೆ ಕನ್ನಡ ಸಿನಿಮಾಗಳಿಗೆ ಹೊಸ ಮಾನದಂಡವನ್ನು ಸ್ಥಾಪಿಸಿದೆ. ಭಾರತೀಯ ಚಿತ್ರರಂಗದಲ್ಲಿಯೇ ಹೆಚ್ಚು ಗಳಿಕೆ ಮಾಡಿದ ಸಿನಿಮಾಗಳಲ್ಲಿ ಇದು ಕೂಡ ಗುರುತಿಸಿಕೊಂಡಿದೆ.




**ಟಾಪ್ 2: ಮಹಾವತಾರ ನರಸಿಂಹ:** ಬಿಗ್ ಬಜೆಟ್ ಮತ್ತು ಅದ್ದೂರಿ ಮೇಕಿಂಗ್‌ಗಿಂತ ಪ್ರೇಕ್ಷಕರ ಗಮನ ಸೆಳೆದ ಮಹಾವತಾರ ನರಸಿಂಹ ಸಿನಿಮಾವು ಎರಡನೇ ಸ್ಥಾನದಲ್ಲಿದೆ. ಈ ಆಕ್ಷನ್ ಎಂಟರ್‌ಟೈನರ್ ಸಿನಿಮಾ ವಿಶ್ವದಾದ್ಯಂತ 326 ಕೋಟಿ ರೂಪಾಯಿ ಗಳಿಸಿ ಭರ್ಜರಿ ಯಶಸ್ಸು ಕಂಡಿದೆ. ಇದರ ಮೂಲಕ ಈ ಸಿನಿಮಾವು ಬಾಕ್ಸಾಫೀಸ್‌ನಲ್ಲಿ ಗೆಲುವಿನ ಸುನಾಮಿಯನ್ನೇ ಸೃಷ್ಟಿಸಿದೆ. ನರಸಿಂಹನ ಪಾತ್ರವನ್ನು ನಿರ್ವಹಿಸಿದ ನಾಯಕನ ಅಭಿನಯಕ್ಕೆ ಭಾರೀ ಮೆಚ್ಚುಗೆ ವ್ಯಕ್ತವಾಗಿದೆ.

**ಟಾಪ್ 3: ಸು ಫ್ರಂ ಸೋ:** ಕನ್ನಡ ಚಿತ್ರರಂಗದಲ್ಲಿ ನಿರೀಕ್ಷೆಗೂ ಮೀರಿ ಯಶಸ್ಸು ಕಂಡ ಸಿನಿಮಾ ಸು ಫ್ರಂ ಸೋ. ಇದರ ವಿಭಿನ್ನ ಕಥಾವಸ್ತು ಮತ್ತು ಯುವ ಪ್ರತಿಭೆಗಳ ಶ್ರಮ ಪ್ರೇಕ್ಷಕರಿಗೆ ತುಂಬಾ ಇಷ್ಟವಾಗಿದೆ. ಈ ಸಿನಿಮಾ ವಿಶ್ವದಾದ್ಯಂತ 122.83 ಕೋಟಿ ರೂಪಾಯಿ ಗಳಿಕೆ ಕಂಡಿದೆ. ಕಂಟೆಂಟ್ ಆಧಾರಿತ ಸಿನಿಮಾಗಳಿಗೆ ಇಂದಿಗೂ ಪ್ರೇಕ್ಷಕರು ಬೆಂಬಲ ನೀಡುತ್ತಾರೆ ಎಂಬುದನ್ನು ಈ ಚಿತ್ರ ಸಾಬೀತುಪಡಿಸಿದೆ. ಕಡಿಮೆ ಬಜೆಟ್‌ನಲ್ಲಿ ಬಂದರೂ ಈ ಸಾಧನೆ ಮಾಡಿದೆ.

**ಟಾಪ್ 4: ಜೂನಿಯರ್:** ಯುವ ಪೀಳಿಗೆಯನ್ನು ಗುರಿಯಾಗಿಸಿಕೊಂಡು ಬಂದ ಜೂನಿಯರ್ ಸಿನಿಮಾ ಉತ್ತಮ ಗಳಿಕೆ ಮಾಡಿದೆ. ಈ ಸ್ಪೋರ್ಟ್ಸ್ ಡ್ರಾಮಾ ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ 12.45 ಕೋಟಿ ರೂಪಾಯಿ ಸಂಗ್ರಹಿಸಿದೆ. ಇದು ಚಿತ್ರದ ನಿರ್ಮಾಪಕರಿಗೆ ಲಾಭದಾಯಕ ಹೂಡಿಕೆಯಾಗಿದೆ. ಯುವ ನಾಯಕನ ಅಭಿನಯ ಮತ್ತು ಚಿತ್ರದ ಪಾಸಿಟಿವ್ ಕಥಾಹಂದರವು ಪ್ರೇಕ್ಷಕರನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ.

**ಟಾಪ್ 5: ಎಕ್ಕಾ:** ಒಂದು ವಿಶಿಷ್ಟ ಪ್ರಯತ್ನ ಮತ್ತು ವಿಭಿನ್ನ ನಿರೂಪಣಾ ಶೈಲಿ ಹೊಂದಿದ್ದ ಎಕ್ಕಾ ಸಿನಿಮಾವು ಕೂಡ ಯಶಸ್ವಿ ಪಟ್ಟಿಯಲ್ಲಿ ಸ್ಥಾನ ಪಡೆದಿದೆ. ಈ ಸಿನಿಮಾವು ವಿಶ್ವದಾದ್ಯಂತ 12 ಕೋಟಿ ರೂಪಾಯಿ ಗಳಿಕೆ ಮಾಡಿದೆ. ಈ ಗಳಿಕೆಯು ಚಿತ್ರದ ಕಮರ್ಷಿಯಲ್ ಯಶಸ್ಸಿಗೆ ಸಾಕ್ಷಿಯಾಗಿದೆ. ಸಿನಿಮಾ ವಿಮರ್ಶಕರಿಂದಲೂ ಮೆಚ್ಚುಗೆ ಪಡೆದಿರುವುದು ಇದರ ಹೆಗ್ಗಳಿಕೆ.



**ಟಾಪ್ 6: ಮಾದೇವ:** ಸರಳ ಮತ್ತು ಸಂವೇದನಾಶೀಲ ಕಥೆ ಹೊಂದಿದ್ದ ಮಾದೇವ ಸಿನಿಮಾವು ಟಾಪ್ 6 ಪಟ್ಟಿಯಲ್ಲಿ ಸ್ಥಾನ ಪಡೆದಿದೆ. ಈ ಚಿತ್ರವು ಬಾಕ್ ಆಫೀಸ್‌ನಲ್ಲಿ 7.18 ಕೋಟಿ ರೂಪಾಯಿ ಗಳಿಕೆ ಮಾಡಿದೆ. ಇದೊಂದು ಕಲಾತ್ಮಕ ಮತ್ತು ಕಮರ್ಷಿಯಲ್ ಅಂಶಗಳ ಮಿಶ್ರಣವಾಗಿದ್ದು, ಕಡಿಮೆ ಬಜೆಟ್‌ನಲ್ಲಿ ಉತ್ತಮ ಗಳಿಕೆ ಕಂಡಿದೆ. ಈ ಮೂಲಕ ನಿರ್ಮಾಪಕರಿಗೆ ಲಾಭವನ್ನು ತಂದುಕೊಟ್ಟಿದೆ.

ಒಟ್ಟಾರೆಯಾಗಿ 2025 ಅನ್ನು ಕನ್ನಡ ಚಿತ್ರರಂಗದ ಸುವರ್ಣ ಯುಗ ಎನ್ನಬಹುದು. ಕಾಂತಾರ ಚಾಪ್ಟರ್ 1 ಮತ್ತು ಮಹಾವತಾರ ನರಸಿಂಹ ದಂತಹ ಬಿಗ್ ಬಜೆಟ್ ಸಿನಿಮಾಗಳು ಜಾಗತಿಕವಾಗಿ ಅತಿ ಹೆಚ್ಚು ಗಳಿಕೆ ಮಾಡಿ ಚಿತ್ರೋದ್ಯಮದ ಶಕ್ತಿಯನ್ನು ಸಾಬೀತುಪಡಿಸಿದವು. ಹಾಗೆಯೇ ಸು ಫ್ರಂ ಸೋ ನಂತಹ ಕಂಟೆಂಟ್ ಪ್ರಧಾನ ಚಿತ್ರಗಳ ಯಶಸ್ಸು ಉತ್ತಮ ಕಥೆಗಳಿಗೆ ಪ್ರೇಕ್ಷಕರ ಬೆಂಬಲವಿದೆ ಎಂಬುದನ್ನು ತೋರಿಸಿದೆ. ಈ ಸಾಧನೆಗಳು ಕನ್ನಡದ ಪ್ರತಿಭೆಗಳಲ್ಲಿ ಹೊಸ ಭರವಸೆ ತುಂಬಿದ್ದು, ಸಿನಿಮಾ ಜಗತ್ತು ಇದೀಗ ಹೊಸ ಮಾರುಕಟ್ಟೆ ಮತ್ತು ಯಶಸ್ಸಿನತ್ತ ಮುನ್ನುಗ್ಗುತ್ತಿದೆ.

### ಕಥೆ ಹೇಳುವ ಗುಣಮಟ್ಟ ಮತ್ತು ತಾಂತ್ರಿಕ ಮೌಲ್ಯದಲ್ಲೂ ಹೊಸ ಎತ್ತರಕ್ಕೆ ಏರಿವೆ

- ನಮ್ಮ ನೆಲದ ಕಥೆಗಳು ಅದ್ಭುತ ಮೇಕಿಂಗ್ ಮತ್ತು ಗುಣಮಟ್ಟದ ನಿರ್ದೇಶನ ಜಾಗತಿಕ ಪ್ರೇಕ್ಷಕರನ್ನು ಸೆಳೆಯುವಲ್ಲಿ ಯಶಸ್ವಿಯಾಗಿವೆ.
- ಕನ್ನಡ ಚಿತ್ರರಂಗ ಈಗ ಪ್ರಾದೇಶಿಕ ಗಡಿಗಳನ್ನು ಮೀರಿ ವಿಶ್ವ ಮಟ್ಟದಲ್ಲಿ ಗುರುತಿಸಿಕೊಂಡಿದೆ.
- 2025ರಲ್ಲಿ ಬಿಡುಗಡೆಯಾದ ಸಿನಿಮಾಗಳು ಕೋಟ್ಯಂತರ ರೂಪಾಯಿಗಳನ್ನು ಗಳಿಸಿವೆ.
- ಇದು ಕನ್ನಡ ಸಿನಿಮಾಗಳ ಮಾರುಕಟ್ಟೆ ಎಷ್ಟು ವಿಸ್ತಾರವಾಗಿದೆ ಎಂಬುದನ್ನು ತೋರಿಸುತ್ತದೆ.
- ಪ್ರೇಕ್ಷಕರು ಉತ್ತಮ ಕಂಟೆಂಟ್‌ಗೆ ಸದಾ ಬೆಂಬಲ ನೀಡುತ್ತಾರೆ ಎಂಬುದು ಮತ್ತೊಮ್ಮೆ ಸಾಬೀತಾಗಿದೆ.
- ಈ ವರ್ಷ ಬಿಡುಗಡೆಯಾದ ಚಿತ್ರಗಳು ಪ್ರೇಕ್ಷಕರ ಮೆಚ್ಚುಗೆಯ ಜೊತೆಗೆ ಬಾಕ್ಸ್ ಆಫೀಸ್‌ನಲ್ಲಿಯೂ ದೊಡ್ಡ ಮಟ್ಟದ ಯಶಸ್ಸು ಕಂಡಿವೆ.
- ಇಡೀ ಕನ್ನಡ ಚಿತ್ರರಂಗಕ್ಕೆ ಈ ಗಳಿಕೆ ದೊಡ್ಡ ಮಟ್ಟದ ಹುರುಪನ್ನು ನೀಡಿದೆ.
- ಈ ವರ್ಷ ಅತಿ ಹೆಚ್ಚು ಗಳಿಕೆ ಮಾಡಿದ ಟಾಪ್ 6 ಕನ್ನಡ ಸಿನಿಮಾಗಳ ವಿವರ ಇಲ್ಲಿದೆ.
- ಈ ಸಿನಿಮಾಗಳು ಗಳಿಕೆಯ ಮೂಲಕವೇ ತಮ್ಮ ಶಕ್ತಿಯನ್ನು ಮತ್ತು ಪ್ರೇಕ್ಷಕರ ಒಲವನ್ನು ಸಾಬೀತುಪಡಿಸಿವೆ.



» **ಅಂಡರ್‌ವರ್ಲ್ಡ್ ಕಥೆಯನ್ನು ಅತಿಯಾದ ಹಿಂಸೆ ಇಲ್ಲದೆಯೂ ತೋರಿಸಬಹುದು ಎಂಬುವುದನ್ನು ಸಾಬೀತು ಮಾಡಿದ ಸಿನಿಮಾ. ಹೀಗಾಗಿ ಇಂದಿಗೂ ಆ ದಿನಗಳು ಅದೆಷ್ಟೋ ಸಿನಿ ಪ್ರೇಮಿಗಳ ಫೇವರಿಟ್ ಸಿನಿಮಾ. ಕೆ.ಎಂ.ಚೈತನ್ಯ ನಿರ್ದೇಶಿಸಿದ ಈ ಸಿನಿಮಾ ಕನ್ನಡದ ಅತ್ಯುತ್ತಮ ಸಿನಿಮಾಗಳಲ್ಲೊಂದು. ಅಲ್ಲಿಂದ ಮತ್ತೆ ಅಂಡರ್‌ವರ್ಲ್ಡ್ ಕಥೆಗಳ ಕಡೆಗೆ ಮುಖ ಮಾಡಿರಲಿಲ್ಲ. ಆದ್ರೀಗ ಆ ದಿನಗಳು ಸಿನಿಮಾವನ್ನು ನೆನಪಿಸುವಂತಹ ಟೈಟಲ್ ಅನ್ನೇ ಇಟ್ಕೊಂಡು ಬಲರಾಮನ ದಿನಗಳು ಕಥೆ ಹೇಳುವುದಕ್ಕೆ ಹೊರಟಿದ್ದಾರೆ.**

# ಬಲರಾಮನ ದಿನಗಳು ಸಿನಿಮಾ ಆ ದಿನಗಳು ಪಾರ್ಟ್ 2 ನಾ?

### ಮೆಲೋಡಿ ರೊಮ್ಯಾಂಟಿಕ್ ಸಾಂಗ್ ರಿಲೀಸ್

- ಬಲರಾಮನ ದಿನಗಳು ಸಿನಿಮಾದ ಶುರು ಶುರು.. ಮೆಲೋಡಿ ರೊಮ್ಯಾಂಟಿಕ್ ಸಾಂಗ್ ರಿಲೀಸ್ ಆಗಿದೆ.
- ಜಯಂತ್ ಕಾಯ್ಕಿಣಿ ಸಾಹಿತ್ಯ ರಚಿಸಿದ್ದು, ಸಂಜಿತ್ ಹೆಗ್ಡೆ ಹಾಡಿದ್ದಾರೆ. ಈ ಹಾಡು ಸಿನಿಪ್ರಿಯರಿಗೆ ಮಧುರ ಅನುಭವವನ್ನು ಕೊಡುತ್ತಿದೆ.
- ವಿಶೇಷ ಅಂದರೆ, ಈ ಹಾಡನ್ನು ರಜನಿಕಾಂತ್ ಕಬಾಲಿಗೆ ಟ್ಯೂನ್ ಹಾಕಿದ್ದ ತಮಿಳಿನ ಮ್ಯೂಸಿಕ್ ಡೈರೆಕ್ಟರ್ ಸಂತೋಷ್ ನಾರಾಯಣನ್ ಸಂಗೀತ ನೀಡಿದ್ದಾರೆ.
- ಸದ್ಯ ಈ ಹಾಡುಗಳು ಯೂಟ್ಯೂಬ್‌ನಲ್ಲಿ ಟ್ರೆಂಡಿಂಗ್‌ನಲ್ಲಿದೆ.
- ಈ ಹಾಡು ನೋಡಿದ ಬಳಿಕ ಬಲರಾಮನ ದಿನಗಳು, ಆ ದಿನಗಳು ಸಿನಿಮಾದ ಪಾರ್ಟ್ 2 ಇರಬಹುದಾ? ಎಂಬ ಅನುಮಾನ ವ್ಯಕ್ತಪಡಿಸುತ್ತಿದ್ದಾರೆ.
- ಅದಕ್ಕೆ ನಿರ್ದೇಶಕ ಕೆ. ಚೈತನ್ಯ ಸ್ಪಷ್ಟತೆಯನ್ನೂ ನೀಡಿದ್ದಾರೆ.
- ಇನ್ನೊಂದು ವಿಶೇಷ ಅಂದರೆ, ಪದ್ಮಾವತಿ ಜಯರಾಮ್ ಮತ್ತು ಶ್ರೇಯಸ್ ಬಂಡವಾಳ ನಿರ್ಮಾಣ ಮಾಡಿರುವ ಈ ಸಿನಿಮಾ ಟೈಗರ್ ವಿನೋದ್ ಪ್ರಭಾಕರ್ ಅವರ 25ನೇ ಚಿತ್ರ.
- ಹೀಗಾಗಿ ಈ ಸಿನಿಮಾವನ್ನು ಬಿಗ್ ಬಜೆಟ್ ನಲ್ಲಿಯೇ ನಿರ್ಮಾಣ ಮಾಡಲಾಗುತ್ತಿದೆ.

ಇದೂವರೆಗೂ ರಿಲೀಸ್ ಆದ ಕಲ್ಟ್ ಸಿನಿಮಾಗಳ ಪಟ್ಟಿಯಲ್ಲಿ ಕೆ.ಎಂ ಚೈತನ್ಯ ನಿರ್ದೇಶನದ ಆ ದಿನಗಳು ಕೂಡ ಒಂದು. ಲವ್ ಸ್ಟೋರಿಯಲ್ಲಿ ಬಂದು ಹೋಗುವ ಭೂಗತ ಲೋಕವನ್ನು ಸೆನ್ಸಿಟಿವ್ ಆಗಿ ತೋರಿಸಿದ ಸಿನಿಮಾವಿದು. ಅಂಡರ್‌ವರ್ಲ್ಡ್ ಕಥೆಯನ್ನು ಅತಿಯಾದ ಹಿಂಸೆ ಇಲ್ಲದೆಯೂ ತೋರಿಸಬಹುದು ಎಂಬುವುದನ್ನು ಸಾಬೀತು ಮಾಡಿದ ಸಿನಿಮಾ. ಹೀಗಾಗಿ ಇಂದಿಗೂ ಆ ದಿನಗಳು ಅದೆಷ್ಟೋ ಸಿನಿ ಪ್ರೇಮಿಗಳ ಫೇವರಿಟ್ ಸಿನಿಮಾ.

ಕೆ.ಎಂ.ಚೈತನ್ಯ ನಿರ್ದೇಶಿಸಿದ ಈ ಸಿನಿಮಾ ಕನ್ನಡದ ಅತ್ಯುತ್ತಮ ಸಿನಿಮಾಗಳಲ್ಲೊಂದು. ಅಲ್ಲಿಂದ ಮತ್ತೆ ಅಂಡರ್‌ವರ್ಲ್ಡ್ ಕಥೆಗಳ ಕಡೆಗೆ ಮುಖ ಮಾಡಿರಲಿಲ್ಲ, ಆದ್ರೀಗ ಆ ದಿನಗಳು ಸಿನಿಮಾವನ್ನು ನೆನಪಿಸುವಂತಹ ಟೈಟಲ್ ಅನ್ನೇ ಇಟ್ಕೊಂಡು ಬಲರಾಮನ ದಿನಗಳು ಕಥೆ ಹೇಳುವುದಕ್ಕೆ ಹೊರಟಿದ್ದಾರೆ. ಈ ಸಿನಿಮಾ ಬಿಡುಗಡೆ ಸಿದ್ಧವಾಗಿ ಈಗಾಗಲೇ ಪ್ರಚಾರವನ್ನು ಶುರು ಮಾಡಿದೆ.

ಬಲರಾಮನ ದಿನಗಳು ಸಿನಿಮಾದ ಶುರು ಶುರು.. ಮೆಲೋಡಿ ರೊಮ್ಯಾಂಟಿಕ್ ಸಾಂಗ್ ರಿಲೀಸ್ ಆಗಿದೆ. ಜಯಂತ್ ಕಾಯ್ಕಿಣಿ ಸಾಹಿತ್ಯ ರಚಿಸಿದ್ದು, ಸಂಜಿತ್ ಹೆಗ್ಡೆ ಹಾಡಿದ್ದಾರೆ. ಈ ಹಾಡು ಸಿನಿಪ್ರಿಯರಿಗೆ ಮಧುರ ಅನುಭವವನ್ನು ಕೊಡುತ್ತಿದೆ. ವಿಶೇಷ ಅಂದರೆ, ಈ ಹಾಡನ್ನು ರಜನಿಕಾಂತ್ ಕಬಾಲಿಗೆ ಟ್ಯೂನ್ ಹಾಕಿದ್ದ ತಮಿಳಿನ ಮ್ಯೂಸಿಕ್ ಡೈರೆಕ್ಟರ್ ಸಂತೋಷ್ ನಾರಾಯಣನ್ ಸಂಗೀತ ನೀಡಿದ್ದಾರೆ. ಸದ್ಯ ಈ ಹಾಡುಗಳು ಯೂಟ್ಯೂಬ್‌ನಲ್ಲಿ ಟ್ರೆಂಡಿಂಗ್‌ನಲ್ಲಿದೆ. ಈ ಹಾಡು ನೋಡಿದ ಬಳಿಕ ಬಲರಾಮನ ದಿನಗಳು, ಆ ದಿನಗಳು ಸಿನಿಮಾದ ಪಾರ್ಟ್ 2 ಇರಬಹುದಾ? ಎಂಬ ಅನುಮಾನ ವ್ಯಕ್ತಪಡಿಸುತ್ತಿದ್ದಾರೆ. ಅದಕ್ಕೆ ನಿರ್ದೇಶಕ ಕೆ. ಚೈತನ್ಯ ಸ್ಪಷ್ಟತೆಯನ್ನೂ ನೀಡಿದ್ದಾರೆ.

ಇನ್ನೊಂದು ವಿಶೇಷ ಅಂದರೆ, ಪದ್ಮಾವತಿ ಜಯರಾಮ್ ಮತ್ತು ಶ್ರೇಯಸ್ ಬಂಡವಾಳ ನಿರ್ಮಾಣ ಮಾಡಿರುವ ಈ ಸಿನಿಮಾ ಟೈಗರ್ ವಿನೋದ್ ಪ್ರಭಾಕರ್ ಅವರ 25ನೇ ಚಿತ್ರ. ಹೀಗಾಗಿ ಈ ಸಿನಿಮಾವನ್ನು ಬಿಗ್ ಬಜೆಟ್‌ನಲ್ಲಿಯೇ ನಿರ್ಮಾಣ ಮಾಡಲಾಗುತ್ತಿದೆ. ವಿನೋದ್ ಪ್ರಭಾಕರ್‌ಗೆ ನಾಯಕಿಯಾಗಿ ಪ್ರಿಯಾ ಆನಂದ್ ಇದ್ದಾರೆ. ಇವರೊಂದಿಗೆ ಅವಿನಾಶ್, ಅತುಲ್ ಕುಲಕರ್ಣಿ, ಆಶಿಶ್ ವಿದ್ಯಾರ್ಥಿ, ವಿನಯ್ ಗೌಡ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ.

ಇನ್ನು ಬಲರಾಮನ ದಿನಗಳು ಹಾಡಿನ ಬಗ್ಗೆ, ಇದು ಆ ದಿನಗಳು ಪಾರ್ಟ್ 2 ಹೌದಾ? ಅಲ್ವಾ? ಅನ್ನೋದಕ್ಕೆ ಸ್ಪಷ್ಟತೆ ಕೊಟ್ಟಿದ್ದಾರೆ. ಶುರು ಶುರು ಹಾಡಿನ ಮೂಲಕ ಸಿನಿಮಾ ಪ್ರಚಾರ ಶುರು ಆಗಿದೆ. ಇದು ಆ ದಿನಗಳು ಸಿನಿಮಾದ ಪಾರ್ಟ್-2 ಅಲ್ಲ. ಬಲರಾಮನ ದಿನಗಳು ಸಿನಿಮಾ ಒಂದು ಕಾಲ್ಪನಿಕ ಕಥೆ. ನಿರ್ಮಾಪಕರಾದ ಶ್ರೇಯಸ್ ಮತ್ತು ಪದ್ಮಾವತಿ ಅವರು ವಿನೋದ್ ಪ್ರಭಾಕರ್‌ಗೆ ಆ ದಿನಗಳು ಚಿತ್ರದ ಮಾದರಿಯಲ್ಲಿ ಸಿನಿಮಾ ಮಾಡಬೇಕು ಎಂದು ಹೇಳಿದರು. ಇದೊಂದು ಗ್ಯಾಂಗ್‌ಸ್ಟರ್ ಸಿನಿಮಾ ಎಂದು ನಿರ್ದೇಶಕ ಕೆ.ಎಂ ಚೈತನ್ಯ ಹೇಳಿದ್ದಾರೆ.

ಬಲರಾಮನ ದಿನಗಳು ಚಿತ್ರಕ್ಕೆ ಆಡಿಯೋ ಕಂಪನಿಯೊಂದು ಗರಿಷ್ಠ ಮೊತ್ತ ನೀಡಿದೆ. ನನ್ನ ವೃತ್ತಿ ಬದುಕಿನ 25 ಸಿನಿಮಾಗಳಲ್ಲಿ ಆಡಿಯೋಗೆ ಗರಿಷ್ಠ ಮೊತ್ತ ನೀಡಿದ ಮೊದಲ ಚಿತ್ರವಿದು. ಜೊತೆಗೆ ಪಾತ್ರವೂ ಚೆನ್ನಾಗಿ ಮೂಡಿ ಬಂದಿದೆ. ನಿರ್ದೇಶಕ ಚೈತನ್ಯ ಕೆಲ ಸನ್ನಿವೇಶಗಳನ್ನು ಕಂಪೋಸ್ ಮಾಡಲು ಅವಕಾಶ ಕೊಟ್ಟಿದ್ದರಿಂದ ನಟಿ ಪ್ರಿಯಾ ಅವರ ಜೊತೆ ಚರ್ಚೆ ಮಾಡಿ ನಟಿಸಿದ್ದೇವೆ ಎಂದು ವಿನೋದ್ ಪ್ರಭಾಕರ್ ಸಿನಿಮಾ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನಟಿ ಪ್ರಿಯಾ ಆನಂದ್ ಹಾಗೂ ಸಂಗೀತ ನಿರ್ದೇಶಕ ಸಂತೋಷ್ ನಾರಾಯಣನ್ ಕೂಡ ಸಿನಿಮಾ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಕನ್ನಡದಲ್ಲಿ ರಾಜ ಕುಮಾರ ಆದ ಬಳಿಕ ಇದು ಐದನೇ ಚಿತ್ರ. ಕನ್ನಡ ಕಲಿಯಲು ಪುನೀತ್ ರಾಜ್ ಕುಮಾರ್ ಕಾರಣ. ಭಾಷೆ ಗೊತ್ತಿದ್ದರೆ ಸನ್ನಿವೇಶಗಳಲ್ಲಿ ಸುಲಭವಾಗಿ ನಟಿಸಲು ಸಾಧ್ಯವಾಗುತ್ತದೆ ಎಂದಿದ್ದರು. ಅವರನ್ನು ಮಿಸ್ ಮಾಡಿಕೊಳ್ಳುತ್ತಿದ್ದೇನೆ. ಬಲರಾಮನ ದಿನಗಳು ಚಿತ್ರ ಚೆನ್ನಾಗಿ ಬಂದಿದೆ ಎಂದು ಪ್ರಿಯಾ ಆನಂದ್ ಹೇಳಿದ್ರೆ, ಸಂತೋಷ್ ನಾರಾಯಣನ್ ಸುಮಾರು ಒಂದು ಸಾವಿರ ಸಿನಿಮಾಗಳಿಗೆ ಕೆಲಸ ಮಾಡಿದ್ದೇನೆ. ಶುರು ಶುರು ಹಾಡು ಆಗ್ರ 10 ಹಾಡುಗಳಲ್ಲಿ ಒಂದಾಗಲಿದೆ. ಜಯಂತ್ ಕಾಯ್ಕಿಣಿ ಅವರು ಉತ್ತಮ ಸಾಹಿತ್ಯ ನೀಡಿದ್ದಾರೆ ಎಂದು ಹೇಳಿದ್ದಾರೆ.


ಶುರು ಶುರು.. ಎನ್ನುತ್ತಾ ಸಿಹಿಗಾಳಿ ಬೀಸಿತೇ?

# ಸ್ತ್ರೀ ಅವತಾರದಲ್ಲಿ ಶಿವಣ್ಣ..!

ಶಿವರಾಜ್ ಕುಮಾರ್ ಅವರನ್ನು 45 ಚಿತ್ರದಲ್ಲಿ ಹೆಣ್ಣಿನ ವೇಷದಲ್ಲಿ ತೋರಿಸಿದ್ದಾರೆ ಅರ್ಜುನ್ ಜನ್ಯ. 45 ಟ್ರೇಲರ್ ಕೊನೆಗೆ ಉಪೇಂದ್ರ ಚೆಲುವೆಯ ನೋಟ ಚೆನ್ನ.. ಹಾಡಿಗೆ ಮೈಮ್ ಮಾಡಿದಾಗ ಅತಿಲೋಕ ಸುಂದರಿಯಂತೆ ತುಟಿ ಕೊಂಕಿಸುವುದು ಶಿವಣ್ಣ. 45ನಲ್ಲಿ ಶಿವಣ್ಣನ ಪಾತ್ರದ ಬಗ್ಗೆ ಕುತೂಹಲ ಹುಟ್ಟಿರುವುದೇ ಈ ಕಾರಣಕ್ಕೆ. 45 ಮಾಮೂಲಿ ಸಿನಿಮಾ ಟ್ರೇಲರ್ ನಂತೆ ಇಲ್ಲ. ರೆಗ್ಯುಲರ್ ಜಾನರ್‌ನಲ್ಲಿಲ್ಲ. ಸಂಥಿಂಗ್ ಈಸ್ ಡಿಫರೆಂಟ್.

ಸ್ಟಾರ್ ನಟರು ಹೆಣ್ಣಿನ ವೇಷ ಹಾಕುವುದು ಹೊಸದೇನಲ್ಲ. ಕನ್ನಡದಲ್ಲಿಯೇ ಡಾ.ರಾಜ್, ರಮೇಶ್, ಉಮೇಶ್, ಶರಣ್.. ಮೊದಲಾದ ಕೆಲವರು ಸ್ತ್ರೀ ಗೆಟಪ್ ಹಾಕಿದ್ದಾರೆ. ತಮಿಳಿನಲ್ಲಿ ಕಮಲ್ ಹಾಸನ್, ಶಿವಕಾರ್ತಿಕೇಯನ್ ಮೊದಲಾದವರೂ ಸ್ತ್ರೀ ವೇಷ ಹಾಕಿ ಗೆದ್ದಿದ್ದಾರೆ. ಸ್ತ್ರೀ ವೇಷ ಹಾಕಿ ನಟಿಸುವುದು ಎಷ್ಟು ಕಷ್ಟ ಎನ್ನುವುದು ಆ ಪಾತ್ರಗಳಲ್ಲಿ ವೇಷ ತೊಟ್ಟ ಕಲಾವಿದರನ್ನೇ ಕೇಳಿದರೆ ಅರ್ಥವಾಗುತ್ತದೆ.

ಟ್ರೇಲರಿನಲ್ಲಿ ಶಿವಣ್ಣ ಅವರ ಹೆಣ್ಣಿನ ಝಲಕ್ ಒಂದೇ ಒಂದು ಸೆಕೆಂಡ್ ಬರುತ್ತದೆ. ಆ ಒಂದು ಸೆಕೆಂಡಿನಲ್ಲಿಯೇ ಗಮನ ಸೆಳೆದುಬಿಡ್ತಾರೆ ಶಿವರಾಜ್ ಕುಮಾರ್. ಚಿತ್ರಲೋಕ ಈ ಹಿಂದೆ ಹೇಳಿದ್ದುದು ಇದೇ ಸ್ಪೆಷಲ್ ಗೆಟಪ್ ಕುರಿತಂತೆ. ಈ ಹಿಂದೆ ಶಿವರಾಜ್ ಕುಮಾರ್ ಎರಡು ಬಾರಿ ಸ್ತ್ರೀ ವೇಷದಲ್ಲಿ ಕಾಣಿಸಿಕೊಂಡಿದ್ದಾರೆ.

ಮಿಡಿದ ಶೃತಿ ಚಿತ್ರದಲ್ಲಿ ಸುಧಾರಾಣಿಗೆ ಹತ್ತಿರವಾಗಲು ಹೆಣ್ಣಿನ ವೇಷ ಧರಿಸಿ ಬರುವ ಪಾತ್ರ ಹಾಗೂ ಅಣ್ಣಾವ್ರ ಮಕ್ಕಳು ಚಿತ್ರದಲ್ಲಿ ವೇಶ್ಯಾವಾಟಿಕೆ ಮನೆ ಮೇಲೆ ರೇಡ್ ಮಾಡಲು ಬರುವಾಗ ಹೆಣ್ಣಿನ ವೇಷ ಧರಿಸುವ ಸೀನ್‌ನಲ್ಲಿ ಶಿವಣ್ಣ ನಟಿಸಿದ್ದಾರೆ. ಎರಡೂ ಚಿತ್ರಗಳು ಸೂಪರ್ ಹಿಟ್ ಎನ್ನುವುದನ್ನು ಮರೆಯುವಂತಿಲ್ಲ. ಈಗ 45 ಬರ್ತಾ ಇದೆ. ಡಿಸೆಂಬರ್ 25ರ ನಂತರ 45 ಕೂಡಾ ಹಿಟ್ ಸಾಲಿಗೆ ಸೇರಲಿದೆ ಎನ್ನುವುದು ಅಭಿಮಾನಿಗಳ ನಿರೀಕ್ಷೆ.



# ಇದೇ ತಿಂಗಳ 20ರಂದು ಹುಬ್ಬಳ್ಳಿಯಲ್ಲಿ ಕಿಚ್ಚನ ಮಾರ್ಕ್ ಸಿನಿಮಾದ ಪ್ರೀ ರಿಲೀಸ್ ಕಾರ್ಯಕ್ರಮ!



ಕಿಚ್ಚನ ಮಾರ್ಕ್ ಸಿನಿಮಾದ ಪ್ರಚಾರ ಕಾರ್ಯ ಜೋರಾಗಿ ಸಾಗ್ತಿದೆ. ಟ್ರೇಲರ್, ಹಾಡುಗಳ ಮೂಲಕ ಪ್ರೇಕ್ಷಕರಿಗೆ ಆಮಂತ್ರಣ ಕೊಟ್ಟಿರುವ ಚಿತ್ರತಂಡ, ನಿಮ್ಮನ್ನು ಭೇಟಿಯಾಗೋದಿಕ್ಕೆ ಗಂಡು ಮೆಟ್ಟಿದನಾಡು ಹುಬ್ಬಳ್ಳಿಗೆ ಬರ್ತಿದೆ.

ಹುಬ್ಬಳ್ಳಿಯಲ್ಲಿ ಮಾರ್ಕ್ ಚಿತ್ರದ ಪ್ರೀ ರಿಲೀಸ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇದೇ ತಿಂಗಳ 20 ರಂದು ಕಾರ್ಯಕ್ರಮ ನಡೆಯುತ್ತದೆ. ಕಿಚ್ಚ ಸುದೀಪ್, ಸೇರಿದಂತೆ ಸಿನಿಮಾ ಬಹುತೇಕ ಕಲಾವಿದರು ಹುಬ್ಬಳ್ಳಿಗೆ ಬರ್ತಿದ್ದಾರೆ. ನೆಹರು ಮೈದಾನದಲ್ಲಿ ಮಾರ್ಕ್ ಪ್ರೀ ರಿಲೀಸ್ ಕಾರ್ಯಕ್ರಮ ನಡೆಯಲಿದೆ.

# ಕಾಡಾನೆ- ಮಾನವ ಸಂಘರ್ಷ ಸಮಸ್ಯೆಗೆ ಶಾಶ್ವತ ಪರಿಹಾರ

## ಅರ್ಜುನ ಸ್ಮಾರಕ ಹೋರಾಟಗಾರರ ಮೇಲಿನ ಎಲ್ಲಾ ಮೊಕದ್ದಮೆ ವಾಪಸ್ ಪಡೆಯಿರಿ | ಸರ್ವ ಪಕ್ಷ- ಸಂಘಟನೆಗಳ ಸಭೆ ಒತ್ತಾಯ

• ಪ್ರಜೋದಯ ವರದಿ

**ಸಕಲೇಶಪುರ:** ಅಂಬಾರಿ ಆನೆ ಅರ್ಜುನ ಸ್ಮಾರಕ ನಿರ್ಮಾಣಕ್ಕೆ ಸಂಬಂಧಿಸಿ ಹೋರಾಟ ನಡೆಸಿದ ಚಳುವಳಿಗಾರರ ಮೇಲೆ ದಾಖಲಾಗಿರುವ ಎಲ್ಲಾ ಮೊಕದ್ದಮೆಗಳನ್ನು ತಕ್ಷಣವೇ ಹಿಂಪಡೆಯಬೇಕು, ಕಾಡಾನೆ- ಮಾನವ ಸಂಘರ್ಷ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು ಹಾಗೂ ಆನೆದಾಮ (ಎಲಿಫೆಂಟ್ ಕಾರಿಡಾರ್) ನಿರ್ಮಿಸಬೇಕು ಎಂಬ ಒತ್ತಾಯದೊಂದಿಗೆ ಸರ್ವ ಪಕ್ಷ- ಸರ್ವ ಸಂಘಟನೆಗಳ ಸಭೆ ನಡೆಯಿತು.

ಪಟ್ಟಣದ ಒಕ್ಕಲಿಗರ ಸಮುದಾಯ ಭವನದಲ್ಲಿ ನಡೆದ ಸಭೆಗೆ ಮಾಜಿ ಶಾಸಕ ಎಚ್.ಎಂ.ವಿಶ್ವನಾಥ್ ಅಧ್ಯಕ್ಷತೆ ವಹಿಸಿದ್ದರು. ತಾಲ್ಲೂಕಿನ ವಿವಿಧ ಸಂಘಟನೆಗಳ ನಾಯಕರು, ಹೋರಾಟಗಾರರು ಹಾಗೂ ಸಾರ್ವಜನಿಕರು ಸಭೆಯಲ್ಲಿ ಪಾಲ್ಗೊಂಡು ಮೂರು ಪ್ರಮುಖ ನಿರ್ಣಯಗಳನ್ನು ಕೈಗೊಂಡರು.

**ಪ್ರಮುಖ ನಿರ್ಣಯಗಳು:**

ಅರ್ಜುನ ಸ್ಮಾರಕ ಹೋರಾಟಗಾರರ ಮೇಲಿನ ಎಲ್ಲಾ ಮೊಕದ್ದಮೆಗಳನ್ನು ತಕ್ಷಣವೇ ರದ್ದುಪಡಿಸಬೇಕು. ಕಾಡಾನೆಮಾನವ ಸಂಘರ್ಷ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಸರ್ಕಾರದೊಂದಿಗೆ ಮಾತುಕತೆ ನಡೆಸಬೇಕು. ಮಾತುಕತೆ ಫಲಕಾರಿಯಾಗದಿದ್ದಲ್ಲಿ ಮುಂದಿನ ಹೋರಾಟದ ದಿಕ್ಕು ನಿರ್ಧರಿಸಬೇಕು. ಜೊತೆಗೆ ಶ್ರೀಲಂಕಾ ಮಾದರಿಯಲ್ಲಿ ಆನೆದಾಮ ನಿರ್ಮಿಸಲು ಸರ್ಕಾರ ಮುಂದಾಗಬೇಕು ಎಂದು ಸಭೆ ಒತ್ತಾಯಿಸಿತು.

ಸಭೆಯ ನಂತರ ಸಭೆಯ ಪ್ರತಿನಿಧಿಗಳು ಡಿವೈಎಸ್‌ಪಿ ಕಚೇರಿಗೆ ತೆರಳಿ ಡಿವೈಎಸ್‌ಪಿ ಮಾಲತೇಶ ಅವರಿಗೆ ಮನವಿ ಸಲ್ಲಿಸಿದರು. ಚಳುವಳಿಗಾರರ



ವಿರುದ್ಧ ಪೂರ್ವಗ್ರಹ ಪೀಡಿತವಾಗಿ ಮೊಕದ್ದಮೆ ದಾಖಲಿಸಿರುವುದು ಸರಿಯಾದ ಕ್ರಮವಲ್ಲ. ಹೋರಾಟಗಾರರನ್ನು ಅಪರಾಧಿಗಳಂತೆ ಕಾಣಬಾರದು. ಸಂಬಂಧಪಟ್ಟ ಎಲ್ಲಾ ಪ್ರಕರಣಗಳನ್ನು ರದ್ದುಪಡಿಸಲು ಸಹಕರಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಯಿತು.

ಮಾಧ್ಯಮದವರೊಂದಿಗೆ ಮಾತನಾಡಿದ ಮಾಜಿ ಶಾಸಕ ಎಚ್.ಎಂ. ವಿಶ್ವನಾಥ್ ಅವರು, ಕಾಡಾನೆ ಸಮಸ್ಯೆಯನ್ನು ಬಗೆಹರಿಸಲು ವಿಫಲವಾದ ಸರ್ಕಾರಗಳು, ಸಮಸ್ಯೆ ಪರಿಹಾರಕ್ಕೆ ಒತ್ತಾಯಿಸುವ ಹೋರಾಟಗಾರರನ್ನು ದಮನಿಸುವುದು ಸರಿಯಾದ ಬೆಳವಣಿಗೆ ಅಲ್ಲ. ಹೋರಾಟಗಳನ್ನು ಹತ್ತಿಕ್ಕುವುದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ನೈಜ ಸಮಸ್ಯೆಗೆ ಶಾಶ್ವತ ಪರಿಹಾರ ನೀಡುವ ಹೊಣೆಗಾರಿಕೆಯನ್ನು ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ವಹಿಸಬೇಕು ಎಂದರು.

ನಾನು ಹೋರಾಟದ ಮೂಲಕವೇ ಸಾರ್ವಜನಿಕ ಜೀವನಕ್ಕೆ ಬಂದವನು. ಹೋರಾಟಗಾರರ ಮೇಲಿನ ದೌರ್ಜನ್ಯವನ್ನು ನೋಡಿ ಮೌನವಾಗಿರಲು ಸಾಧ್ಯವಿಲ್ಲ. ನಮ್ಮ ತಾಲ್ಲೂಕಿನಲ್ಲಿ ನನ್ನಂತಹ ಮನಸ್ಥಿತಿಯ ಅನೇಕರು ಇದ್ದಾರೆ. ಅಗತ್ಯವಿದ್ದರೆ ಸರ್ಕಾರದೊಂದಿಗೆ ಮಾತುಕತೆ ನಡೆಸಲಾಗುವುದು. ಅದೂ ಫಲ ನೀಡದಿದ್ದರೆ ಹೋರಾಟದ ದಾರಿಯನ್ನೇ ಆಯ್ಕೆ ಮಾಡಬೇಕಾಗುತ್ತದೆ ಎಂದು ಅವರು ಎಚ್ಚರಿಸಿದರು.

ಪ್ರಗತಿಪರ ಸಂಘಟನೆಗಳ ಅಧ್ಯಕ್ಷ ಮಲೆನಾಡ್ ಮೆಹಬೂಬ್ ಮಾತನಾಡಿ, ಅನ್ಯಾಯದ ವಿರುದ್ಧ ಪ್ರಶ್ನಿಸುವುದು ಹಾಗೂ ಹೋರಾಟ ನಡೆಸುವುದು ಭಾರತದ ಪ್ರಜಾಪ್ರಭುತ್ವದ ಸೌಂದರ್ಯ. ಆದರೆ ಹೋರಾಟಗಳನ್ನು ಹತ್ತಿಕ್ಕಲು ಮೊಕದ್ದಮೆ ದಾಖಲಿಸುವುದು ವ್ಯವಸ್ಥೆಯನ್ನು ಕುರೂಪಗೊಳಿಸುವ ಕೆಲಸ. ಇದೇ ಪ್ರಯತ್ನವನ್ನು ಕಾಡಾನೆ ಹೋರಾಟಗಾರರ ವಿರುದ್ಧ ಬಳಸಲಾಗುತ್ತಿದೆ. ಇದು ಅತ್ಯಂತ ವಿಷಾದನೀಯ ಎಂದರು.

ಸಭೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಜೈಮಾರುತಿ ದೇವರಾಜ್, ಮಲೆನಾಡು ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಜಾನೇಕೆರೆ ಸಾಗರ್, ದಲಿತ ಹೋರಾಟಗಾರ ಲಕ್ಷ್ಮಣ್ ಕೀರ್ತಿ, ಕರ್ನಾಟಕ ರಕ್ಷಣಾ ವೇದಿಕೆ ತಾಲ್ಲೂಕು ಅಧ್ಯಕ್ಷ ರಮೇಶ್ ಪೂಜಾರಿ, ಕಮ್ಯುನಿಸ್ಟ್ ಪಕ್ಷದ ಮುಖಂಡ ಹರೀಶ್, ನಿವೃತ್ತ ಪಿಡಿಒ ಕುಮಾರಯ್ಯ, ಜೆಡಿಎಸ್ ಮುಖಂಡ ಸಾಬಾ ಭಾಸ್ಕರ್, ಬೆಕ್ಕನಳ್ಳಿ ನಾಗರಾಜ್, ಪುರಸಭೆ ಮಾಜಿ ಅಧ್ಯಕ್ಷ ಕಾಡಪ್ಪ, ಕಾಂಗ್ರೆಸ್ ಮುಖಂಡ ಸಣ್ಣಸ್ವಾಮಿ, ಬಿಜೆಪಿ ಮುಖಂಡ ಅಶ್ವತ್, ಸಿಐಟಿಯು ನಾಯಕಿ ಸೌಮ್ಯ, ಪತ್ರಕರ್ತರ ಸಂಘದ ಅಧ್ಯಕ್ಷ ಜೈ ಭೀಮ್ ಮಂಜು, ಮಾಸವಳ್ಳಿ ಚಂದ್ರು, ನಾರಾಯಣ ಆಳ್ವ ಇನ್ನಿತರರು ಉಪಸ್ಥಿತರಿದ್ದರು.

# ಭಾರತದ ಆರ್ಥಿಕ ಬೆಳವಣಿಗೆ ದರ ಶೇ.8 ಕ್ಕಿಂತ ಹೆಚ್ಚು: ಪ್ರಧಾನಿ ಮೋದಿ

• ಪ್ರಜೋದಯ ವರದಿ

**ಹೊಸದಿಲ್ಲಿ:** ವಿಶ್ವದ ದೊಡ್ಡ ಆರ್ಥಿಕತೆಗಳು ಕಷ್ಟಪಡುತ್ತಿರುವಾಗ, ಭಾರತ ಶೇ.8 ಕ್ಕಿಂತ ಹೆಚ್ಚಿನ ಬೆಳವಣಿಗೆ ದರವನ್ನು ಕಾಯ್ದುಕೊಂಡಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ತಿಳಿಸಿದ್ದಾರೆ.

ಒಮಾನ್‌ನಲ್ಲಿರುವ ಭಾರತೀಯ ಸಮುದಾಯವನ್ನು ಉದ್ದೇಶಿಸಿ ಮಾತನಾಡಿದ ಅವರು, ಭಾರತವು ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಮುಂದುವರೆದಿದೆ ಎಂದು ಹೇಳಿದ್ದಾರೆ.

ಭಾರತದ ಆರ್ಥಿಕತೆಯು ಜಾಗತಿಕ ಸವಾಲುಗಳ ನಡುವೆಯೂ 8% ಕ್ಕಿಂತ ಹೆಚ್ಚಿನ ಬೆಳವಣಿಗೆಯನ್ನು ಸಾಧಿಸಿದೆ ಎಂದು ಅವರು ತಿಳಿಸಿದರು. ವಿಶ್ವದ ಪ್ರಮುಖ ಆರ್ಥಿಕತೆಗಳು ಶೇಕಡಾ ಕೆಲವು ಅಂಕಗಳ ಬೆಳವಣಿಗೆಗಾಗಿ ಹೋರಾಡುತ್ತಿರುವಾಗ, ಭಾರತವು ತನ್ನ ಸಾಮರ್ಥ್ಯವನ್ನು ಪ್ರದರ್ಶಿಸುತ್ತಾ ಹೆಚ್ಚಿನ ಬೆಳವಣಿಗೆಯ ದರವನ್ನು ಕಾಯ್ದುಕೊಂಡಿದೆ ಎಂದು ಹೇಳಿದರು.



ಒಮಾನ್‌ನ ಮಸ್ಕತ್‌ನಲ್ಲಿ 'ಮೈತ್ರಿ ಪರ್ವ' ಕಾರ್ಯಕ್ರಮದ ಅಂಗವಾಗಿ ನಡೆದ ಸಮುದಾಯ ಕಾರ್ಯಕ್ರಮದಲ್ಲಿ ಮೋದಿ ತಿಳಿಸಿದ್ದಾರೆ.

ಇತ್ತೀಚೆಗೆ ಬಿಡುಗಡೆಯಾದ ಆರ್ಥಿಕ ಬೆಳವಣಿಗೆಯ ದತ್ತಾಂಶದ ಪ್ರಕಾರ, ಭಾರತದ ಬೆಳವಣಿಗೆಯು ಶೇ.8.2 ತಲುಪಿದೆ. ಇದು ಹಿಂದಿನ ತ್ರೈಮಾಸಿಕದಲ್ಲಿ ದಾಖಲಾಗಿದ್ದ 7.8 ರಷ್ಟು ಬೆಳವಣಿಗೆಗಿಂತ ಹೆಚ್ಚಾಗಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಗಸ್ಟ್‌ನಲ್ಲಿ ಭಾರತದ ರಫ್ತುಗಳ ಮೇಲೆ ಶೇ.50 ಸುಂಕ ವಿಧಿಸಿದ್ದರೂ, ಭಾರತದ ಆರ್ಥಿಕ ಬೆಳವಣಿಗೆಯು ಗಮನಾರ್ಹವಾಗಿ ಮುಂದುವರೆದಿದೆ.

# ಯೋಜನೆಗಳ ಸದುಪಯೋಗ ಪಡೆದುಕೊಳ್ಳಿ

• ಪ್ರಜೋದಯ ವರದಿ

**ಹಾಸನ:** ಹೊಸ ಬಗೆಯ ಉದ್ದಿಮೆಗಳ ಉತ್ತೇಜನಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ಜಾರಿಗೆ ತಂದಿರುವ ಯೋಜನೆಗಳ ಕುರಿತು ಮಾಹಿತಿ ಪಡೆದುಕೊಳ್ಳುವುದರ ಮೂಲಕ ಸದುಪಯೋಗ ಪಡೆದುಕೊಳ್ಳಿ ಎಂದು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಉಮೇಶ್ ತಿಳಿಸಿದ್ದಾರೆ.

ನಗರದ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆಯಲ್ಲಿ ನಡೆದ ಒಂದು ದಿನದ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಉದ್ದಿಮೆದಾರರಿಗೆ ತಾಂತ್ರಿಕ ಸಾಮರ್ಥ್ಯ ವೃದ್ದಿಸುವುದು, ತಂತ್ರಜ್ಞಾನ ಅಳವಡಿಕೆ, ಮಾರುಕಟ್ಟೆ ಪ್ರವೇಶಿಸುವಲ್ಲಿ ಸಹಾಯ ಮತ್ತು ಆರ್ಥಿಕ ಸಾಕ್ಷರತೆಯಲ್ಲಿ ಮಾರ್ಗದರ್ಶನ ನೀಡುವಂತೆ ಹೆಚ್ಚಿನ ತಿಳುವಳಿಕೆ ನೀಡಲು ಅರಿವು





ಮೂಡಿಸುವಂತೆ ಹೇಳಿದರು.

ಜಿಲ್ಲಾ ಲಘು ಉದ್ಯೋಗ ಭಾರತಿ, ನಿರ್ದೇಶಕ ಮದನ್‌ಕುಮಾರ್ ಮಾತನಾಡಿ, ದೇಶದಲ್ಲಿ ಹೊಸ ಉದ್ದಿಮೆದಾರರಿಗೆ ಉದ್ದಿಮೆ ಮಾಡಲು ಜಿಲ್ಲಾ ಕೈಗಾರಿಕಾ ಕೇಂದ್ರದಿಂದ ಕೈಗಾರಿಕೆಗಳಿಗೆ ನೀಡುವ ಸಹಾಯಧನದ ಬಗ್ಗೆ ಮತ್ತು ಬ್ಯಾಂಕ್‌ನಿಂದ ಸಿಗುವ ಸಾಲ ಸೌಲಭ್ಯಗಳ ಬಗ್ಗೆ ಹಾಗೂ ಉದ್ದಿಮೆಯನ್ನು ಪ್ರಾರಂಭ ಮಾಡುವವರಿಗೆ ಶ್ರಮ, ಶ್ರದ್ದೆ, ಸಂಯಮ ಇರಬೇಕೆಂದು ಅವರು ತಿಳಿಸಿದರು.

ಹಾಸನ ಜಿಲ್ಲಾ ಕೆನರಾ ಬ್ಯಾಂಕ್, ಅಗ್ರಣೀಯ ಬ್ಯಾಂಕ್ ವ್ಯವಸ್ಥಾಪಕಿ ಲತಾ ಸರಸ್ವತಿ, ಜಿಲ್ಲಾ ಕೈಗಾರಿಕಾ ಸಂಘದ ಅಧ್ಯಕ್ಷ ಶಿವರಾಮ್, ಜಿಲ್ಲಾ ಆರ್.ಸೆ.ಟಿ, ನಿರ್ದೇಶಕ ಸುಚಿತ್ ಕುಮಾರ್, ಜಿಲ್ಲಾ ಕೆ.ವಿ.ಐ.ಬಿ, ಜಿಲ್ಲಾ ಅಧಿಕಾರಿ ಉಮೇಶ್ ಶಂಕರ ರಾಜ್, ಜಿಲ್ಲಾ ಕೈಗಾರಿಕಾ ಕೇಂದ್ರದ ಸಹಾಯಕ ನಿರ್ದೇಶಕ ಮೋಹನ್ ಕುಮಾರ್ ಮತ್ತಿತರರಿದ್ದರು.

# ಆಲೂರು: 5103 ಮಕ್ಕಳಿಗೆ ಲಸಿಕೆ ಹಾಕುವ ಗುರಿ

• ಪ್ರಜೋದಯ ವರದಿ

**ಆಲೂರು:** ತಾಲ್ಲೂಕಿನಲ್ಲಿ ಡಿ.21 ರಂದು ನಡೆಯಲಿರುವ ಪಲ್ ಪೋಲಿಯೊ ಲಸಿಕೆ ಕಾರ್ಯಕ್ರಮದಲ್ಲಿ ಒಟ್ಟು 5103 ಮಕ್ಕಳಿಗೆ ಪೋಲಿಯೊ ಹನಿ ಹಾಕುವ ಗುರಿ ಹೊಂದಲಾಗಿದೆ ಎಂದು ತಹಶೀಲ್ದಾರ್ ಮಲ್ಲಿಕಾರ್ಜುನ ತಿಳಿಸಿದರು.

ಪಟ್ಟಣದ ಮಿನಿ ವಿದಾನಸೌಧ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಪೂರ್ವಬಾವಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಾರ್ಯಕ್ರಮ ಯಶಸ್ವಿಗೊಳಿಸಲು ಪ್ರತಿಯೊಂದು ಇಲಾಖೆಯ ಸಹಕಾರ ಅಗತ್ಯವಾಗಿದೆ. ಡಿ. 18 ರಿಂದ ಒಂದು ವಾರ ನಿರಂತರವಾಗಿ ವಿದ್ಯುತ್ ಸಂಪರ್ಕ ಕಡಿತವಾಗದಂತೆ ಸೆಸ್ಕ್ ಇಲಾಖೆ ಸಹಕರಿಸಬೇಕು. ಕೆ. ಹೊಸಕೋಟೆ, ಅಬ್ಬನ ಮತ್ತು ರಾಯರ



ಕೊಪ್ಪಲು ಪ್ರಾಥಮಿಕ ಆರೋಗ್ಯ ಕೇಂದ್ರಗಳ ವ್ಯಾಪ್ತಿಯಲ್ಲಿ 63 ಅಪಾಯಕಾರಿ ಪ್ರದೇಶಗಳನ್ನು ಗುರುತಿಸಲಾಗಿದ್ದು, ಲಸಿಕೆ ನೀಡಲು ಮೊಬೈಲ್ ತಂಡವನ್ನು ರಚಿಸಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ. ನಿಸಾರ್ ಫಾತಿಮ ಅವರು ಮಾತನಾಡಿ, ಕಳೆದ ಸಾಲಿನಲ್ಲಿ ಶೇ.101 ಗುರಿ ಸಾಧಿಸಲಾಗಿತ್ತು. 94 ಅಂಗನವಾಡಿ ಕಾರ್ಯಕರ್ತೆಯರು, 75 ಆಶಾ ಕಾರ್ಯಕರ್ತೆಯರು, 13 ಇಲಾಖೆ ಸಿಬ್ಬಂದಿಗಳು, 8 ಸ್ವಯಂ ಸೇವಕರು ಲಸಿಕೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. 184 ವ್ಯಾಕ್ಸಿನೇಟರ್‌ಗಳು, 9 ಮೇಲ್ವಿಚಾರಕರಿದ್ದಾರೆ. ಗ್ರಾಮೀಣ ಬೂತ್‌ಗಳಲ್ಲಿ ವ್ಯಾಕ್ಸಿನೇಟರ್‌ಗಳಿಗೆ ಪಂಚಾಯಿತಿ ವತಿಯಿಂದ ಆಹಾರ ಒದಗಿಸಲಬೇಕು. ಮಲೆನಾಡು ಪ್ರದೇಶಗಳಾದ ಕೆ. ಹೊಸಕೋಟೆ, ಗಂಜಿಗೆರೆ, ಚನ್ನಾಪುರ ಗ್ರಾಮಗಳ ವ್ಯಾಪ್ತಿ ವಲಸೆ ಪ್ರದೇಶವಾಗಿರುವುದರಿಂದ ಹೆಚ್ಚಿನ ಜಾಗ್ರತೆ ವಹಿಸಲಾಗಿದೆ. ಪಟ್ಟಣದ ಸಾರಿಗೆ ಬಸ್ ನಿಲ್ದಾಣದಲ್ಲಿ ಬೂತ್ ತೆರೆಯಲಾಗಿದೆ ಎಂದು ಹೇಳಿದರು.

ಲಸಿಕೆ ಪಡೆಯದೆ ಉಳಿದಿರುವ ಮಕ್ಕಳಿಗೆ ಪಟ್ಟಣ ಪ್ರದೇಶದಲ್ಲಿ ಮೂರು ದಿನ ಮತ್ತು ಗ್ರಾಮೀಣ ಪ್ರದೇಶದಲ್ಲಿ ಎರಡು ದಿನ ಲಸಿಕೆ ನೀಡಲಾಗುವುದು. ಲಸಿಕೆಯಿಂದ ವಂಚಿತರಾಗದಂತೆ ಪೋಷಕರು ಜಾಗ್ರತೆ ವಹಿಸಬೇಕು ಎಂದು ಸಲಹೆ ನೀಡಿದರು.

ತಾ.ಪಂ. ವ್ಯವಸ್ಥಾಪಕರು, ಪ.ಪಂ. ಮುಖ್ಯಾಧಿಕಾರಿ ಮಂಜುನಾಥ್, ಇಲಾಖೆ ಸಿಬ್ಬಂದಿಗಳು, ಆರೋಗ್ಯ ಕಾರ್ಯಕರ್ತರು ಉಪಸ್ಥಿತರಿದ್ದರು.

# ವಿಶ್ರಾಂತ ಕುಲಪತಿ ಪ್ರೊ.ಎಸ್.ಎನ್. ಹೆಗ್ಡೆ ನಿಧನ: ಸಂತಾಪ

• ಪ್ರಜೋದಯ ವರದಿ

**ಹಾಸನ:** ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದ ಪ್ರೊ. ಎಸ್.ಎನ್ ಹೆಗ್ಡೆ ಅವರು ನಿಧನರಾಗಿದ್ದಾರೆ.

ಹಾಸನ ವಿಶ್ವವಿದ್ಯಾಲಯದ ಆಡಳಿತ ವರ್ಗ, ಅಧ್ಯಾಪಕರು, ಅಧ್ಯಾಪಕೇತರರು ಮತ್ತು ವಿದ್ಯಾರ್ಥಿ ಬಳಗದವರು ಸಂತಾಪ ಸೂಚಿಸಿದ್ದಾರೆ.

ಮೃತರ ಆತ್ಮಕ್ಕೆ ಶಾಂತಿಯನ್ನು ಮತ್ತು ಅವರ ಕುಟುಂಬ ಸದಸ್ಯರಿಗೆ ಅವರ ಆಗಲಿಕೆಯ ದುಃಖವನ್ನು ಸಹಿಸುವ ಶಕ್ತಿಯನ್ನು ಭಗವಂತನು ನೀಡಲಿ ಎಂದು ಹಾಸನ ವಿಶ್ವವಿದ್ಯಾಲಯದ ಕುಲ ಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಕ್ಕಳಿಗೆ ಹೆಚ್ಚು ಅಂಕ ಗಳಿಸುವಂತೆ ಒತ್ತಡ ಹೇರಬೇಡಿ

• ಪ್ರಜೋದಯ ವರದಿ

**ಸಕಲೇಶಪುರ:** ಅಂಕಗಳನ್ನು ಮಾತ್ರ ಮಾನದಂಡವನ್ನಾಗಿ ಮಾಡಿಕೊಂಡು ಮಕ್ಕಳ ಮೇಲೆ ಒತ್ತಡ ಹೇರಬಾರದು ಎಂದು ಲೇಖಕ ಡಾ.ಹಂಪನಹಳ್ಳಿ ತಿಮ್ಮೇಗೌಡ ಹೇಳಿದರು.

ಪಟ್ಟಣದ ರೋಟರಿ ಆಂಗ್ಲ ಶಾಲೆಯಲ್ಲಿ ಆಯೋಜಿಸಿದ್ದ 45ನೇ ವರ್ಷದ ಪ್ರತಿಭಾ ಡೇ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಕಡಿಮೆ ಅಂಕ ಪಡೆದ ವಿದ್ಯಾರ್ಥಿಗಳನ್ನು ಅವಮಾನಿಸುವುದು ಅಥವಾ ಹೆಚ್ಚು ಅಂಕಗಳನ್ನು ಗಳಿಸಬೇಕೆಂದು ಒತ್ತಡ ಹೇರುವುದರಿಂದ ಆ ಮಕ್ಕಳಲ್ಲಿ ಅಡಗಿರುವ ಇನ್ನೊಂದು ಪ್ರತಿಭೆಯ ಭವಿಷ್ಯ ನಾಶವಾದಂತಾಗುತ್ತದೆ ಎಂದು ಎಚ್ಚರಿಸಿದರಲ್ಲದೆ, ಹೆಚ್ಚು ಅಂಕ ಪಡೆದ ಅನೇಕ ವಿದ್ಯಾವಂತರು ಸಮಾಜದಲ್ಲಿ ಸಣ್ಣ ಸಮಸ್ಯೆ ಎದುರಿಸುವುದಕ್ಕೂ





ಹೆದರುತ್ತಿರುವುದನ್ನು ನಾವು ನೋಡುತ್ತಿದ್ದೇವೆ ಎಂದರು.

ಮಕ್ಕಳನ್ನು ಸಮಾಜದೊಂದಿಗೆ, ಅಕ್ಕಪಕ್ಕದವರು ಹಾಗೂ ಕುಟುಂಬದವರೊಂದಿಗೆ ಬೆರೆಸಿ ಬೆಳೆಸಬೇಕು. ಮಕ್ಕಳಿಗೆ ನೈತಿಕ ಮೌಲ್ಯಗಳ ಶಿಕ್ಷಣ ಅತ್ಯಂತ ಅಗತ್ಯವಾಗಿದೆ. ಬಾಲ್ಯದಲ್ಲಿಯೇ ಹಣ ಹಾಗೂ ಸಂಪತ್ತಿನ ಮೇಲಿನ ಅತಿಯಾದ ವ್ಯಾಮೋಹವನ್ನು ಮಕ್ಕಳಲ್ಲಿ ಬೆಳೆಸಿದರೆ, ಮುಂದೆ ಅದೇ ಮಕ್ಕಳು ತಮ್ಮ ತಂದೆ- ತಾಯಿಗಳನ್ನು ವೃದ್ಧಾಶ್ರಮಕ್ಕೆ ಕಳುಹಿಸುವ ಪರಿಸ್ಥಿತಿ ಉಂಟಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಸಹಜವಾಗಿ ರೈತರು ಹಾಗೂ ಬಡವರ ಕುಟುಂಬದ ತಂದೆ-ತಾಯಿಗಳು ವೃದ್ಧಾಶ್ರಮದಲ್ಲಿ ಕಾಣಿಸಿಕೊಳ್ಳುವುದಿಲ್ಲ. ಆದರೆ ಉನ್ನತ ಶಿಕ್ಷಣ ಪಡೆದು ಲಕ್ಷಾಂತರ ರೂಪಾಯಿ ಸಂಪಾದನೆ ಮಾಡುತ್ತಿರುವ ಶ್ರೀಮಂತ ಕುಟುಂಬಗಳವರೇ ಇಂದು ಶೇ. 90ಕ್ಕಿಂತ ಹೆಚ್ಚು ವೃದ್ಧಾಶ್ರಮಗಳಲ್ಲಿ ಇದ್ದಾರೆ. ಹಿಂದೆ ವಿದೇಶಗಳಲ್ಲಿ ಮಾತ್ರ ವೃದ್ಧಾಶ್ರಮ ಸಂಸ್ಕೃತಿ ಹೆಚ್ಚು ಇತ್ತು.

ಆದರೆ ಇಂದು ನಮ್ಮ ದೇಶದ ಹಳ್ಳಿಗಳಿಗೂ ಸಹ ಈ ಸಂಸ್ಕೃತಿ ಹರಡುತ್ತಿರುವುದು ಕಳವಳಕಾರಿಯಾಗಿದೆ. ಮಕ್ಕಳಿಗೆ ಬಾಲ್ಯದಿಂದಲೇ ಹಣ ಕ್ಕಿಂತ ಜ್ಞಾನ ಮುಖ್ಯ, ಆಸ್ತಿಗಿಂತ ನೈತಿಕ ಮೌಲ್ಯಗಳು ಮುಖ್ಯ ಎಂಬ ಪಾಠವನ್ನು ಕಲಿಸಬೇಕಾಗಿದೆ ಎಂದು ಅವರು ಸಲಹೆ ನೀಡಿದರು.

ರೋಟರಿ ವಿದ್ಯಾ ಸಂಸ್ಥೆಯ ಅಧ್ಯಕ್ಷ ಎಂ.ಎಸ್. ವಿಜಯಶಂಕರ್, ಕಾರ್ಯದರ್ಶಿ ಅರುಣ್ ರಕ್ಷಿದಿ, ರೋಟರಿ ಟ್ರಸ್ಟ್ ಅಧ್ಯಕ್ಷ ಎನ್.ಸಿ. ಸ್ವಾಮಿ, ಕಾರ್ಯದರ್ಶಿ ರವಿಕುಮಾರ್, ರೋಟರಿ ಸಂಸ್ಥೆಯ ಅಧ್ಯಕ್ಷ ಕೆ.ಜಿ. ಚಂದ್ರಶೇಖರ್, ಕಾರ್ಯದರ್ಶಿ ಎಂ.ಡಿ. ವಿಜಿತ್, ಪ್ರಾಂಶುಪಾಲ ಸುಮಂತ್ ಭಾರ್ಗವ್, ಮುಖ್ಯ ಶಿಕ್ಷಕ ಎಂ.ಡಿ. ರುದ್ರೇಶ್, ಮುಖ್ಯ ಶಿಕ್ಷಕಿ ಬಿ.ಡಿ.ರತ್ನ, ವಿಜಯ್‌ಕುಮಾರ್ ಜೈನ್ ಇದ್ದರು.

# ತಹಶೀಲ್ದಾರ್ ನೇತೃತ್ವದಲ್ಲಿ ವಾಹನಗಳ ತೆರವು ಕಾರ್ಯಾಚರಣೆ

## ಜಿಲ್ಲಾಧಿಕಾರಿ ಆದೇಶದ ಹಿನ್ನೆಲೆ | ಎಚ್ಚೆತ್ತುಕೊಂಡ ಬೇಲೂರು ತಾಲ್ಲೂಕು ಆಡಳಿತ

• ಪ್ರಜೋದಯ ವರದಿ

**ಬೇಲೂರು:** ಇಲ್ಲಿನ ವಿಶ್ವವಿಖ್ಯಾತ ಶ್ರೀ ಚನ್ನಕೇಶವ ದೇವಾಲಯದ ಮುಂಭಾಗದಲ್ಲಿ ಪ್ರವಾಸಿಗರ ವಾಹನಗಳನ್ನು ನಿಲ್ಲಿಸಬಾರದೆಂದು ಜಿಲ್ಲಾಧಿಕಾರಿಯವರು ಹೊರಡಿಸಿದ ಆದೇಶವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗಿದ್ದು, ಈ ಆದೇಶದ ಹಿನ್ನೆಲೆಯಲ್ಲಿ ದೇವಾಲಯದ ಮುಂಭಾಗದಲ್ಲಿ ಪಾರ್ಕಿಂಗ್ ಮಾಡಲಾಗಿದ್ದ ವಾಹನಗಳನ್ನು ತಹಶೀಲ್ದಾರ್ ಶ್ರೀಧರ್ ಕಂಕನಾಡಿ ಅವರು ಖುದ್ದಾಗಿ ತಾವೇ ತೆರವು ಕಾರ್ಯಾಚರಣೆ ಮಾಡಿ ಪಾರ್ಕಿಂಗ್ ಸಿಬ್ಬಂದಿಗಳಿಗೆ ತರಾಟೆ ತೆಗೆದುಕೊಂಡು ಪಾರ್ಕಿಂಗ್ ಇಲ್ಲದೆ ನಿಂತಿದ್ದ ವಾಹನಗಳನ್ನು ತೆರವುಗೊಳಿಸಿದರು.

ದೇವಾಲಯದ ಪ್ರವೇಶ ದ್ವಾರದ





ಮುಂಭಾಗದಲ್ಲಿ ವಾಹನ ನಿಲುಗಡೆಯಿಂದ ಭಕ್ತಾದಿಗಳು, ಪ್ರವಾಸಿಗರು ಹಾಗೂ ಪಾದಚಾರಿಗಳಿಗೆ ತೀವ್ರ ಅಡಚಣೆ ಉಂಟಾಗುತ್ತಿತ್ತು. ಜೊತೆಗೆ ಆತಂಕವೂ ಇದ್ದುದರಿಂದ ವಾಹನ ಸಂಚಾರ ಸುಗಮಗೊಳಿಸುವುದು ಮತ್ತು ಸಾರ್ವಜನಿಕ ಸುರಕ್ಷತೆ ಕಾಯ್ದುಕೊಳ್ಳುವ ಉದ್ದೇಶದಿಂದ ಜಿಲ್ಲಾಡಳಿತ ಈ ಕ್ರಮ ಕೈಗೊಂಡಿದೆ ಎಂದು ಅವರು ಮಾಹಿತಿ ನೀಡಿದರು.

ಕಾರ್ಯಾಚರಣೆ ವೇಳೆ ತಹಶೀಲ್ದಾರ್ ಶ್ರೀಧರ್ ಕಂಕನವಾಡಿ ಅವರು ಪೊಲೀಸ್ ಸಿಬ್ಬಂದಿ, ದೇವಸ್ಥಾನ ಕಾರ್ಯ ನಿರ್ವಾಹಕಾಧಿಕಾರಿ ಯೋಗೇಶ್ ಹಾಗೂ ಪಾರ್ಕಿಂಗ್ ಸಿಬ್ಬಂದಿಗಳಿಗೆ ದೇವಾಲಯದ ಮುಂಭಾಗದಲ್ಲಿ ಯಾವುದೇ ಕಾರಣಕ್ಕೂ ವಾಹನಗಳನ್ನು ಪಾರ್ಕಿಂಗ್ ಮಾಡಲು ಅವಕಾಶ ನೀಡಬಾರದು ಎಂದು ಕಟ್ಟುನಿಟ್ಟಾಗಿ ಸೂಚನೆ ನೀಡಿದರು. ಪ್ರವಾಸಿಗರ ವಾಹನಗಳನ್ನು ನಿಗದಿತ ಪಾರ್ಕಿಂಗ್ ಸ್ಥಳಗಳಲ್ಲಿಯೇ ನಿಲ್ಲಿಸುವಂತೆ ಸಾರ್ವಜನಿಕರಿಗೆ ಮಾರ್ಗದರ್ಶನ ನೀಡುವಂತೆ ತಿಳಿಸಿದರು.

ಮುಂದಿನ ದಿನಗಳಲ್ಲಿ ನಿಯಮ ಉಲ್ಲಂಘಿಸುವ ವಾಹನ ಮಾಲೀಕರ ವಿರುದ್ಧ ದಂಡ ಸೇರಿದಂತೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ಎಚ್ಚರಿಕೆ ನೀಡಿದ್ದು, ಜಿಲ್ಲಾಧಿಕಾರಿಯವರ ಆದೇಶಕ್ಕೆ ಸಾರ್ವಜನಿಕರು ಸಹಕಾರ ನೀಡಬೇಕೆಂದು ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ ಅವರು ಮನವಿ ಮಾಡಿದರು.

# ಶುದ್ಧ ಮನಸ್ಸಿನಿಂದ ಕಲಿತ ವಿದ್ಯೆ ಎಂದೆಂದಿಗೂ ಶಾಶ್ವತ


• ಪ್ರಜೋದಯ ವರದಿ

**ಬೇಲೂರು:** ಪೋಷಕರು ಮಕ್ಕಳಿಗೆ ಸಂಸ್ಕಾರ ಕಲಿಸುವ ಪರಿಪಾಠ ಮನೆಯಿಂದಲೇ ಪ್ರಾರಂಭಿಸಬೇಕು. ಶುದ್ಧ ಮನಸ್ಸಿನಿಂದ ಕಲಿತ ವಿದ್ಯೆ ಎಂದಿಗೂ ನಶಿಸುವುದಿಲ್ಲ ಎಂದು ಉಡುಪಿ ಅದಮಾರ್ ಮಠದ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಶ್ರೀ ಈಶ ಪ್ರಿಯ ತೀರ್ಥ ಶ್ರೀಪಾದರು ಹೇಳಿದರು.

ಪಟ್ಟಣದ ಪೂರ್ಣಪ್ರಜ್ಞ ಶಾಲಾ ವಾರ್ಷಿಕೋತ್ಸವ ಸಮಾರಂಭದಲ್ಲಿ ಆಶೀರ್ವಚನ ನೀಡಿ ಮಾತನಾಡಿದ ಅವರು, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಅಂಕಗಳಿಗೆ ಮಾತ್ರ ಸೀಮಿತವಾಗದೆ, ಮೌಲ್ಯಾಧಾರಿತ ಶಿಕ್ಷಣ ಅತ್ಯಗತ್ಯವಾಗಿದೆ. ಮಕ್ಕಳಲ್ಲಿ ಶಿಸ್ತು, ಸತ್ಯನಿಷ್ಠೆ, ಸೇವಾಭಾವನೆ ಹಾಗೂ ಸಮಾಜದ ಮೇಲಿನ ಹೊಣೆಗಾರಿಕೆಯನ್ನು ಬೆಳೆಸುವಲ್ಲಿ ಪೋಷಕರು ಮತ್ತು ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ ಎಂದರು.

ಶಾಲಾ ಶಿಕ್ಷಣವು ಮಕ್ಕಳ ಬೌದ್ಧಿಕ ಬೆಳವಣಿಗೆಯ ಜೊತೆಗೆ ಮಾನವೀಯ ಮೌಲ್ಯಗಳನ್ನು ಬೆಳೆಸಬೇಕು. ಸಂಸ್ಕಾರಯುತ ಶಿಕ್ಷಣ ಪಡೆದ ಮಕ್ಕಳು ಜೀವನದಲ್ಲಿ ಯಾವ ಪರಿಸ್ಥಿತಿಯಲ್ಲೂ ಸರಿಯಾದ ದಾರಿಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಗುರುಗಳ ಮಾರ್ಗದರ್ಶನ ಮತ್ತು ಪೋಷಕರ ಪ್ರೀತಿಯ ಸಂಯೋಜನೆಯೇ ಮಕ್ಕಳ ಭವಿಷ್ಯವನ್ನು ಉಜ್ವಲಗೊಳಿಸುತ್ತದೆ ಎಂದು ಸ್ವಾಮೀಜಿ ಅವರು ತಿಳಿಸಿದರು.

ಮಂಗಳೂರಿನ ಸಿವಿಲ್ ನ್ಯಾಯಾಧೀಶರಾದ ಚಿರಾಗ್ ಅವರು ಮಾತನಾಡಿ, ನಾನು ಸಹ ಇದೇ ಸಂಸ್ಥೆಯಲ್ಲಿ ಕಲಿತ ವಿದ್ಯಾರ್ಥಿಯಾಗಿದ್ದು, ನಾವು ಶಾಲೆಯಲ್ಲಿ ಕಲಿಯುವ ಸಂದರ್ಭದಲ್ಲಿ ಈ ಶಾಲೆಯ ಬಗ್ಗೆ ನಮಗೆ ತಿಳಿದಿರುವುದಿಲ್ಲ. ಆದರೆ ಈ ಶಾಲೆಯಿಂದ ಕಲಿತು ಹೋದ ನಂತರ ನಮ್ಮನ್ನು ಯಾವ ರೀತಿ ಸಂಸ್ಕಾರಯುತವಾಗಿ ಬದಲಿಸುತ್ತದೆ ಎಂಬುದನ್ನು ಇಲ್ಲಿ ಕಲಿತ ಸಾವಿರಾರು ವಿದ್ಯಾರ್ಥಿಗಳೇ ಸಾಕ್ಷಿ. ಶಿಕ್ಷಣ



ಒಂದು ಫ್ಯಾಷನ್ ಇದ್ದಂತೆ. ಅದನ್ನು ತುಂಬು ಮನಸ್ಸಿನಿಂದ ಪ್ರೀತಿಸಬೇಕು ಎಂದು ಅವರು ಕಿವಿಮಾತು ಹೇಳಿದರು.

ಆಗ ನಾವು ಏನು ಗುರಿ ಇಟ್ಟುಕೊಂಡಿರುತ್ತೇವೊ ಅದನ್ನು ಸಾಧಿಸಬಹುದು. ಇದರ ಜೊತೆ ಪೋಷಕರು ಸಹ ಮಕ್ಕಳಲ್ಲಿ ಯಾವ ವಿಷಯದ ಬಗ್ಗೆ ಹೆಚ್ಚು ಆಸಕ್ತಿ ಇರುತ್ತದೆ. ಅದರ ಬಗ್ಗೆ ಹೆಚ್ಚಿನ ಮಹತ್ವ ನೀಡುವಂತೆ ಮನವಿ ಮಾಡಿದ ಅವರು, ಶಿಕ್ಷಣ ಕೇವಲ ಅಂಕಗಳಿಗೆ ಮಾತ್ರ ಸೀಮಿತವಾಗಿಲ್ಲ ನಮ್ಮ ಏಳಿಗೆ ಜೊತೆಗೆ ನಮ್ಮ ಜೊತೆಗಿರುವವರನ್ನು ಬೆಳೆಸುವಂತಹ ಶಿಕ್ಷಣ ಆಗಿರಬೇಕು. ಆ ಶಿಕ್ಷಣದಿಂದ ಈ ಸಮಾಜಕ್ಕೆ ಎನನ್ನು ಕೊಡುಗೆ ನೀಡುತ್ತೇವೆ ಎಂದು ಮೊದಲು ಅರಿತಿರಬೇಕು ಎಂದು ತಿಳಿಸಿದರು.

ಉಡುಪಿ ಅದಮಾರು ಮಠದ ಶಿಕ್ಷಣ ಮಂಡಳಿಯ ಕಾರ್ಯದರ್ಶಿ ಡಾ. ಎ.ಪಿ. ಭಟ್ ಅವರು ಮಾತನಾಡಿ, ಇಂದಿನ ಶಿಕ್ಷಣ ವ್ಯವಸ್ಥೆ ಕೇವಲ ಪಠ್ಯಾಧಾರಿತವಾಗಿರದೆ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಒತ್ತು ನೀಡಬೇಕು ಎಂದರಲ್ಲದೆ, ಮಕ್ಕಳಲ್ಲಿ ವಿದ್ಯಾರ್ಥಿಗಳು ಅಡಗಿರುವ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಜವಾಬ್ದಾರಿ ಶಿಕ್ಷಕರ ಮೇಲಿದೆ. ಶಿಸ್ತು, ಶ್ರಮ ಹಾಗೂ ಸಮಯಪಾಲನೆ ವಿದ್ಯಾರ್ಥಿ ಜೀವನದ ಮೂಲ ಮಂತ್ರಗಳಾಗಿದ್ದು, ಇವುಗಳನ್ನು ಅಳವಡಿಸಿಕೊಂಡರೆ ಯಶಸ್ಸು ಖಚಿತ ಎಂದು ಕಿವಿಮಾತು ಹೇಳಿದರು.

ಕಾರ್ಯದರ್ಶಿ ಮುರುಳಿಧರ್, ಜಂಟಿ ಕಾರ್ಯದರ್ಶಿ ಅನಂತಸ್ವಾಮಿ, ಪ್ರಾಂಶುಪಾಲ ಪ್ರಶಾಂತ್‌ಕುಮಾರ್, ಪ್ರಾಥಮಿಕ ಶಾಲೆಯ ಪ್ರಾಂಶುಪಾಲರಾದ ಶ್ರೀನಿಧಿ ಉಪಸ್ಥಿತರಿದ್ದರು.

# ಮೂರ್ಛೆರೋಗಕ್ಕೆ ಸೂಕ್ತ ಚಿಕಿತ್ಸೆ ಉಂಟು

• ಪ್ರಜೋದಯ ವರದಿ

**ಹಾಸನ:** ಮೂರ್ಛೆರೋಗ ಬಂದ ವ್ಯಕ್ತಿಗೆ ಕಬ್ಬಿಣದ ಕೀಲಿಗಳನ್ನು ಕೈಗೆ ಕೊಡುವುದು ಮತ್ತು ಅಪಸ್ಮಾರ ಸಮಯದಲ್ಲಿ ಅವರಿಗೆ ನೀರು ಕುಡಿಸುವುದು ತಪ್ಪು ಕೆಲಸಗಳನ್ನು ಮಾಡುತ್ತಾರೆ. ಇದರಿಂದ ರೋಗಿಗಳ ಹತ್ತಿರ ಇರುವವರಿಗೂ ತೊದರೆಯಾಗುವ ಸಾಧ್ಯತೆಯಿದೆ ಎಂದು ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿ ಡಾ. ನಾಗೇಶ್ ಆರಾಧ್ಯ ತಿಳಿಸಿದ್ದಾರೆ.

ನಗರದ ಟಾರ್ಗೆಟ್ ಪಿ.ಯು. ಕಾಲೇಜ್‌ನಲ್ಲಿ ಏರ್ಪಡಿಸಲಾಗಿದ್ದ ರಾಷ್ಟ್ರೀಯ ಅಪಸ್ಮಾರ ದಿನದ ಅಂಗವಾಗಿ ಪೋಸ್ಟರ್ ತಯಾರಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಮೂರ್ಛೆ ರೋಗಕ್ಕೆ ಸೂಕ್ತ ಸಮಯಕ್ಕೆ ಚಿಕಿತ್ಸೆ ಕೊಡಿಸುವುದು ಮುಖ್ಯ, ಮೂರ್ಛೆ ರೋಗಕ್ಕೂ ಮದ್ದು ಇದೆ ಎಂದರು.





ಕರ್ನಾಟಕ ಮೆದುಳಿನ ಆರೋಗ್ಯ ಉಪಕ್ರಮದ ಜಿಲ್ಲಾ ಸಂಯೋಜಕಿ ಲತಾಮಣಿ ಅವರು ಮಾತನಾಡಿ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ, ಜಿಲ್ಲಾಸ್ಪತ್ರೆಯ ಮೊದಲನೆ ಮಹಡಿ, ಕೊಠಡಿ ಸಂಖ್ಯೆ 13 ಡಿ ಯಲ್ಲಿ ಬ್ರೈನ್ ಹೆಲ್ತ್ ಕ್ಲಿನಿಕ್‌ನ್ನು ಸ್ಥಾಪಿಸಿದ್ದು ಇಲ್ಲಿ ವಿಶೇಷವಾಗಿ ಪಾರ್ಶ್ವವಾಯು, ಮೂರ್ಛೆರೋಗ, ತಲೆನೋವು ಮತ್ತು ಮರೆವಿನ ಕಾಯಿಲೆಗಳಿಗೆ ಚಿಕಿತ್ಸೆ ಲಭ್ಯವಿದ್ದು ನಮ್ಮಲ್ಲಿ ನರರೋಗ ತಜ್ಞರು, ಸ್ಪೀಚ್ ಥೆರಪಿಸ್ಟ್, ಸೈಕಾಲಾಜಿಸ್ಟ್ ಪಿಜಿಯೋಥೆರಪಿಸ್ಟ್ ನರ್ಸ್ ಲಭ್ಯವಿದ್ದು ಮೇಲಿನ ಖಾಯಿಲೆಗಳಿಗೆ ಚಿಕಿತ್ಸೆ ಉಚಿತವಾಗಿರುತ್ತದೆ ಎಂದು ತಿಳಿಸಿದರು.

ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ವೈದ್ಯಾಧಿಕಾರಿ ಡಾ. ಕಾರ್ತಿಕ್, ಪ್ರಾಂಶುಪಾಲ ರಾಹುಲ್ ಹೆಚ್.ಕೆ. ಹಾಗೂ ಇನ್ನಿತರರಿದ್ದರು.



ಹೊಳೆನರಸೀಪುರದ ಕೊರಮರ ಸಮುದಾಯ ಭವನ ನಿರ್ಮಾಣಕ್ಕಾಗಿ ಪುರಸಭಾ ಮಾಜಿ ಅಧ್ಯಕ್ಷೆ ವೀಣಾ ಮತ್ತು ಡಾ.ರಾಜೇಶ್ ದಂಪತಿ 2 ಲಕ್ಷ ರೂಪಾಯಿ ಸಹಾಯ ಧನ ನೀಡಿದ್ದು, ಜನಾಂಗದ ಮುಖಂಡರು ಅವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಿ ಗೌರವಿಸಿದರು.

# ಕ್ರಿಕೆಟ್ ಆಟಗಾರ ಆತ್ಮಹತ್ಯೆಗೆ ಶರಣು

• ಪ್ರಜೋದಯ ವರದಿ

**ಸಕಲೇಶಪುರ:** ಪಟ್ಟಣಕ್ಕೆ ಸಮೀಪವಿರುವ ಮಳಲಿ ನಿವಾಸಿ ವಿಜಯ್ (33) ಆತ್ಮಹತ್ಯೆಗೆ ಶರಣಾಗಿದ್ದಾರೆ.

ಮಳಲಿ ವಿಜಿ ಎಂದೇ ಹೆಸರುವಾಸಿಯಾಗಿದ್ದ ಇವರು ಟೆನ್ನಿಸ್ ಬಾಲ್ ಕ್ರಿಕೆಟ್‌ನಲ್ಲಿ ಬಹಳ ಹೆಸರು ಮಾಡಿದ್ದರು. ತನ್ನ ಆಲ್‌ರೌಂಡ್ ಆಟದ ಮೂಲಕ ಹೆಸರು ಮಾಡಿದ್ದ ಇವರು ಹಲವಾರು ಪ್ರಶಸ್ತಿ ಗಳನ್ನು ಪಡೆದಿದ್ದರು. ಮೃತರು ತನ್ನ ಮನೆಯಲ್ಲೇ ಕ್ಷುಲ್ಲಕ ಕಾರಣಕ್ಕೆ ನೇಣಿಗೆ ಶರಣಾಗಿದ್ದಾರೆ.

ಮೃತರು ತನ್ನ ತಂದೆ, ತಾಯಿ, ಪತ್ನಿ, ಮಗ ಹಾಗೂ ಅಪಾರ ಬಂಧು ಬಳಗ, ಸ್ನೇಹಿತರನ್ನು ಅಗಲಿದ್ದಾರೆ. ಮೃತರ ಅಂತ್ಯಸಂಸ್ಕಾರ ಮಳಲಿ ಗ್ರಾಮದಲ್ಲಿ ನಡೆಯಿತು.

## ಬೋಧಿಸಿ ಎಂದಿದ್ದು ಧರ್ಮ ಸಂಘರ್ಷಕ್ಕಲ್ಲ | ರಾಷ್ಟ್ರಕವಿ ಕುವೆಂಪುಗೆ ಭಾರತ ರತ್ನ ನೀಡಲಿ | ಕೇಂದ್ರ ಸಚಿವ ಹೆಚ್.ಡಿ.ಕೆ.

# ಶಾಲೆಗಳಲ್ಲಿ ಮಕ್ಕಳಿಗೆ ಭಗವದ್ಗೀತೆ ಬೋಧನೆ ಅತ್ಯಗತ್ಯ

• ಪ್ರಜೋದಯ ವರದಿ

**ನವದೆಹಲಿ:** ಶಾಲಾ ಹಂತದಿಂದಲೇ ಭಗವದ್ಗೀತೆಯನ್ನು ಮಕ್ಕಳಿಗೆ ಬೋಧಿಸಬೇಕು. ಇದು ಅತ್ಯಂತ ಉತ್ತಮ ಶೈಕ್ಷಣಿಕ ಸುಧಾರಣಾ ಕ್ರಮವಾಗುತ್ತದೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ ಅವರು ಪುನರುಚ್ಚರಿಸಿದರು.

ಇಲ್ಲಿನ ಮೈಸೂರಿನ ಕುವೆಂಪು ವಿಶ್ವಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್ ಹಾಗೂ ದೆಹಲಿ ಕರ್ನಾಟಕ ಸಂಘ ಹಮ್ಮಿಕೊಂಡಿದ್ದ ರಾಷ್ಟ್ರಕವಿ ಕುವೆಂಪು ಅವರ ಕೊಡುಗೆ ಮತ್ತು ಸಾಧನೆ ಕುರಿತ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಭಗವದ್ಗೀತೆಯನ್ನು ಬೋಧಿಸಬೇಕು ಎಂದು ನಾನು ಹೇಳಿದ್ದು ರಾಜಕೀಯ ಉದ್ದೇಶ ಅಥವಾ ಯಾವುದೇ ಧರ್ಮ ಸಂಘರ್ಷ ಉಂಟು ಮಾಡುವುದಕ್ಕಲ್ಲ. ಉತ್ತಮ ಸಮಾಜ ನಿರ್ಮಾಣ ಮಾಡುವ ಅಗತ್ಯದ ದೃಷ್ಟಿಯಿಂದ ಹೇಳಿದ್ದೇನೆ ಎಂದು ಒತ್ತಿ ಹೇಳಿದರು.

ಭಗವದ್ಗೀತೆಯ ಉದಾತ್ತ, ಶ್ರೇಷ್ಠ ಮೌಲ್ಯಗಳ ಬಗ್ಗೆ ಹೊಸದಾಗಿ ತಿಳಿ ಹೇಳುವ ಅಗತ್ಯವಿಲ್ಲ. ಆದರೆ ಸಮಾಜದಲ್ಲಿ ನೈತಿಕ ಮೌಲ್ಯಗಳು ಅಧಃಪತನ ಆಗುತ್ತಿರುವ ಸಂದರ್ಭದಲ್ಲಿ ಗೀತೆಯ ಅಗತ್ಯ ಇನ್ನೂ ಹೆಚ್ಚಿದೆ. ಮಾನವ ಕುಲಕ್ಕೆ ಕೃಷ್ಣನ ಉಪದೇಶವು ದಾರಿದೀಪವಾಗಿದೆ. ಹೀಗಾಗಿ ಮಕ್ಕಳಿಗೆ ಬೋಧಿಸಬೇಕಾದ ಅಗತ್ಯವಿದೆ ಎಂದು ಹೇಳಿದ್ದೇನೆ. ಪಠ್ಯದಲ್ಲಿ ಭಗವದ್ಗೀತೆಯನ್ನು ಅಳವಡಿಸುವಂತೆ ಕೋರಿ ಕೇಂದ್ರ ಶಿಕ್ಷಣ ಸಚಿವರಿಗೆ ಪತ್ರವನ್ನು ಕೂಡ ಬರೆದಿದ್ದೇನೆ. ಅದನ್ನೇ ಕೆಲವರು ರಾಜಕೀಯಕ್ಕೆ ಬಳಕೆ ಮಾಡಿಕೊಳ್ಳುತ್ತಿರುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಮಗೆ ಎಲ್ಲವೂ ಇದೆ, ತಾಂತ್ರಿಕವಾಗಿ ಮತ್ತು ಆರ್ಥಿಕವಾಗಿ ಬೆಳೆಯು



ತ್ತಿದ್ದೇವೆ. ಆದರೆ ಮೌಲ್ಯಗಳ ವಿಷಯಕ್ಕೆ ಬಂದಾಗ ಪಾತಾಳಕ್ಕೆ ಹೋಗುತ್ತಿದ್ದೇವೆ. ಯಾಕೆ ಹೀಗೆ ಆಗುತ್ತಿದೆ ಎಂಬುದನ್ನು ಎಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕು. ಇವತ್ತು ಯಾರೇ ಆದರೂ ನೆಮ್ಮದಿಯಾಗಿ ನಿದ್ರೆ ಮಾಡುವ ಪರಿಸ್ಥಿತಿ ಇಲ್ಲ. ಅಂಥ ಪ್ರಾಮಾಣಿಕತೆಯನ್ನು ಯಾರೂ ಹೊಂದಿಲ್ಲ. ಹಾಗಾದರೆ ಮುಂದಿನ ತಲೆಮಾರಿಗೆ ಏನು ಕೊಡಬೇಕು ಎಂಬುದನ್ನು ಪೋಷಕರು ಕೂಡ ತೀರ್ಮಾನ ಮಾಡಬೇಕು. ಮಾನವೀಯ ಮೌಲ್ಯಗಳು, ತಾಯಿ ಹೃದಯ ಎಲ್ಲರಿಗೂ ಅಗತ್ಯ. ಈ ಮೌಲ್ಯಗಳನ್ನು ಜೀವನದಲ್ಲಿ ಎಲ್ಲರೂ ಅಳವಡಿಸಿಕೊಳ್ಳಬೇಕು ಎಂದು ಕುಮಾರಸ್ವಾಮಿ ಅವರು ವಿನಂತಿಸಿದರು.

**ಕುವೆಂಪುಗೆ ಭಾರತ ರತ್ನ ಸಿಗಲಿ:**

ಕುವೆಂಪು ಅವರು ರಾಷ್ಟ್ರಕವಿಯಷ್ಟೇ ಅಲ್ಲ, ಅವರು ವಿಶ್ವಕವಿ. ಮನುಕುಲದ ಒಳಿತಿಗಾಗಿ ಸಾಹಿತ್ಯ ರಚಿಸಿದ ಅವರು, ಯುಗದ ಕವಿಯೂ ಆಗಿದ್ದಾರೆ. ಅಂಥ ಶ್ರೇಷ್ಠರಿಗೆ ಭಾರತ ರತ್ನ ಸಿಗಬೇಕು. ಕುವೆಂಪು ಅವರ ಸಾಹಿತ್ಯವನ್ನು ನಾನು ಓದಿದ್ದೇನೆ. ಮುಖ್ಯವಾಗಿ ಅವರ ಎರಡು ಕಾದಂಬರಿಗಳ ಜೊತೆಗೆ, ಅವರ ಆತ್ಮಕಥನ 'ನೆನಪಿನ ದೋಣಿಯಲ್ಲಿ ಶ್ರದ್ಧೆಯಿಂದ ಓದಿದ್ದೇನೆ. ಆ ಕೃತಿಯನ್ನು ಕುವೆಂಪು ಅವರು ಹೃದಯದಿಂದ ಬರೆದಿದ್ದಾರೇನೋ ಅನ್ನುವಷ್ಟು ಅನನ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಗಳು, ಮೈಸೂರಿನ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಶ್ರೀ ಮುಕ್ತಿದಾನಂದ ಜೀ ಮಹಜಾಜ್ ಅವರು, ಸ್ಫಟಿಕಪುರಿ ಮಹಾಸಂಸ್ಥಾನದ ಶ್ರೀ ನಂಜಾವಧೂತ ಮಹಾಸ್ವಾಮೀಜಿಗಳು, ಮಾದಾರ ಚೆನ್ನಯ್ಯ ಗುರುಪೀಠದ ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಮಹಾಸ್ವಾಮೀಜಿಗಳು, ಬೇಲಿಮಠದ ಶ್ರೀ ಶಿವಾನುಭವ ಚರಮೂರ್ತಿ ಶಿವರುದ್ರ ಮಹಾಸ್ವಾಮಿಗಳು, ವಿಶ್ವ ಒಕ್ಕಲಿಗರ ಮಹಾಸಂಸ್ಥಾನದ ಶ್ರೀ ನಿಶ್ಚಲಾನಂದನಾಥ ಮಹಾಸ್ವಾಮೀಜಿ ಅವರುಗಳು ದಿವ್ಯ ಸಾನ್ನಿಧ್ಯ ವಹಿಸಿದ್ದರು.

ರಾಜ್ಯದ ದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ.ಜಯಚಂದ್ರ, ಸಂಸದರಾದ ಡಾ.ಸಿ.ಎನ್. ಮಂಜುನಾಥ್, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ನಾಗರಾಜ್, ಕುವೆಂಪು ವಿಶ್ವಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಹೆಚ್. ಕೆ.ರಾಮು ಮುಂತಾದವರು ಉಪಸ್ಥಿತರಿದ್ದರು.

## ಪಾಲಿಕೆ ಬಜೆಟ್ ಸಭೆಯಲ್ಲಿ ಸಮಸ್ಯೆಗಳ ಸುರಿಮಳೆ

» ಮೊದಲನೇ ಪುಟದಿಂದ

ಸರಿಯಾಗಿ ನಡೆದುಕೊಳ್ಳುತ್ತಿಲ್ಲವೆಂದು ಆರೋಪಿಸಿದರು.

ಜೈ ಭೀಮ್ ಬ್ರಿಗೇಡ್ ಜಿಲ್ಲಾಧ್ಯಕ್ಷ ರಾಜೇಶ್ ಮಾತನಾಡಿ, ವಾರ್ಡ್ ನಂಬರ್ 18 ರಲ್ಲಿ ಸಮುದಾಯದ ಜಾಗವಿದ್ದು, ಅಂಬೇಡ್ಕರ್ ಭವನ ನಿರ್ಮಾಣಕ್ಕಾಗಿ ಹಲವು ಬಾರಿ ಮನವಿ ಸಲ್ಲಿಸಿದರೂ ಅಧಿಕಾರಿಗಳು ಹಾಗೂ ಹಿಂದಿನ ಜನಪ್ರತಿನಿಧಿಗಳು ಸ್ಪಂದಿಸಿಲ್ಲ. ಈ ಬಾರಿಯಾದರೂ 20 ಲಕ್ಷ ಅನುದಾನ ಬಿಡುಗಡೆ ಮಾಡಿ ಭವನ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ಪರಿಶಿಷ್ಟ ಜಾತಿಯ ರುದ್ರಭೂಮಿಗೆ 24.10 ಎಕರೆ ವ್ಯಾಪ್ತಿಯಲ್ಲಿ ಸ್ಮಶಾನ ಅಭಿವೃದ್ಧಿಗೆ 20 ಲಕ್ಷ ಅನುದಾನ ನೀಡಬೇಕೆಂದು ಮನವಿ ಮಾಡಿದರು.

ಗುಡ್ಡೇನಹಳ್ಳಿ ನಿವಾಸಿ ರಂಗಸ್ವಾಮಿ ಮಾತನಾಡಿ, ತಮ್ಮೂರು ಬಳಿಯ ಸರ್ಕಾರಿ ಕೆರೆಯ ದುಸ್ಥಿತಿ ವಿವರಿಸಿದರು. ಕೆರೆಯಲ್ಲಿ ಕಸ ಸುರಿದು ನೀರು ಸಂಪೂರ್ಣವಾಗಿ ಮಲಿನಗೊಂಡಿದೆ. ಗಿಡಗಂಟಿ ಬೆಳೆದು ದುರ್ವಾಸನೆ ಬೀರುತ್ತಿದೆ. ಸುತ್ತಮುತ್ತಲ ನಿವಾಸಿ ಗಳಿಗೆ ಕಾಯಿಲೆಗಳು ಹರಡುವ ಭೀತಿ ಎದುರಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

## ಸೇವಾ ನ್ಯೂನ್ಯತೆ: ಮ್ಯಾಕ್ಸ್ ಲೈಫ್ ಇನ್ಶೂರೆನ್ಸ್ ಕಂಪನಿಗೆ ದಂಡ

» ಮೊದಲನೇ ಪುಟದಿಂದ

ರಂದು ನೋಟೀಸ್ ಜಾರಿ ಮಾಡಿದಾಗ ಕಂಪನಿಯು ಮತ್ತೊಂದು ಬಾಂಡ್ ಕಳುಹಿಸಿಕೊಟ್ಟಿತ್ತು. ಅದರಲ್ಲೂ ಅದೇ ಲೋಪದೋಷಗಳು ಕಂಡುಬಂದ ಹಿನ್ನೆಲೆಯಲ್ಲಿ ಕಿರಣ್ ಅವರು ತಮಗೆ ಉಂಟಾಗಿರುವ ಸೇವಾ ನ್ಯೂನ್ಯತೆಗಾಗಿ 54 ಸಾವಿರ ರೂ. ಪರಿಹಾರ ಕೊಡಿಸುವಂತೆ ಪರಿಹಾರ ಆಯೋಗಕ್ಕೆ ಕೋರಿದ್ದರು.

ಈ ವೇಳೆ ವಿಚಾರಣೆಗೆ ಹಾಜರಾಗಿದ್ದ ಕಂಪನಿಯ ಸಿಬ್ಬಂದಿ, ವಿಮಾದಾರನು ಸರಿಯಾದ ಮಾಹಿತಿ ನೀಡಬೇಕು. ಬಾಂಡ್‌ನಲ್ಲಿ ಏನಾದರೂ ತಪ್ಪಿದ್ದರೆ ತಕ್ಷಣವೇ ಸರಿಪಡಿಸಲು ಆಯ್ಕೆಗಳಿದ್ದರೂ ಅದ್ಯಾವುದನ್ನು ಮಾಡದೆ ಸುಖಾ ಸುಮ್ಮನೆ ಆರೋಪ ಮಾಡುತ್ತಿದ್ದಾರೆ. ಆದ್ದರಿಂದ ಸೇವಾ ನ್ಯೂನ್ಯತೆ ಉಂಟಾಗುವುದು ಸಾಧ್ಯವಿಲ್ಲವೆಂದು ವಾದಿಸಿದ್ದರು.

ವಾದ-ಪ್ರತಿವಾದ ಆಲಿಸಿದ ಆಯೋಗದ ಅಧ್ಯಕ್ಷ ಕೆ.ಎಂ. ಚಂಚಲ ಅವರು, ಪಾಲಿಸಿಯಲ್ಲಿ ವಿಮಾದಾರರ ತಂದೆ-ಹೆಂಡತಿ ಹೆಸರು ತಪ್ಪಾಗಿ ನಮೂದಾಗಿರುವುದರ ಬಗ್ಗೆ ಎದುರುದಾರರಿಗೆ ನೋಟೀಸ್ ಮೂಲಕ ತಿಳಿಸಿದ್ದರೂ, ಅದರೂ ಸರಿಪಡಿಸದೆ ತಪ್ಪುಗಳಿರುವ ಬಾಂಡ್ ಅನ್ನೇ ನೀಡಿ ಸೇವಾ ನ್ಯೂನ್ಯತೆ ಉಂಟು ಮಾಡಿದ್ದಾರೆ. ಈ ತಪ್ಪಿಗೆ ಅರ್ಜಿದಾರರ ಖರ್ಚು 5 ಸಾವಿರ ರೂ., ಮಾನಸಿಕ ಹಿಂಸೆಗೆ 5 ಸಾವಿರ ರೂ. ಮತ್ತು ಸೇವಾ ನ್ಯೂನ್ಯತೆಗಾಗಿ 5 ಸಾವಿರ ರೂ.ಗಳನ್ನು ಮುಂದಿನ 45 ದಿನಗಳೊಳಗೆ ಪಾವತಿಸಬೇಕೆಂದು ಡಿ. 16ರಂದು ಆದೇಶಿಸಿದ್ದಾರೆ.

# ನಿವೃತ್ತಿ ಹಂತದ ನ್ಯಾಯಾಧೀಶರಿಂದ ಆದೇಶ ತರವಲ್ಲ

• ಪ್ರಜೋದಯ ವರದಿ

**ನವದೆಹಲಿ:** ನ್ಯಾಯಾಧೀಶರು ನಿವೃತ್ತಿ ಅಂಚಿಗೆ ಬಂದಾಗ ಹೆಚ್ಚೆಚ್ಚು ಆದೇಶಗಳನ್ನು ಹೊರಡಿಸುವ ಪ್ರವೃತ್ತಿ ಬೆಳೆಯುತ್ತಿರುವುದು ಸರಿಯಲ್ಲವೆಂದು ಸುಪ್ರೀಂ ಕೋರ್ಟ್ ಆಕ್ಷೇಪ ವ್ಯಕ್ತಪಡಿಸಿದೆ.

ಕೊನೆಯ ಓವರ್‌ಗಳಲ್ಲಿ ಬ್ಯಾಟ್ಸ್‌ಮನ್ ಸಿಕ್ಸ್‌ರ್‌ಗಳನ್ನು ಸಿಡಿಸುವಂತೆ ನಡೆಯುತ್ತಿದೆಯೆಂದು ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯ ಕಾಂತ್ ನೇತೃತ್ವದ ಪೀಠ ಅಸಮಾಧಾನ ವ್ಯಕ್ತಪಡಿಸಿತು. ಪೀಠವು ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ, ವಿಪುಲ್ ಎಂ. ಪಾಂಚೋಲಿ ಅವರನ್ನೂ ಒಳಗೊಂಡಿದೆ. ಮಧ್ಯಪ್ರದೇಶದ ಜಿಲ್ಲಾ ಪ್ರಧಾನ ನ್ಯಾಯಾಧೀಶರೊಬ್ಬರು ತಮ್ಮ ನಿವೃತ್ತಿಗೂ ಮೊದಲು ಕೆಲ ಪ್ರಶ್ನಾರ್ಹ ಆದೇಶಗಳನ್ನು ಹೊರಡಿಸಿದ್ದರು. ಈ ಕಾರಣಕ್ಕಾಗಿ ಹೈಕೋರ್ಟ್‌ನ ಪೂರ್ಣ ಪೀಠವು ಅವರನ್ನು ನಿವೃತ್ತಿಗೂ 10 ದಿನ ಮುನ್ನ ಅಮಾನತುಗೊಳಿಸಿತ್ತು. ಅದನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಯನ್ನು ಸಿಜೆಐ ನೇತೃತ್ವದ ಪೀಠ ವಿಚಾರಣೆ ನಡೆಸಿತು.





ಮಧ್ಯಪ್ರದೇಶದ ಈ ನ್ಯಾಯಾಧೀಶರು ನ.30ರಂದು ನಿವೃತ್ತಿ ಆಗಬೇಕಿತ್ತು. ಆದರೆ ನ.19 ರಂದು ಅವರನ್ನು ಅಮಾನತುಗೊಳಿಸಲಾಗಿತ್ತು. ಅರ್ಜಿದಾರರು ನಿವೃತ್ತಿಗೂ ಮುನ್ನ ಸಿಕ್ಸ್‌ರ್‌ಗಳನ್ನು ಹೊಡೆಯಲು ಪ್ರಾರಂಭಿಸಿದರು. ಇದು ದುರದೃಷ್ಟಕರ ಪ್ರವೃತ್ತಿ. ಅದನ್ನು ಹೆಚ್ಚಿಗೆ ವಿವರಿಸಲು ಬಯಸುವುದಿಲ್ಲವೆಂದು ಪೀಠ ಹೇಳಿತು.

ಅರ್ಜಿದಾರರ ಪರ ಹಾಜರಾದ ಹಿರಿಯ ವಕೀಲ ವಿಪಿನ್ ಸಂಘಿ, ಅರ್ಜಿದಾರರು, ವಾರ್ಷಿಕ ಗೋಪ್ಯ ವರದಿಗಳಲ್ಲಿ ದೋಷರಹಿತ ಸೇವಾ ದಾಖಲೆಗಳನ್ನು ಹೊಂದಿದ್ದಾರೆ. ನ್ಯಾಯಾಂಗ ಆದೇಶಗಳನ್ನು ಹೊರಡಿಸಿದ್ದಕ್ಕಾಗಿ ನ್ಯಾಯಾಂಗದ ಅಧಿಕಾರಿಗಳನ್ನು ಶಿಸ್ತುಕ್ರಮಕ್ಕೆ ಒಳಪಡಿಸಲು ಆಗುವುದಿಲ್ಲ ಎಂದು ವಾದಿಸಿದರು. ಅಮಾನತಿನ ಕಾನೂನು ಬದ್ಧತೆಯನ್ನು ಪ್ರಶ್ನಿಸಿದರು.

ನ್ಯಾಯಾಧೀಶರು ಹೊರಡಿಸಿದ ಆದೇಶಗಳ ವಿರುದ್ಧ ಮೇಲ್ಮನವಿ ಸಲ್ಲಿಸಬಹುದು. ಈ ಆದೇಶಗಳನ್ನು ಉನ್ನತ ನ್ಯಾಯಾಲಯಗಳು ಸರಿಪಡಿಸಬಹುದು ಎಂದು ಅವರು ಹೇಳಿದರು. ತಪ್ಪಾದ ಆದೇಶಗಳಿಗೆ ನ್ಯಾಯಾಂಗದ ಅಧಿಕಾರಿ ವಿರುದ್ಧ ಸಾಮಾನ್ಯವಾಗಿ ಶಿಸ್ತುಕ್ರಮ ತೆಗೆದುಕೊಳ್ಳುವುದಿಲ್ಲ ಎಂಬುದನ್ನು ಪೀಠ ತಾತ್ವಿಕವಾಗಿ ಒಪ್ಪಿಕೊಂಡಿತು. ಅದಕ್ಕಾಗಿ ಅಮಾನತುಗೊಳಿಸುವುದಿಲ್ಲ, ಆದರೆ ಆದೇಶಗಳು ಸ್ಪಷ್ಟವಾಗಿ ಅಪ್ರಾಮಾಣಿಕವಾಗಿದ್ದರೆ ಏನು ಮಾಡುವುದು ಎಂದು ಸಿಜೆಐ ಪ್ರಶ್ನಿಸಿದರು. ನ್ಯಾಯಾಂಗದ ದೋಷ ಮತ್ತು ದುಷ್ಕೃತ್ಯದ ನಡುವೆ ವ್ಯತ್ಯಾಸವಿದೆಯಲ್ಲ ಎಂದು ಅವರು ಇದೇ ವೇಳೆ ತಿಳಿಸಿದರು.

ಈ ಕುರಿತ ಅರ್ಜಿಯನ್ನು ಪುರಸ್ಕರಿಸಲು ನಿರಾಕರಿಸಿದ ಪೀಠವು, ಅಮಾನತು ಆದೇಶವನ್ನು ಹಿಂಪಡೆಯಲು ಕೋರಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಬಹುದು ಎಂದು ಹೇಳಿತು. ಅದನ್ನು ನಾಲ್ಕು ವಾರಗಳಲ್ಲಿ ನಿರ್ಧರಿಸುವಂತೆ ಪೀಠವು ಹೈಕೋರ್ಟ್‌ಗೆ ನಿರ್ದೇಶಿಸಿತು.

# ಇಂಧನ ಬೇಕಿದ್ದರೆ ಪಿಯುಸಿ ಪ್ರಮಾಣ ಪತ್ರ ಕಡ್ಡಾಯ



• ಪ್ರಜೋದಯ ವರದಿ

**ನವದೆಹಲಿ:** ರಾಷ್ಟ್ರ ರಾಜಧಾನಿಯಲ್ಲಿ ಮಿತಿಮೀರುತ್ತಿರುವ ವಾಯುಮಾಲಿನ್ಯಕ್ಕೆ ಕಡಿವಾಣ ಹಾಕಲು ದೆಹಲಿ ಸರ್ಕಾರ ಮುಂದಾಗಿದೆ.

ಬಿಎಸ್4 ಮಾನದಂಡಗಳನ್ನು ಪಾಲಿಸದ ಖಾಸಗಿ ವಾಹನಗಳಿಗೆ ದೆಹಲಿ ಪ್ರವೇಶ ನಿರ್ಬಂಧಿ ಸಿದ್ದು, ಮಾಲಿನ್ಯ ಹೊರ ಸೂಸುವಿಕೆ ನಿಯಂತ್ರಣ ಮಟ್ಟದಲ್ಲಿ ಇಲ್ಲದ ವಾಹನಗಳಿಗೆ ಇಂಧನವನ್ನೇ ಪೂರೈಸದಂತೆ ನೋ ಪಿಯುಸಿ, ನೋ ಫ್ಯುಯಲ್ ನೀತಿಯನ್ನೂ ಗುರುವಾರದಿಂದ ಜಾರಿಗೊಳಿಸಿದೆ.

ಮಾಲಿನ್ಯ ನಿಯಂತ್ರಣದಲ್ಲಿದೆ (ಪಿಯುಸಿ) ಪ್ರಮಾಣ ಪತ್ರವಿಲ್ಲದ ವಾಹನಗಳಿಗೆ ಪೆಟ್ರೋಲ್ ಬಂಕ್‌ಗಳಲ್ಲಿ ತೈಲ ಪೂರೈಸುವಂತಿಲ್ಲ. ಸ್ವಯಂ ಚಾಲಿತ ನಂಬರ್ ಪ್ಲೇಟ್ ರೀಡಿಂಗ್ ಕ್ಯಾಮೆರಾ, ಪೆಟ್ರೋಲ್ ಬಂಕ್‌ಗಳಲ್ಲಿ ಅಳವಡಿಸಿರುವ ಸೈರನ್ ಮತ್ತು ಪೊಲೀಸರ ನೆರವಿನೊಂದಿಗೆ ಈ ನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುತ್ತಿದೆ.

ಗಡಿ ಪ್ರದೇಶಗಳೂ ಸೇರಿ ದೆಹಲಿಯಾದ್ಯಂತ 126 ಚೆಕ್‌ಪೋಸ್ಟ್‌ಗಳನ್ನು ತೆರೆಯಲಾಗಿದ್ದು, 580 ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಹಾಗೆಯೇ, ಪೆಟ್ರೋಲ್ ಪಂಪ್‌ಗಳು ಮತ್ತು ಗಡಿ ಪ್ರದೇಶದಲ್ಲಿ ಸಾರಿಗೆ ಇಲಾಖೆಯ ತಂಡಗಳನ್ನೂ ನಿಯೋಜಿಸಲಾಗಿದೆಯೆಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಿಎಸ್4 ಮಾನದಂಡಕ್ಕೊಳಪಡದ ವಾಹನಗಳಿಗೆ ವಿಧಿಸಲಾಗಿರುವ ಪ್ರವೇಶ ನಿರ್ಬಂಧವು, ಸಿಎನ್‌ಜಿ ಹಾಗು ವಿದ್ಯುತ್‌ಚಾಲಿತ ವಾಹನಗಳಿಗೆ, ಸಾರ್ವಜನಿಕ ಸಾರಿಗೆ ಮತ್ತು ತುರ್ತು ಸೇವೆಗಳ ವಾಹನಗಳಿಗೆ ಅನ್ವಯವಾಗುವುದಿಲ್ಲವೆಂದೂ ಹೇಳಿದ್ದಾರೆ.

## ದ್ವೇಷ ಭಾಷಣ ವಿಧೇಯಕ ಅಂಗೀಕಾರ

» ಮೊದಲನೇ ಪುಟದಿಂದ

ಕಾನೂನಿನ ವ್ಯಾಪ್ತಿಯಲ್ಲಿ ಬರಲಿದೆ. ಅಂತಹವನ್ನು ನಿಷೇಧ ಮಾಡುವ ಪ್ರಕ್ರಿಯೆಗೆ ಅವಕಾಶ ಇದೆ ಎಂದು ವಿವರಿಸಿದರು.

ವಿಧೇಯಕದ ಬಗ್ಗೆ ವಿಪಕ್ಷ ನಾಯಕ ಆರ್.ಅಶೋಕ್ ಮಾತನಾಡಿ, 75 ವರ್ಷದ ಹಿಂದೆ ಯಾವ ತಜ್ಞರಿಗೆ ಬಾರದ ಆಲೋಚನೆ ನಮ್ಮ ಗೃಹ ಸಚಿವರಿಗೆ ಏಕೆ ಬಂತು. ರಾಜಕೀಯ ದ್ವೇಷ ತೀರಿಸಿಕೊಳ್ಳಲು ಇದನ್ನು ಬಳಕೆ ಮಾಡುವಂತಹ ಅವಕಾಶ ಸಿಕ್ಕಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪೊಲೀಸ್ ಅಧಿಕಾರಿಗಳು ಹಿಟ್ಲರ್ ಆಗಲು ಅವಕಾಶ ಇದೆ. ಇದು ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣವಾಗಲಿದೆ. ವ್ಯಂಗ್ಯಚಿತ್ರ ರಚಿಸಲು ಅವಕಾಶ ಇಲ್ಲದಂತಾಗುತ್ತದೆ. ಭ್ರಷ್ಟಾಚಾರದಂತಹ ಗಂಭೀರ ಆರೋಪದ ಸುದ್ದಿ ಮಾಡಿದರೆ ಮಾಧ್ಯಮದ ಪ್ರತಿನಿಧಿಗಳು ಮೊದಲೇ ಜಾಮೀನು ಪಡೆಯುವಂತಹ ಸ್ಥಿತಿ ಇದೆ. ವಿಧೇಯಕ ಜಾರಿಗೆ ತರುವ ಉದ್ದೇಶ ವೋಟ್ ಬ್ಯಾಂಕ್ ರಾಜಕಾರಣವಾಗಿದೆ. ತುರ್ತುಪರಿಸ್ಥಿತಿ ಜಾರಿಗೆ ತಂದವರಿಂದ ಇನ್ನೇನೂ ಬಯಸಲು ಸಾಧ್ಯವೆಂದು ಅಸಮಾಧಾನ ವ್ಯಕ್ತಪಡಿಸಿದರು.

## ಪ್ರತ್ಯೇಕ ಅಪಘಾತದಲ್ಲಿ ಮೂವರ ಸಾವು

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ವಿವಿಧ ಠಾಣಾ ವ್ಯಾಪ್ತಿಯಲ್ಲಿ ನಡೆದ ಪ್ರತ್ಯೇಕ ರಸ್ತೆ ಅಪಘಾತದಲ್ಲಿ ನಾಲ್ಕು ವರ್ಷದ ಮಗು ಸೇರಿ ಮೂವರು ಮೃತಪಟ್ಟು ಇಬ್ಬರು ಗಾಯಗೊಂಡಿರುವ ಘಟನೆ ನಡೆದಿದೆ.

ಚನ್ನರಾಯಪಟ್ಟಣ ತಾಲ್ಲೂಕಿನ ಮಂಡಿಕೊಪ್ಪಲು ಗೇಟ್‌ನ ಗಾರ್ಡ್ ವಿನ್ ಕಾನ್ವೆಂಟ್‌ನ ಮುಖ್ಯ ರಸ್ತೆಯಲ್ಲಿ ಗೂಡ್ಸ್ ವಾಹನ ಡಿಕ್ಕಿಯಾಗಿ ಬೈಕ್ ಮೇಲಿದ್ದ ಬಿದ್ದು ಮಗು ಮೃತಪಟ್ಟಿದೆ.

ಬಾಗೂರು ಹೋಬಳಿ ಕಕ್ಕಿಹಳ್ಳಿ ಗ್ರಾಮದ ದಿಕ್ಷೀತ್‌ಗೌಡ ಮೃತ ದುರ್ದೈವಿ. ಮತ್ತೊಂದು ಮಗು ಸಾರ್ಥಕ್ ಮತ್ತು ಬೈಕ್ ಸವಾರ ಚೋಳರಾಜುಎಂಬುವವರಿಗೆ ಗಾಯಗಳಾಗಿವೆ.

ಬುಧವಾರ ಎಂದಿನಂತೆ ಶಾಲೆ ಬಿಟ್ಟ ಬಳಿಕ ಇಬ್ಬರೂ ಮಕ್ಕಳನ್ನು ಬೈಕ್‌ನಲ್ಲಿ ಕೂರಿಸಿಕೊಂಡಿದ್ದ ಚೋಳರಾಜು ರಸ್ತೆ ದಾಟಲು ನಿಂತಿದ್ದಾಗ ಕೆಂಬಾಳು ಕಡೆಯಿಂದ ವೇಗವಾಗಿ ಬಂದ ಗೂಡ್ಸ್ ವಾಹನ ಡಿಕ್ಕಿಯಾಗಿದೆ. ಅಪಘಾತದ ರಭಸಕ್ಕೆ ಮೂವರು ಕೆಳಗೆ ಬಿದ್ದಿದ್ದು ತಲೆಗೆ ಬಲವಾದ ಪೆಟ್ಟು ಬಿದ್ದ ಹಿನ್ನಲೆಯಲ್ಲಿ ಬಾಲಕ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ನುಗ್ಗೇಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಕೆಎಸ್ ಆರ್‌ಟಿಸಿ ಬಸ್ ಡಿಕ್ಕಿಯಾಗಿ ಪಾದಚಾರಿ ಮೃತಪಟ್ಟಿರುವ ಘಟನೆ ಅರಸೀಕೆರೆ ತಾಲ್ಲೂಕು ತಿಪಟೂರು ರಸ್ತೆಯಲ್ಲಿ ನಡೆದಿದೆ.

ಅರಸೀಕೆರೆ ತಾಲ್ಲೂಕು ಹುಣಸಿಕಟ್ಟೆ ಗ್ರಾಮದ ಬಸವರಾಜು(70) ಮೃತರು. ರಾಮಸಾಗರ ಗ್ರಾಮದಲ್ಲಿ ಜಮೀನು ಕೆಲಸ ಮಾಡಿಕೊಂಡಿದ್ದ ಬಸವರಾಜು ಮನೆಗೆ ಸಾಮಾಗ್ರಿ ತರಲೆಂದು ಹೋಗುತ್ತಿದ್ದಾಗ ತಿಪಟೂರು ಕಡೆಯಿಂದ ವೇಗವಾಗಿ ಬಂದ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿಯಾ ಗಿದೆ. ಗಂಭೀರ ಗಾಯಗೊಂಡಿದ್ದ ವೃದ್ಧ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅರಸೀಕೆರೆ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಬೈಕ್ ನಿಯಂತ್ರಣ ತಪ್ಪಿ ಕೆಳಗೆ ಬಿದ್ದು ಹಿಂಬದಿ ಸವಾರ ಮೃತ ಪಟ್ಟಿರುವ ಘಟನೆ ಹಾಸನ ತಾಲ್ಲೂಕಿನ ಮಾರ್ಗನಹಳ್ಳಿ ಸಮೀಪ ನಡೆದಿದೆ. ಕಟ್ಟಾಯ ಹೋಬಳಿ ಬಿಲಗುಂದ ಗ್ರಾಮದ ಬಿ.ಜಿ.ಚೇತನ್ ಮೃತರು. ಮನೆಗೆ ಸಾಮಾಗ್ರಿ ತರಲೆಂದು ರಂಗಸ್ವಾಮಿ ಎಂಬುವವರ ಜೊತೆಗೆ ಹಾಸನಕ್ಕೆ ತೆರಳಿದ್ದರು. ರಾತ್ರಿ 8ರ ಸಮಯದಲ್ಲಿ ವಾಪಾಸ್ ಊರಿಗೆ ಹೋಗುತ್ತಿದ್ದಾಗ ಬೈಕ್ ನಿಯಂತ್ರಣ ತಪ್ಪಿ ಹಿಂಬದಿ ಕುಳಿತಿದ್ದ ಚೇತನ್ ನಿಯಂತ್ರಣ ತಪ್ಪಿ ಕೆಳಗೆ ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಹಾಸನ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# 56 ಸಾವಿರ ಪಾಕಿಸ್ತಾನಿ ಭಿಕ್ಷುಕರ ಹೊರ ಹಾಕಿದ ಸೌದಿ

## ಪ್ರವಾಸಿ ವೀಸಾ ದುರುಪಯೋಗ | ಪಾಕಿಸ್ತಾನದ ಗೌರವಕ್ಕೆ ಧಕ್ಕೆ

• ಪ್ರಜೋದಯ ವರದಿ

**ಸೌದಿ ಅರೇಬಿಯಾ:** ಸೌದಿ ರಾಷ್ಟ್ರಗಳಿಗೆ ವಲಸೆ ಹೋಗುತ್ತಿರುವ ಪಾಕಿಸ್ತಾನೀಯರಲ್ಲಿ ಕೆಲವರು ಅಲ್ಲೇ ಭಿಕ್ಷೆ ಬೇಡಿಕೊಂಡು ಜೀವನ ನಡೆಸುತ್ತಿರುವುದು ಪತ್ತೆಯಾಗಿದ್ದು 56 ಸಾವಿರ ಜನರನ್ನು ವಾಪಾಸ್ ಕಳುಹಿಸಲಾಗಿದೆ.

ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಪಾಕಿಸ್ತಾನ ಮೂಲದ ಭಿಕ್ಷುಕರು ಹೆಚ್ಚಾಗುತ್ತಿರುವುದು ಪಾಕಿ ಸ್ತಾನದ ಗೌರವಕ್ಕೆ ಧಕ್ಕೆ ತರುತ್ತಿದೆ. ಸೌದಿ ಅರೇಬಿಯಾ, ಯುಎಇ, ಕುವೈತ್, ಅಜರ್‌ಬೈಜಾನ್ ಮತ್ತು ಬಹ್ರೇನ್‌ನಂತಹ ದೇಶಗಳು ಸಾವಿರಾರು ಪಾಕಿಸ್ತಾನಿ ಭಿಕ್ಷುಕರನ್ನು ಗಡಿಪಾರು ಮಾಡಿವೆ. ಸೌದಿ ಅರೇಬಿಯಾ ಒಂದೇ ಸುಮಾರು 56,000 ಪಾಕಿಸ್ತಾನಿ ಭಿಕ್ಷುಕರನ್ನು ಗಡಿಪಾರು ಮಾಡಿದೆ ಎಂದು ವರದಿಯಾಗಿದೆ.

ಪಾಕಿಸ್ತಾನದ ನಾಗರಿಕರು ಪರದೇಶಗಳಲ್ಲಿ ಭಿಕ್ಷಾಟನೆಗೆ ಇಳಿದಿರುವುದು ಪಾಕಿಸ್ತಾನಕ್ಕೂ ಗೊತ್ತಿದೆ. ಅದನ್ನು ತಡೆಯಲು ಮುಂದಾಗಿರುವ ಪಾಕಿಸ್ತಾನ, 2025ರಲ್ಲಿ 66,154 ಪ್ರಯಾಣಿಕರನ್ನು ತಡೆದು ತಪಾಸಣೆ ನಡೆಸಿದೆ. ಅವರಲ್ಲಿ ಕೆಲವರು ಸಂಘಟಿತ ಭಿಕ್ಷಾಟನೆ ಗ್ಯಾಂಗ್‌ಗಳಿಗೆ ಸೇರಿದವರೆಂದು ಪತ್ತೆ ಹಚ್ಚಲಾಗಿದ್ದು ಅವರನ್ನು ವಿದೇಶಗಳಿಗೆ ಹೋಗುವುದನ್ನು ತಡೆಯಲು ಪ್ರಯತ್ನಿಸಿದೆ. ಯುಎಇ ಕೂಡ ಪಾಕಿಸ್ತಾನಿ ನಾಗರಿಕರಿಗೆ ವೀಸಾ ನೀಡುವುದನ್ನು ಸ್ಥಗಿತಗೊಳಿಸಿದೆ. ಈ ಭಿಕ್ಷುಕರು ಯಾತ್ರಾ ಮತ್ತು ಪ್ರವಾಸಿ ವೀಸಾಗಳನ್ನು ದುರುಪಯೋಗಪಡಿಸಿಕೊಂಡು ವಿದೇಶಗಳಿಗೆ ಹೋಗಿ, ಅಲ್ಲಿನ ಜನರ ಬಳಿ ಭಿಕ್ಷೆ ಕೇಳುತ್ತಾರೆ. ಇದು ಪಾಕಿಸ್ತಾನದ ನಿಜವಾದ ಯಾತ್ರಿಕರು, ಕಾರ್ಮಿಕರು ಮತ್ತು ವಿದ್ಯಾರ್ಥಿಗಳಿಗೆ ತೊಂದರೆ ಉಂಟುಮಾಡುತ್ತಿದೆ.

ಪಾಕಿಸ್ತಾನದ ಗಡಿ ಭದ್ರತಾ ಏಜೆನ್ಸಿ ಮುಖ್ಯಸ್ಥ ರಿಫತ್ ಮುಖ್ತಾರ್ ಅವರು, ಸೌದಿ ಅರೇಬಿ ಯಾದಿಂದ ಸುಮಾರು 56,000 ಪಾಕಿಸ್ತಾನಿ ಭಿಕ್ಷುಕರನ್ನು ಗಡಿಪಾರು ಮಾಡಲಾಗಿದೆಯೆಂದು ತಿಳಿಸಿದ್ದಾರೆ. ಇದೇ ವೇಳೆ, 2025ರಲ್ಲಿ 66,154 ಪ್ರಯಾಣಿಕರನ್ನು ಭಿಕ್ಷಾಟನೆಯ ಉದ್ದೇಶಕ್ಕಾಗಿ ವಿದೇಶಗಳಿಗೆ ತೆರಳುವವರನ್ನು ಪತ್ತೆ ಹಚ್ಚಿ ತಡೆಯಲಾಗಿದೆ. ಸಂಘಟಿತ ಭಿಕ್ಷಾಟನಾ ಜಾಲಗಳು ಮತ್ತು ಅಕ್ರಮ ವಲಸಿಗರು ವಿದೇಶಗಳಿಗೆ ಪ್ರಯಾಣಿಸುವುದನ್ನು ತಡೆಯಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿದು ಬಂದಿದೆ. ಈ ಅಂಕಿ ಅಂಶಗಳು ಪಾಕಿಸ್ತಾನದ ಸಂಸದೀಯ ಸಮಿತಿಯಿಂದ ಹೊರಬಿದ್ದಿವೆ. ಪಾಕಿಸ್ತಾನ ಸರ್ಕಾರವು ಸಾವಿರಾರು ನಾಗರಿಕರನ್ನು ಎಕ್ಸಿಟ್ ಕಂಟ್ರೋಲ್ ಲಿಸ್ಟ್ (ಇಸಿಎಲ್) ಅಂದರೆ ನೋ-ಫ್ಲೈ ಪಟ್ಟಿಯಲ್ಲಿ ಸೇರಿಸಿದ ನಂತರವೂ ಸಮಸ್ಯೆ ಮುಂದುವರಿದಿದೆ.

ಈ ವೃತ್ತಿಪರ ಭಿಕ್ಷುಕರು ಪಾಕಿಸ್ತಾನದ ಗೌರವಕ್ಕೆ ಧಕ್ಕೆ ತರುತ್ತಿದ್ದಾರೆ. ಎಫ್‌ಐಎ ಮುಖ್ಯಸ್ಥ ಮುಖ್ತಾರ್ ಅವರ ಪ್ರಕಾರ, ಅಕ್ರಮ ವಲಸೆ ಮತ್ತು ಭಿಕ್ಷಾಟನಾ ಜಾಲಗಳು ಪಾಕಿಸ್ತಾನದ ಜಾಗತಿಕ ಚಿತ್ರಣವನ್ನು ಗಂಭೀರವಾಗಿ ಹಾನಿ ಮಾಡುತ್ತಿವೆ. ವರ್ಷಗಳಿಂದ, ಪಾಕಿಸ್ತಾನಿ ಭಿಕ್ಷುಕರು ಪಶ್ಚಿಮ ಏಷ್ಯಾದ ನಗರಗಳಲ್ಲಿ ಹೆಚ್ಚಾಗುತ್ತಿದ್ದಾರೆ. ಅವರು ಯಾತ್ರಾ ಮತ್ತು ಪ್ರವಾಸಿ ವೀಸಾಗಳನ್ನು ದುರುಪಯೋಗಪಡಿಸಿಕೊಂಡು, ವಿದೇಶಿ ಬೀದಿಗಳಲ್ಲಿ ಹಣಕ್ಕಾಗಿ ಯಾಚಿಸುತ್ತಾರೆ. ಈ ಸಮಸ್ಯೆಯು ಆತಿಥೇಯ ದೇಶಗಳನ್ನು ಚಿಂತೆಗೀಡು ಮಾಡಿದೆ. ಅಲ್ಲದೆ, ನಿಜವಾದ ಪಾಕಿಸ್ತಾನಿ ಯಾತ್ರಿಕರು, ಕಾರ್ಮಿಕರು ಮತ್ತು ವಿದ್ಯಾರ್ಥಿಗಳು ಕಠಿಣ ವೀಸಾ ಪರಿಶೀಲನೆ ಮತ್ತು ತಿರಸ್ಕಾರ ಎದುರಿಸುವಂತಾಗಿದೆ.

**ಟ್ರಂಪ್ ಒತ್ತಡಕ್ಕೆ ಪಾಕಿಸ್ತಾನ ತಲ್ಲಣ**

ಪಾಕಿಸ್ತಾನದ ಸೇನಾ ಮುಖ್ಯಸ್ಥ ಆಸಿಮ್ ಮುನೀರ್ ಅವರು ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕಠಿಣ ಒತ್ತಡಕ್ಕೆ ಸಿಲುಕಿದ್ದಾರೆ. ಗಾಜಾಕ್ಕೆ ಸೇನೆಯನ್ನು ಕಳುಹಿಸುವಂತೆ ಟ್ರಂಪ್ ನೀಡುತ್ತಿರುವ ಸೂಚನೆಯು ಪಾಕಿಸ್ತಾನಕ್ಕೆ ಹೊಸ ಆತಂಕ ತಂದೊಡ್ಡಿದೆ. ಒಂದು ವೇಳೆ ಈ ಒತ್ತಡಕ್ಕೆ ಮಣಿದು ಸೇನೆ ಕಳುಹಿಸಿದರೆ, ಪಾಕಿಸ್ತಾನದಲ್ಲಿ ಆಂತರಿಕ ಅಸ್ಥಿರತೆ ಮತ್ತು ತೀವ್ರ ಪ್ರತಿರೋಧ ಎದುರಾಗುವ ಸಾಧ್ಯತೆಯಿದೆ. ಈ ಬೆಳವಣಿಗೆಯು ಮುನೀರ್ ಅವರಿಗೆ ಅಂತರ ರಾಷ್ಟ್ರೀಯ ರಾಜತಾಂತ್ರಿಕ ಸವಾಲಾಗಿ ಪರಿಣಮಿಸಿದೆ.



## ಪಿತ್ರಾರ್ಜಿತ ಆಸ್ತಿ ಅಕ್ರಮವಾಗಿ ಸವರ್ಣೀಯರಿಗೆ ಪೌತಿಖಾತೆ

### ರಾಜಸ್ವ ನಿರೀಕ್ಷಕ, ಗ್ರಾಮ ಲೆಕ್ಕಾಧಿಕಾರಿ ಅಮಾನತುಗೊಳಿಸಿ ಕ್ರಮಕ್ಕೆ ದಸಂಸ ಆಗ್ರಹ

• ಪ್ರಜೋದಯ ವರದಿ

**ಹಾಸನ:** ಪರಿಶಿಷ್ಟ ಜಾತಿಯ ಪಿತ್ರಾರ್ಜಿತ ಆಸ್ತಿಯನ್ನು ಸುಳ್ಳು ದಾಖಲೆಗಳನ್ನು ನೀಡಿ ಅಕ್ರಮವಾಗಿ ಸವರ್ಣೀಯರಿಗೆ ಖಾತೆ ಮಾಡಿರುವ ರಾಜಸ್ವನಿರೀಕ್ಷಕ, ಗ್ರಾಮ ಲೆಕ್ಕಾಧಿಕಾರಿಯನ್ನು ಕರ್ತವ್ಯದಿಂದ ಅಮಾನತುಗೊಳಿಸಬೇಕೆಂದು ದಸಂಸ ರಾಜ್ಯ ಸಂಚಾಲಕ ಎಂ.ಸೋಮಶೇಖರ್ ಅವರು ಒತ್ತಾಯಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೊಳೆನರಸೀಪುರ ತಾಲ್ಲೂಕು ಹಳ್ಳಿಮೈಸೂರು ಹೋಬಳಿ ಮಾದಿಹಳ್ಳಿ ಗ್ರಾಮದ ಪರಿಶಿಷ್ಟ ಜಾತಿಗೆ ಸೇರಿದ ದ್ಯಾವ ಬಿನ್ ಕರಿಯ ಎಂಬುವರ ಪಿತ್ರಾರ್ಜಿತ 7 ಎಕರೆ ಜಮೀನನ್ನು ಸವರ್ಣೀಯರಿಗೆ ಪೌತಿಖಾತೆ ಮಾಡಿ ಕೊಟ್ಟಿರುವ ರಾಜಸ್ವನಿರೀಕ್ಷಕ ಎಂ.ಎನ್.ಉದಯ್ ಕುಮಾರ್, ಗ್ರಾಮ ಲೆಕ್ಕಾಧಿಕಾರಿ ಸುನಿಲ್ ಗೌಡ ಅವರ ಮೇಲೆ ಪರಿಶಿಷ್ಟ ಜಾತಿ ವರ್ಗಗಳ ದೌರ್ಜನ್ಯ ಕಾಯ್ದೆಯಡಿ ಪ್ರಕರಣ ದಾಖಲಿಸಬೇಕೆಂದು ಆಗ್ರಹಿಸಿದರು.

ಮಾದಿಹಳ್ಳಿ ಗ್ರಾಮದ ಗ್ರಾಮದ ಸ.ನಂ.9/1 ರಲ್ಲಿ ದ್ಯಾವ ಬಿನ್ ಕರಿಯ ಅವರ ಹೆಸರಿನಲ್ಲಿ 8.24 ಎಕರೆ ಜಮೀನಿತ್ತು. ಅವರ ಮತ್ತವರ ಪತ್ನಿ, ಮಕ್ಕಳು ನಿಧನ ಹೊಂದಿದ್ದಾರೆ.

ವಂಶವೃಕ್ಷದ ಪ್ರಕಾರ ಅವರ ವಾರಸುದಾರ ಈರಯ್ಯ ಮತ್ತು ವರಲಕ್ಷ್ಮಿ ಎಂಬುವವರು ವಾರಸುದಾರರಾಗಿರುತ್ತಾರೆ. ಈ ನಡುವೆ 1.24 ಎಕರೆ ಜಮೀನು 1997 ರಲ್ಲಿ ಹೇಮಾವತಿ ಜಲಾಶಯಕ್ಕೆ ಭೂ ಸ್ವಾಧೀನವಾಗಿದೆ. ಉಳಿದ 7 ಎಕರೆ ಜಮೀನು ಈರಯ್ಯ ಬಿನ್ ಕರಿಯ ಎಂಬುವರ ಹೆಸರಿನಲ್ಲೇ ಸ್ವಾಧೀನದಲ್ಲಿದೆ. ಹಾಲಿ ಅನುಭವದಾರರೂ ಈರಯ್ಯ ಅವರೇ ಆಗಿದ್ದಾರೆ. ಅದೇ ಹಳ್ಳಿ ಮೈಸೂರು ಹೋಬಳಿಯ ಜಾಕನಹಳ್ಳಿ ಗ್ರಾಮದ ರೇವಣ್ಣ, ನಾಗಮ್ಮ, ರಂಗಮ್ಮ, ದೊಡ್ಡೇಗೌಡ, ರಾಜೇಗೌಡ ಎಂಬುವವರ ಹೆಸರಿಗೆ ಪರಿಶಿಷ್ಟ ಜಾತಿಯವರಿಗೆ ಸೇರಿದ 7 ಎಕರೆ



ಜಮೀನನ್ನು ಪೌತಿ ಆಧಾರದ ಮೇಲೆ ಅಕ್ರಮವಾಗಿ ಎಂ.ಆರ್.ಹೆಚ್. 2023 ಜ.9 ರಂದು ರಾಜಸ್ವನಿರೀಕ್ಷಕರಾದ ಎಂ.ಎನ್. ಉದಯ ಕುಮಾರ್ ಜಂಟಿ ಖಾತೆ ಮಾಡಿಕೊಟ್ಟಿದ್ದಾರೆ ಎಂದು ದೂರಿದರು.

ಅಕ್ರಮವಾಗಿ ಖಾತೆ ಮಾಡಿಸಿಕೊಂಡಿರುವ ಸರ್ವಾಣೀಯರು ನೀಡಿರುವ ವಂಶವೃಕ್ಷ ದಾಖಲೆ, ಕುಟುಂಬದ ಮರಣ ದಾಖಲೆಗೂ, ಪಹಣಿಗೂ ತಾಳೆಯೇ ಇಲ್ಲ. ಆದರೂ ದಲಿತರ ಭೂಮಿಯನ್ನುಸವರ್ಣೀಯರ ಹೆಸರಿಗೆ ಮಾಡಿಕೊಟ್ಟಿರುವ ಅಧಿಕಾರಿಗಳ ಮೇಲೆ ಕೂಡಲೇ ಕ್ರಮ ಕೈಗೊಳ್ಳಬೇಕು. ಜಮೀನಿನ ಮೂಲಕ ಮಾಲೀಕ ಈರಯ್ಯ ಅವರು ಈಗ ಸರ್ವಾಣೀಯರ ಬೆದರಿಕೆಗೆ ಹೆದರಿ ಈಗ ಊರು ತೊರೆದು ಬೇರೆಡೆ ಜೀವನ ಸಾಗಿಸುತ್ತಿದ್ದಾರೆ. ಇದಕ್ಕೆ ಕಾರಣಾಗಿರುವ ಭ್ರಷ್ಟ ಅಧಿಕಾರಿಗಳ ವಿರುದ್ಧ ಕ್ರಮ ಆಗಬೇಕು.ಕೂಡಲೇ ಅವರನ್ನು ಅಮಾನತು ಪಡಿಸಬೇಕೆಂದು ಹೇಳಿದರು.

ಈ ಸಂಬಂಧ ಈಗಾಗಲೇ ಪೊಲೀಸರು ಸೇರಿ ಜಿಲ್ಲಾಡಳಿತದ ಅಧಿಕಾರಿಗಳು, ಲೋಕಾಯುಕ್ತ, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯಕ್ಕೆ ದೂರು ನೀಡಲಾಗಿದೆ.ಸಂಬಂಧಪಟ್ಟವರು ತುರ್ತು ಕ್ರಮಕೈಗೊಂಡು ನ್ಯಾಯ ಕೊಡಿಸಬೇಕೆಂದು ಮನವಿ ಮಾಡಿದರು. ದಲಿತಮುಖಂಡ ಹೆಚ್.ಕೆ.ಸಂದೇಶ್,ಮಾದಿಗದಂಡೋರ ಸಮಿತಿ ಟಿ.ಆರ್.ವಿಜಯಕುಮಾರ್, ಮುಖಂಡರಾದ ಮಂಜು, ಉಮೇಶ್ ತೇಜೂರು, ಸಂತ್ರಸ್ತ ರೈತ ಈರಯ್ಯ ಇದ್ದರು.

## ನಾಳೆ ಕ್ರಿಸ್ಮಸ್ ಭರವಸೆ ಜಾಥಾ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಸಮಸ್ತ ಕ್ರೈಸ್ತ ಸಮುದಾಯದ ವತಿಯಿಂದ ಡಿ.20 ರಂದು ಕ್ರಿಸ್ಮಸ್-2025 ಭರವಸೆಯ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ಅಖಿಲ ಕರ್ನಾಟಕ ಯುನೈಟೆಡ್ ಕ್ರಿಶ್ಚಿಯನ್ ಫೋರಮ್ ಫಾರ್ ಹ್ಯೂಮನ್ ರೈಟ್ಸ್ ಗೌರವ ಅಧ್ಯಕ್ಷ ರೆ.ಫಾ.ಪ್ಯಾಟ್ರಿಕ್ ಜೋನ್ಸ್‌ರಾವ್ ಅವರು ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ.20ರ ಮಧ್ಯಾಹ್ನ 3 ಗಂಟೆಗೆ ನಗರದ ಸಂತ ಅಂತೋಣಿ ದೇವಾಲಯದಿಂದ ಜಾಥಾ ಹೊರಡಲಿದೆ. ಅದರಲ್ಲಿ ಸ್ತಬ್ದ ಚಿತ್ರಗಳು, ಕ್ರಿಸ್ಮಸ್ ನೃತ್ಯ ರೂಪಕ, ಕೋಲಾಟ, ಕ್ರಿಸ್ಮಸ್ ಹಾಡುಗಳು ಇರುತ್ತವೆ. ಜಾಥಾದಲ್ಲಿ 4ರಿಂದ 5 ಸಾವಿರ ಮಂದಿ ಭಾಗಿಯಾಗುವ ನಿರೀಕ್ಷೆ ಇದೆ. 2025 ಜ್ಯುಬಿಲಿ ವರ್ಷವಾಗಿದ್ದು, ಅದನ್ನು ಸಂಭ್ರಮವಾಗಿ ಆಚರಿಸುವ ಬದಲು ನೊಂದವರಲಿಗೆ ಭರವಸೆ ಆಗಲಿ ಎಂದು ಜಾಥಾ ನಡೆಸಲಾಗುತ್ತಿದೆಂದು ಹೇಳಿದರು.

ಸಂತ ಅಂತೋನಿಯವರ ದೇವಾಲಯದಿಂದ ಹೊರಡುವ ಜಾಥಾವು



ಎನ್.ಆರ್.ವೃತ್ತ, ಹೇಮಾವತಿ ಪ್ರತಿಮೆ, ಮಹಾವೀರ ವೃತ್ತ, ಸಹ್ಯಾದ್ರಿ ಸರ್ಕಲ್, ಮಹಾರಾಜ ಪಾರ್ಕ್ ರಸ್ತೆ, ಸ್ಟೆಟರ್ಸ್ ಮೆಮೋರಿಯಲ್ ಹಾಲ್ ವೃತ್ತ, ಆರ್.ಸಿ.ರಸ್ತೆ ಮೂಲಕ ಸಂಚರಿಸಿ ಮತ್ತೆ ಜಿಲ್ಲಾ ಪಂಚಾಯಿತಿ ಹಿಂಭಾಗದ ಸ್ವಸ್ಥಾನಕ್ಕೆ ಬರಲಿದೆ. ಸಂಜೆ ಚರ್ಚ್ ಆವರಣದಲ್ಲಿ ನಡೆಯುವ ಕ್ರಿಸ್ಮಸ್ ಕಾರ್ಯಕ್ರಮದಲ್ಲಿ ಹಾಸನ-ಚಿಕ್ಕಮಗಳೂರು ಧರ್ಮಕ್ಷೇತ್ರದ ಬಿಷಪ್ ಡಾ.ಪಿ. ಅಂತೋಣಿದಾಸ್, ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ, ಸಂಸದ ಶ್ರೇಯಸ್ ಪಟೇಲ್, ಸ್ಥಳೀಯ ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರ್ ಮೊದಲಾದವರು ಭಾಗಿಯಾಗಲಿದ್ದಾರೆ ಎಂದರು.

ರೆ.ಫಾ.ಸುದರ್ಶನ್ ಕುಮಾರ್, ಸಿ.ಎಸ್.ಜೋಸೆಫ್, ಕಾರ್ಯದರ್ಶಿ ಎಸಿಲ್ವೆಸ್ಟರ್, ಜೋಶ್ವಾ ಇದ್ದರು.

## ಪೆಟ್ರೋಲ್-ಡೀಸೆಲ್ ಕಳ್ಳತನ ಜಾಲ ಬೇಧಿಸಿದ ಪೊಲೀಸರು

• ಪ್ರಜೋದಯ ವರದಿ

**ಹಾಸನ:** ನಗರದ ಕೈಗಾರಿಕಾ ಪ್ರದೇಶದಲ್ಲಿ ಲೋಡ್ ಆಗಿರುವ ಪೆಟ್ರೋಲ್ ಹಾಗು ಡೀಸೆಲ್ ಕದ್ದು ಮಾರಾಟ ಮಾಡುತ್ತಿದ್ದ ಪ್ರಕರಣವನ್ನು ಪೊಲೀಸರು ಬುಧವಾರ ಬೇಧಿಸಿದ್ದಾರೆ.

ಪೊಲೀಸರ ದಿಢೀರ್ ದಾಳಿಯಿಂದ ಎಂ.ಹೊಸಕೊಪ್ಪಲುಗ್ರಾಮದ ಯೋಗೇಶ್ ಹಾಗು ಇತರರು ಸ್ಥಳದಿಂದ ಕಾಲ್ಕಿತ್ತಿದ್ದಾರೆ. ಖಚಿತ ಮಾಹಿತಿ ಮೇರೆಗೆ ನಗರ ಠಾಣೆ ಸಿಬ್ಬಂದಿಯು ಜ್ಞಾನಗುರುಕುಲ ಇಂಟರ್ ನ್ಯಾಷನಲ್ ಸ್ಕೂಲ್ ಸಮೀಪದಲ್ಲಿರುವ ಭರತ್ ವೇ ಬ್ರಿಡ್ಸ್ ರಸ್ತೆಯ ಖಾಲಿ ಶೆಡ್‌ನಲ್ಲಿ ಪೆಟ್ರೋಲ್ ಮತ್ತು ಡೀಸೆಲ್‌ಗಳನ್ನು ಕ್ಯಾನ್‌ಗಳಲ್ಲಿ ತುಂಬಿಸಿಟ್ಟಿರುವುದನ್ನು ಪತ್ತೆ ಹಚ್ಚಿದ್ದಾರೆ. ಸುಮಾರು 50 ಲೀಟರ್ ಕ್ಯಾನ್‌ಗಳಲ್ಲಿ ಇಂಧನವನ್ನು ತುಂಬಿಸಿದ್ದು ಈ ಬಗ್ಗೆ ಸ್ಥಳೀಯರನ್ನು ಕೇಳಿದಾಗ ನಿತ್ಯವೂ ಇಲ್ಲಿ ಈ ಕೆಲಸ ನಡೆಯುತ್ತದೆ. ಸಾರ್ವಜನಿಕರಿಗೆ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಾರೆಂದು ತಿಳಿಸಿದ್ದಾರೆ.

ಲಾರಿ ಚಾಲಕ ಹಾಗು ನಿರ್ವಾಹಕರಿಗೆ ಗೊತ್ತಾಗದ ರೀತಿಯಲ್ಲಿ ರಾತ್ರೋ ರಾತ್ರಿ ಪೆಟ್ರೋಲ್ ಖದ್ದು ಮಾರಾಟ ಮಾಡುತ್ತಾರೆಂಬುದು ತಿಳಿದುಬಂದಿದೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಡಿ.20ರವರೆಗೆ ಎಸ್‌ಎಸ್‌ಎಲ್‌ಸಿ ಅಭ್ಯಾಸ ಪರೀಕ್ಷೆ

• ಪ್ರಜೋದಯ ವರದಿ



**ಅರಕಲಗೂಡು:** ತಾಲ್ಲೂಕಿನಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಡಿ.20 ರವರೆಗೆ ಅಭ್ಯಾಸ ಪರೀಕ್ಷೆ ಹಮ್ಮಿಕೊಳ್ಳಲಾಗಿದೆ ಎಂದು ಬಿಇಒ ನಾರಾಯಣ ಅವರು ತಿಳಿಸಿದರು.

ಪಟ್ಟಣದ ಸಮಾಜ ಕಲ್ಯಾಣ ಇಲಾಖೆ ಬಾಲಕಿ ಯರ ವಿದ್ಯಾರ್ಥಿ ನಿಲಯಕ್ಕೆ ಭೇಟಿ ನೀಡಿ ವಿದ್ಯಾರ್ಥಿಗಳ ಅಭ್ಯಾಸ ಅವಲೋಕಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಕೆಎಸ್‌ಇಎಬಿ ತನ್ನ ಲಾಗಿನ್‌ನಲ್ಲಿ ಪ್ರತಿ ವಿಷಯದ ತಲಾ ನಾಲ್ಕು ಅಭ್ಯಾಸ ಪ್ರಶ್ನೆ ಪತ್ರಿಕೆ ನೀಡಿದ್ದು, ಅದರಲ್ಲಿ ಮೊದಲ ಪ್ರಶ್ನೆ ಪತ್ರಿಕೆಯ ಪರೀಕ್ಷೆಯನ್ನು ನಡೆಸುವಂತೆ ತಾಲ್ಲೂಕಿನ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಪ್ರೌಢಶಾಲೆಗಳ ಮುಖ್ಯ ಶಿಕ್ಷಕರಿಗೆ ಸೂಚನೆ ನೀಡಲಾಗಿದೆ ಎಂದರು.

ವಿದ್ಯಾರ್ಥಿಗಳು ನಿಗದಿತ ದಿನದಂದು ರಾತ್ರಿ 7ರಿಂದ 9.30ರವರೆಗೆ ನಿಗದಿತ ವಿಷಯದ ಪರೀಕ್ಷೆಯನ್ನು ತಮ್ಮ ಮನೆಯಲ್ಲೇ ಕುಳಿತು ಬರೆಯುವರು. ಪರೀಕ್ಷೆ ಬರೆಯಲು ವಾತಾವರಣ ನಿರ್ಮಿಸಿಕೊಡಲು ಪೋಷಕರಿಗೆ ಸೂಚನೆ ನೀಡಲಾಗಿದೆ. ಮಕ್ಕಳು ಪುಸ್ತಕ ನೋಡಿ ಅಥವಾ ನೋಡದೆಯೂ ಪರೀಕ್ಷೆ ಸಮಿತಿಯ ಬರೆಯಬಹುದು ಪರೀಕ್ಷಾ ಶಿಕ್ಷಕರು ವಿದ್ಯಾರ್ಥಿಗಳ ಮನೆಗೆ ಭೇಟಿ ನೀಡಿ ಪರಿಶೀಲಿಸುವರು.

ಮರು ದಿನ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ಶಿಕ್ಷಕರು ಪರಿಶೀಲಿಸಿ ವಿದ್ಯಾರ್ಥಿಗ ಳೊಂದಿಗೆ ಚರ್ಚೆ ನಡೆಸುವರು. ತಾಲ್ಲೂಕಿನ ಪ್ರೌಢಶಾಲೆಗಳಲ್ಲಿ 10 ನೇ ತರಗತಿ ವಿದ್ಯಾರ್ಥಿಗಳ ತಂಡ ರಚಿಸಿದ್ದು, ಈ ತಂಡದ ನಾಯಕರಿಗೆ ಪರೀಕ್ಷಾ ನೀಲ ನಕ್ಷೆ ತಿಂಗಳಿನಲ್ಲಿ ಹೆಚ್ಚಿನ ಅಂಕಗಳಿಕೆ ಕುರಿತು ಜನವರಿಯಲ್ಲಿ ಕಾರ್ಯಾಗಾರ ಹಮ್ಮಿಕೊಂಡಿರುವುದಾಗಿ ಹೇಳಿದರು.

## ಜಾನುವಾರು ಕಾಲು ಬಾಯಿ ಲಸಿಕಾ ಆಂದೋಲನ: ಶೇ.95 ರಷ್ಟು ಗುರಿ ಸಾಧನೆ

• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನಲ್ಲಿ ನಡೆದ ಜಾನುವಾರುಗಳಿಗೆ ಕಾಲು ಬಾಯಿ ಲಸಿಕಾ ಆಂದೋಲನದಲ್ಲಿ ಶೇ.95 ರಷ್ಟು ಗುರಿ ಸಾಧನೆಯಾಗಿದೆ ಎಂದು ಪಶು ವೈದ್ಯಕೀಯ ಇಲಾಖೆ ಸಹಾಯಕ ನಿರ್ದೇಶಕ ಡಾ.ದಿಲೀಪ್ ಅವರು ತಿಳಿಸಿದರು.

ಸುದ್ದಿಗಾರರಿಗೆ ಮಾಹಿತಿ ನೀಡಿದ ಅವರು, ತಾಲ್ಲೂಕಿನಲ್ಲಿ 81,182 ಜಾನುವಾರುಗಳಿದ್ದು,75,020 ಜಾನುವಾರುಗಳಿಗೆ ಲಸಿಕೆ ಹಾಕಲಾಗಿದೆ. ಈ ತಿಂಗಳ ಅಂತ್ಯದೊಳಗೆ ಶೇ.100 ಗುರಿ ಸಾಧನೆ ಪೂರ್ಣಗೊಳಿಸಲಾಗುವುದು. 30 ಸಾವಿರ ಕುರಿಗಳಿಗೆ ಪಿಪಿಸಿ ಲಸಿಕೆ ನೀಡಲಾಗಿದೆ ಎಂದರು.

ತಾಲ್ಲೂಕಿನಲ್ಲಿ 24 ಪಶು ಆಸ್ಪತ್ರೆಗಳಿದ್ದು ಎಲ್ಲವೂ ಸ್ವಂತ ಕಟ್ಟಡ ಹೊಂದಿದೆ. ವೈದ್ಯರು ಮಾತ್ರ 5 ಮಂದಿ ಇದ್ದು ಸರದಿಯ ಮೇಲೆ ಎಲ್ಲಾ ಆಸ್ಪತ್ರೆಗಳಲ್ಲಿ ಚಿಕಿತ್ಸಾ ಸೌಲಭ್ಯ ದೊರೆಯುವಂತೆ ನೋಡಿಕೊಳ್ಳಲಾಗುತ್ತಿದೆ. ಆಂಬುಲೆನ್ಸ್ ವ್ಯವಸ್ಥೆ ಇದ್ದು ತುರ್ತು ಸಂದರ್ಭಗಳಲ್ಲಿ 1962 ನಂಬರ್‌ಗೆ ಕರೆ ಮಾಡಿದರೆ ಮನೆ ಬಾಗಿಲಿಗೆ ಬಂದು ಉಚಿತವಾಗಿ ಚಿಕಿತ್ಸೆ ನೀಡಲಾಗುವುದು. ಬೆಳಿಗ್ಗೆ 9 ರಿಂದ ಸಂಜೆ 5ರವರೆಗೆ



ಈ ಸೌಲಭ್ಯ ದೊರೆಯಲಿದೆ. ರೇಬೀಸ್ ಕುರಿತು ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಕಾರ್ಯ ನಡೆಸಲಾಗಿದೆ. 2,349 ಪ್ರಾಣಿಗಳಿಗೆ ರೇಬೀಸ್ ರೋಗದ ವಿರುದ್ಧ ಲಸಿಕೆ ಹಾಕಲಾಗಿದೆ. ರೇಬೀಸ್ ಲಸಿಕೆ ಲಭ್ಯವಿದ್ದು, ಬೀದಿ ನಾಯಿಗಳನ್ನು ಹಿಡಿದು ತಂದಲ್ಲಿ ಅವು ಗಳಿಗೆ ಉಚಿತವಾಗಿ ಲಸಿಕೆ ಹಾಕುಲಾ ಗುವುದು. ಈ ಕುರಿತು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. 1,676 ಕರುಗಳಿಗೆ ಕಂದು ರೋಗದ ವಿರುದ್ಧ, 7,785 ರಾಸುಗಳಿಗೆ ಗಳಲೆ ರೋಗ ಹಾಗೂ 69,732 ರಾಸುಗಳಿಗೆ ಚರ್ಮ ಗಂಟು ರೋಗದ ವಿರುದ್ಧ ಲಸಿಕೆ ಹಾಕಲಾಗಿದೆ. ಜಾನುವಾರುಗಳ ಆರೋಗ್ಯ ಶಿಬಿರಗಳನ್ನು ಏರ್ಪಡಿಸಿ ಚಿಕಿತ್ಸೆ ನೀಡುತ್ತಿರುವುದಾಗಿ ಮಾಹಿತಿ ನೀಡಿದರು.

## ಡಿ.22 ರಂದು ಮಾದಾರ ಮಹಾಸಭಾ ಸದಸ್ಯತ್ವ ನೋಂದಣಿ

• ಪ್ರಜೋದಯ ವರದಿ



**ಹಾಸನ:** ಕರ್ನಾಟಕ ಮಾದಾರ ಮಹಾಸಭಾ ಸದಸ್ಯತ್ವ ನೋಂದಣಿ ಹಾಗು ತಾಲ್ಲೂಕು-ಜಿಲ್ಲಾ ಘಟಕಗಳ ರಚನೆ ಕುರಿತು ಡಿ.22 ರಂದು ನಗರದ ಸ್ವಾಭಿಮಾನಿ ಭವನದಲ್ಲಿ ಸಭೆ ಹಮ್ಮಿಕೊಳ್ಳ ಲಾಗಿದೆ ಎಂದು ಮಹಾಸಭಾದ ಜಿಲ್ಲಾಧ್ಯಕ್ಷ ಟಿ.ಆರ್.ವಿಜಯ ಕುಮಾರ್ ಅವರು ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯಾದ್ಯಂತ ಆರಂಭವಾಗಿರುವ ಮಾದಾರ ಮಹಾಸಭಾಗೆ ತಾಲ್ಲೂಕು, ಜಿಲ್ಲಾ ಘಟಕಗಳ ರಚನೆ ಮಾಡುವ ಸಂಬಂಧ ಡಿ.22 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲೆಯ ಏಳೂ ತಾಲ್ಲೂಕುಗಳ ಮಾದಿಗ ಸಮುದಾಯದ ಎಲ್ಲಾ ಪಕ್ಷದ ರಾಜಕಾರಣಿಗಳು, ಹೋರಾಟಗಾರರು, ವಿದ್ಯಾರ್ಥಿಗಳು, ನೌಕರರು ಭಾಗಿಯಾಗ ಬಹುದು ಎಂದರು.

ಎಲ್ಲರಿಂದ ಸೂಕ್ತ ಸಲಹೆ ಸೂಚನೆ ಪಡೆದು ಪದಾಧಿಕಾರಿಗಳನ್ನು ಆಯ್ಕೆ ಮಾಡಿಕೊಂಡು ನೋಂದಣಿ ಅಭಿಯಾನ ನಡೆಸಲು ರಾಜ್ಯ ಸಮಿತಿ ಸೂಚಿಸಿದೆ. ಅದರಂತೆ ಒಂದು ವಿಧಾನಸಭಾ ಕ್ಷೇತ್ರದಲ್ಲಿ ತಲಾ 2 ಸಾವಿರದಂತೆ ನೋಂದಣಿ ಮಾಡಿಸುವ ಸಂಬಂಧ ಮಾದಿಗ ಸಮುದಾಯದ ಒಂದು ಕುಟುಂಬಕ್ಕೆ ಒಬ್ಬರಂತೆ 500 ರೂ. ನೀಡಿ ಸದಸ್ಯತ್ವ ನೋಂದಣಿ ಮಾಡಿಕೊಳ್ಳುವಂತೆ ಮನವಿ ಮಾಡಿದರು. ಸಮುದಾಯದ ಮುಖಂಡ ರಾದ ವತ್ಸಲಾ ಶೇಖರಪ್ಪ, ಸಿ.ಆರ್.ಮಂಜುನಾಥ್, ಶ್ರೀನಿವಾಸ್, ಬೈರೇಶ್, ಕಡಗ ಸತೀಶ್ ಇದ್ದರು.

## ರಾಶಿಕ್ ಗೌಡಗೆ ಸಾಮಾಜಿಕ ಸೇವಾ ರತ್ನ ಪ್ರಶಸ್ತಿ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಬೆಂಗಳೂರಿನ ಗಾಂಧಿ ಭವನದಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ತನಿಖಾ ಸಮಿತಿ ವತಿಯಿಂದ ವಿಶ್ವಮಾನವ ಹಕ್ಕುಗಳ ದಿನಾಚರಣೆ ಪ್ರಯುಕ್ತ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ತಾಲ್ಲೂಕಿನ ಬೂಕ ಗ್ರಾಮದ ರಾಶಿಕ್ ಗೌಡ ಅವರಿಗೆ ಸಾಮಾಜಿಕ ಸೇವಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ರಾಷ್ಟ್ರೀಯ ಮಾನವ ಹಕ್ಕುಗಳ ತನಿಖಾ ಸಮಿತಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಸಾಮಾಜಿಕ ಸೇವೆ ಮಾಡುವ ಮೂಲಕ ಶೋಷಿತರ ಬದುಕನ್ನು ಉತ್ತಮ ಪಡಿಸುವಲ್ಲಿ ಹಾಗೂ ಸೃಜನಶೀಲತೆಯನ್ನು ಪ್ರೇರೇಪಿಸುವಲ್ಲಿ ವಿಶೇಷ ಪಾಲ್ಗೊಳ್ಳುವಿಕೆಯನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗಿದೆ.



ರಾಷ್ಟ್ರೀಯ ಮಾನವ ಹಕ್ಕುಗಳ ತನಿಖಾ ಸಮಿತಿಯ ಸಂಸ್ಥಾಪಕ ಅಧ್ಯಕ್ಷ ಕೆ.ಸಂತೋಷ್, ಉಪಾಧ್ಯಕ್ಷ ಮಹಾದೇವ್, ಕಾನೂನು ಸಲಹೆಗಾರ ದೀಪಕ್, ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶ ಎಂ.ಎಸ್.ಶಂಕರಗುಳ್ಳಿ, ರಾಜ್ಯ ಮಕ್ಕಳ ರಕ್ಷಣಾ ಆಯೋಗದ ಸದಸ್ಯ ಡಾ.ಕೆ.ಟಿ. ತಿಪ್ಪೇಸ್ವಾಮಿ ಮುಂತಾದವರು ಹಾಜರಿದ್ದರು.

## ಇಂಡಿಯಾನಾ ಆಸ್ಪತ್ರೆಯಲ್ಲಿ ಸಂತಾನ ಲಾಭ ಶಿಬಿರ



• ಪ್ರಜೋದಯ ವರದಿ

**ಹಾಸನ:** ನಗರದ ಇಂಡಿಯಾನಾ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಹಾರ್ಟ್ ಸೆಂಟರ್‌ನಲ್ಲಿ ತಿಂಗಳ ಪ್ರತಿ ಶುಕ್ರವಾರ ಉಚಿತ ಸಂತಾನ ಲಾಭ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ.ಕೆ. ಇಂಪನ ಅವರು ತಿಳಿಸಿದರು.

ಗುರುವಾರ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿಬಿರದಲ್ಲಿ ಉಚಿತ ವೈದ್ಯಕೀಯ ಸಮಾಲೋಚನೆ, ಸ್ಕ್ಯಾನಿಂಗ್, ವೀರ್ಯಾಣು ಪರೀಕ್ಷೆ ಮತ್ತು ವೈದ್ಯಕೀಯ ಸಲಹೆ ನೀಡಲಾಗುತ್ತಿದೆ. ಮಕ್ಕಳಿಲ್ಲದ ದಂಪತಿಗೆ ನಮ್ಮ ಆಸ್ಪತ್ರೆಯಲ್ಲಿ ಮಗುವನ್ನು ಪಡೆಯುವ ಕನಸನ್ನು ನನಸು ಮಾಡುವುದರ ಜೊತೆಗೆ ನೋವು ರಹಿತ ಹೆರಿಗೆ ಸೌಲಭ್ಯ ಪಡೆದುಕೊಳ್ಳಬಹುದಾಗಿದೆ ಎಂದು ಹೇಳಿದರು.

ಮಕ್ಕಳಾಗದಿರುವುದಕ್ಕೆ ಹೆಂಗಸರಷ್ಟೇ ಕಾರಣ ಅಲ್ಲ, ಗಂಡಸರಲ್ಲೂ ಬಂಜೆತನ ಇರಲಿದೆ. ಆ ಬಗ್ಗೆ ಪರಿಶೀಲಿಸಿ ಸಲಹೆ ನೀಡಲಾಗುವುದು. ಮದುವೆ ಆಗಿ 1 ವರ್ಷ ಕಳೆದರೂ ಮಕ್ಕಳಾಗದೇ ಇದ್ದರೆ ವೈದ್ಯರನ್ನು ಸಂಪರ್ಕಿಸುವುದು ಸೂಕ್ತ. ಮಹಿಳೆಯರಿಗೆ ಹೃದಯದಲ್ಲಿ ಸಮಸ್ಯೆ ಇದ್ದರೆ ಗರ್ಭಿಣಿ ಆಗಬೇಕೋ, ಬೇಡವೋ ಎಂಬುದನ್ನು ಮೊದಲೇ ತಿಳಿಸಲಾಗುವುದು. ರಕ್ತ ಪರೀಕ್ಷೆ ಸೇರಿ ಅನೇಕ ಟೆಸ್ಟ್ ಉಚಿತವಾಗಿ ಮಾಡಿಕೊಡಲಾಗುವುದು ಎಂದರು.

ಮಕ್ಕಳ ತಜ್ಞೆ ಡಾ.ದಿವ್ಯಾ ಮಾತನಾಡಿ, ನಮ್ಮಲ್ಲಿ ನವಜಾತ ಶಿಶುಗಳ ತೀವ್ರ ನಿಗಾಘಟಕ ಇದೆ. ಮಕ್ಕಳ ಬೆಳವಣಿಗೆ, ಆರೈಕೆ, ಎತ್ತರ, ತೂಕದ ಬಗ್ಗೆ ಉಚಿತ ಸಲಹೆ ನೀಡಲು ಉಚಿತನವಾಗಿ ನ್ಯೂಟ್ರೇಷನ್ ಫ್ರೈಡೇ ಮಾಡಲು ಚಿಂತಿಸಲಾಗಿದೆ ಎಂದರು. ಆಡಳಿತಾಧಿಕಾರಿ ಪ್ರದೀಪ್ ಇದ್ದರು.

**ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ಜಿಲ್ಲೆ, ಹಾಸನ**

ಸಂಖ್ಯೆ:ಉನಿಹಾ/ಮಮಅಇ/OSC/ಬಾವಾಟೆಂ/ಪ್ರಕಟಣೆ/2025-26

ದಿನಾಂಕ:15.12.2025

**ಪತ್ರಿಕಾ ಪ್ರಕಟಣೆ**

'ಸಖಿ' ಒನ್ ಸ್ಟಾಪ್ ಸೆಂಟರ್, ಮಹಿಳಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ. ಈ ಕಛೇರಿಗೆ MARUTHI SWIFT DZIRE ವಾಹನವನ್ನು ಬಾಡಿಗೆಯ ಆಧಾರದ ಮೇಲೆ ಪಡೆಯಲು ಟೆಂಡರ್ ಕರೆಯಲಾಗಿದ್ದು, ದಿನಾಂಕ:29.12.2025 ರ ವರೆಗೆ ಅರ್ಜಿ ಪಡೆದು ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ದೂರವಾಣಿ ಸಂಖ್ಯೆ: 08172-267218 ಸಂಪರ್ಕಿಸಬಹುದು.

ಸಹಿ/-ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ.

ವಾಸಾಸಂಇ/ಹಿಸನಿ/ಹಾಸನ/857/ಕೆಎಸ್‌ಎಂಸಿಎ/2025-26

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019